ಶುಕ್ರವಾರ, ಸೆಪ್ಟೆಂಬರ್ 9, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓಣಂ ಹಬ್ಬ

ಕೇರಳದ ಎರ್ನಾಕುಳಂನ ತ್ರಿಕ್ಕಾಕರ ದೇವಾಲಯದಲ್ಲಿ ಓಣಂ ಹಬ್ಬದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಬಾಲಕನೊಬ್ಬ ವಾಮನ ವೇಷ ತೊಟ್ಟು ಪಾಲ್ಗೊಂಡಿದ್ದ



ಶುಕ್ರವಾರ, ಸೆಪ್ಟೆಂಬರ್ 9, 2022 | ₹ 6.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani



ಮಿಸ್ ದಿವಾ ಯೂನಿವರ್ಸ್

ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ 2022ನೇ ಸಾಲಿನ 'ಲಿವಾ ಮಿಸ್ ದಿವಾ ಯೂನಿವರ್ಸ್' ದಿವಿತಾ ರೈ ಅವರು ಪಾಲ್ಗೊಂಡಿದ್ದರು

ಬಾಳ್ಗೆ ಭೂಮಂಡಲ

ಗುರುವಿನ ಆಶೀರ್ವಾದ

ಬಾಳ್ಗೆ ಸಮೃದ್ಧಿಯೊಂದಿಗೆ

India's Most Attractive Brands — India's Most Attractive Dhotis Brands

Power of Trust — India's Most Trusted Dhotis Brands

Power of Desire — India's Most Desire Dhotis Brands

CELEBRATING 40 YEARS

OF TRADITION WOVEN BY TRUST

RAMRAJ ©

SINCE 1983

DHOTI
வேட்டி
চুৰিয়া
ধুতি
ધોતિયુ
धोती
ಧೋತ್ರ
മുണ്ട്
धोतर
ଧୋତି
ਚਾਦਰਾ
పంచ
ధోవతి
دھوتی

ಇಂದು ನಲವತ್ತನೇ ವರ್ಷದಲ್ಲಿ ಹೆಜ್ಜೆಯೂರುತ್ತಿರುವ ರಾಮ್‌ರಾಜ್ ಕಾಟನ್ ಸಂಸ್ಥೆಯು, ಉನ್ನತವಾದ ಧ್ಯೇಯವನ್ನು ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿರುವ ಒಂದು ಚಳವಳಿಯಾಗಿದೆ.

ನಮ್ಮ ಸಂಸ್ಥೆಯ ಧ್ಯೇಯ ನೇಕಾರರ ಜೀವನ ಮಟ್ಟವನ್ನು ಹೆಚ್ಚಿಸಿ, ಪಾರಂಪಾರಿಕವಾದ ಪಂಚೆಯ ಹಿರಿಮೆಯನ್ನು ಮತ್ತೆ ಹೆಚ್ಚಿಸುವುದೇ ಆಗಿದೆ.

ಈ ಉನ್ನತವಾದ ಧ್ಯೇಯವನ್ನು ಸಾಧಿಸಲು ನೇಕಾರರು, ಡೀಲರ್‌ಗಳು, ನೌಕರರು, ಸಿಬ್ಬಂದಿಗಳು, ಮಾರಾಟಗಾರರು, ಗ್ರಾಹಕರು ಹೀಗೆ ಎಲ್ಲರೂ ಒಟ್ಟುಗೂಡಿ ಕಾರ್ಯ ನಿರ್ವಹಿಸುತ್ತಿದ್ದೇವೆ.

ಮನುಷ್ಯನ ಮಾನ ಕಾಪಾಡುವ ನೇಕಾರರ ಜೀವನದಲ್ಲಿ ನಂಬಿಕೆ ಎನ್ನುವ ಬೆಳಕನ್ನು ಹಚ್ಚಿ, ಅವರ ದುಡಿಮೆಗೆ ತಕ್ಕ ಸಂಭಾವನೆಯನ್ನು ನೀಡಿ ಅವರ ಜೀವನಮಟ್ಟವನ್ನು ಹೆಚ್ಚಿಸಿದ್ದೇವೆ.

ಇಂದು ಪಂಚೆ ಉಡುವುದನ್ನು ಒಂದು ಗೌರವವನ್ನಾಗಿಸಿ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಎಲ್ಲರೂ ಪಂಚೆ ಉಟ್ಟುಕೊಂಡು ಹೆಮ್ಮೆಯಿಂದ ಓಡಾಡುವಂತೆ ಮಾಡಿ, ಪಂಚೆಯನ್ನು ಒಂದು ಗೌರವಾನ್ವಿತ ಉಡುಗೆಯನ್ನಾಗಿ ಪರಿವರ್ತಿಸಿದ್ದೇವೆ.

ಭಾರತದಾದ್ಯಂತ ಪಾರಂಪಾರಿಕ ಉಡುಗೆಯಾದ ಪಂಚೆಯನ್ನು ಭಾರತೀಯರ ಗುರುತನ್ನಾಗಿ ಪರಿವರ್ತಿಸಿ, ಅದಕ್ಕೆ ಅತಿದೊಡ್ಡ ಅಂಗೀಕಾರವನ್ನು ಈ ಸಮಾಜದಲ್ಲಿ ದೊರಕಿಸಿಕೊಟ್ಟು ಪಂಚೆಯ ಮೌಲ್ಯವನ್ನು ಎಲ್ಲರಿಗೂ ಪರಿಚಯಿಸಿದ್ದೇವೆ.


ನಮ್ಮ ಸಂಸ್ಥೆಗೆ ಹಲವಾರು ಪ್ರಶಸ್ತಿಗಳು, ಪ್ರಶಂಸೆಗಳು ದೊರಕಿದ್ದರೂ, 40 ವರ್ಷಗಳ ನಮ್ಮ ಸಾಧನೆಯೆಂದು ಭಾವಿಸುವುದು ಗ್ರಾಹಕರಾದ ನಿಮ್ಮ ನಂಬಿಕೆಯನ್ನು ಪಡೆದುಕೊಂಡಿರುವುದನ್ನೇ!

ನಿಮ್ಮೆಲ್ಲರ ಪ್ರೀತಿ ವಿಶ್ವಾಸಗಳೊಂದಿಗೆ ಈ ಯಶಸ್ಸಿನ ಪ್ರಯಾಣವನ್ನು ನಾವು ಮುಂದುವರೆಸುತ್ತೇವೆ...

ಸಾವಿರ ಸಾವಿರ ಕೃತಜ್ಞತೆಗಳು...

SCAN QR CODE FOR STORE LOCATION

ಬಾಂಧವ್ಯಗಳು ಹೆಚ್ಚಲು...



K.R. Nagarajan

Founder & Chairman

RAMRAJ ©

COTTON GROUP



Follow us : ramrajcottonofficial | ramrajcotton | ramrajcottonmedia | www.ramrajcotton.in

ನೀಟ್: ಶುಭಾಗೆ 17ನೇ ರ‍್ಯಾಂಕ್


ಶುಭಾ ಕೌಶಿಕ್


ಬಿ.ವಿಶಾಲ್

ಬೆಂಗಳೂರು: 2022ನೇ ಸಾಲಿನ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಚೈತನ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಶುಭಾ ಕೌಶಿಕ್ 17ನೇ ಮತ್ತು ಬಿ.ವಿಶಾಲ್ 96ನೇ ರ‍್ಯಾಂಕ್ ಪಡೆದಿದ್ದಾರೆ.

281, 355, 674, 813, 947ನೇ ರ‍್ಯಾಂಕ್‌ಗಳನ್ನು ಇದೇ ಸಂಸ್ಥೆಯ ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ರ‍್ಯಾಂಕ್ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೋಪಣ್ಣ ಅಭಿನಂದನೆ ಸಲ್ಲಿಸಿದ್ದಾರೆ.

ನಾಳೆ ಉಪನ್ಯಾಸ

ಬೆಂಗಳೂರು: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಸೆಪ್ಟೆಂಬರ್ 10ಕ್ಕೆ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಮಾಧ್ಯಮ ಸಲಹೆಗಾರ ಡಾ. ಸಂಜಯ್ ಬಾರು ಅವರ ಉಪನ್ಯಾಸ ಸರಣಿಯನ್ನು ಆಯೋಜಿಸಿದೆ. 'ಭಾರತ ಮತ್ತು ಜಗತ್ತು ಇಂದು: ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಸವಾಲುಗಳು' ಕುರಿತು ಬ್ರಂಟನ್ ರಸ್ತೆಯ ಮದರ್ ಟೆಕ್ಲಾ ಆಡಿಟೋರಿಯಂನಲ್ಲಿ ಅವರು ಉಪನ್ಯಾಸ ನೀಡಲಿದ್ದಾರೆ.

24 ಮಂದಿಗೆ ಚಿನ್ನ • ವಿವಿಧ ವಿಭಾಗಗಳಲ್ಲಿ 3,495 ವಿದ್ಯಾರ್ಥಿಗಳಿಗೆ ಪದವಿ

ಪಿಇಎಸ್ ವಿ.ವಿ ಘಟಿಕೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಇಎಸ್ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ಶುಕ್ರವಾರ (ಸೆ.9) ನಡೆಯಲಿದ್ದು, 3,495 ವಿದ್ಯಾರ್ಥಿಗಳು ಈ ಬಾರಿ ಪದವಿ ಪಡೆಯಲಿದ್ದಾರೆ' ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಳಿಗ್ಗೆ 11 ಗಂಟೆಗೆ ವಿಶ್ವವಿದ್ಯಾಲಯದ ಪ್ರೊ.ಎಂ.ಆರ್.ಡಿ ಕಟ್ಟಡದ ಸಭಾಂಗಣದಲ್ಲಿ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಕೇಂದ್ರದ ಕೌಶಲಾಭಿವೃದ್ಧಿ ಹಾಗೂ ಉದ್ದಮಶೀಲತೆ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಸಹಕುಲಾಧಿಪತಿ ಪ್ರೊ. ಡಿ.ಜವಾಹರ್ ಅವರು ಘಟಿಕೋತ್ಸವದ ಪ್ರಮಾಣ ವಚನ ಬೋಧಿಸಲಿದ್ದಾರೆ. ವಿವಿಧ ವಿಭಾಗಗಳಲ್ಲಿ ರ‍್ಯಾಂಕ್ ಪಡೆದ 92 ಅಭ್ಯರ್ಥಿಗಳಲ್ಲಿ, 24 ಮಂದಿಗೆ ಚಿನ್ನದ ಪದಕ ನೀಡಿ ಪುರಸ್ಕರಿಸಲಾಗುವುದು. ನಾಲ್ವರಿಗೆ ಚಿನ್ನ ಲೇಪಿತ ಬೆಳ್ಳಿ ಪದಕ ಹಾಗೂ ಉಳಿದವರಿಗೆ ಬೆಳ್ಳಿ ಪದಕ ನೀಡಲಾಗುವುದು' ಎಂದರು.


ವಿವಿಧ ವಿಭಾಗಗಳಲ್ಲಿ ರ‍್ಯಾಂಕ್ ಪಡೆದವರ ಪಟ್ಟಿಯನ್ನು ಪ್ರೊ.ಎಂ.ಆರ್. ದೊರೆಸ್ವಾಮಿ ಬಿಡುಗಡೆ ಮಾಡಿದರು. ವಿಶ್ವವಿದ್ಯಾಲಯದ ಕುಲಪತಿ ಡಾ. ಸೂರ್ಯಪ್ರಸಾದ್ ಜೆ. ಹಾಗೂ ಡಾ.ಕೆ.ಎಸ್.ಶ್ರೀಧರ್ ಇದ್ದಾರೆ

'ರ‍್ಯಾಂಕ್ ಪಡೆದವರಲ್ಲಿ 52 ಮಂದಿ ವಿದ್ಯಾರ್ಥಿನಿಯರಾಗಿದ್ದಾರೆ. ಈ ಬಾರಿ ನಾಲ್ವರಿಗೆ ಪಿಎಚ್.ಡಿ ಪ್ರದಾನ ಮಾಡಲಾಗುತ್ತಿದೆ. ದಿವ್ಯಾ ಜೋಸೆಫ್ ಪೆರೇರಾ, ಸಂತಮೀನಾ ಎಸ್., ರಾಜೇಂದ್ರ ಪ್ರಸಾದ್ ಕೆ.ಎಸ್. ಹಾಗೂ ಸುಚಿತ್ರಾ ಸಕ್ಸೆನಾ ಅವರು ಪಿಎಚ್.ಡಿ ಪಡೆಯಲಿದ್ದಾರೆ' ಎಂದು ಹೇಳಿದರು.

'ಉದ್ಯೋಗ ಆಯ್ಕೆಗಾಗಿ ಕ್ಯಾಂಪಸ್‌ನಲ್ಲೇ ನಡೆಸುವ ಸಂದರ್ಶನಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. 2022ರಲ್ಲಿ ಬಿ.ಟೆಕ್ ಪದವಿ ಪಡೆದವರಲ್ಲಿ 1,496 ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನಕ್ಕೆ ಅರ್ಹತೆ ಹೊಂದಿದ್ದರು. ಅವರಲ್ಲಿ 1,329 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿದೆ. 268 ಕಂಪನಿಗಳು ಭೇಟಿ ನೀಡಿ ವಿದ್ಯಾರ್ಥಿಗಳನ್ನು ನೇಮಿಸಿಕೊಂಡಿವೆ. ಕೆಲವು ವಿದ್ಯಾರ್ಥಿಗಳು ವರ್ಷಕ್ಕೆ ಗರಿಷ್ಠ ₹ 60 ಲಕ್ಷದಷ್ಟು ವೇತನ ಪಡೆದಿದ್ದಾರೆ' ಎಂದರು.

ಕುಲಸಚಿವ ಡಾ.ಕೆ.ಎಸ್.ಶ್ರೀಧರ್, '2023ರಲ್ಲಿ ಪದವಿ ಪಡೆಯುವ ಬಿ.ಟೆಕ್ ವಿದ್ಯಾರ್ಥಿಗಳಿಗೂ ಕ್ಯಾಂಪಸ್ ಸಂದರ್ಶನವನ್ನು 2022ರ ಆಗಸ್ಟ್ 1ರಿಂದ ನಡೆಸಲಾಗುತ್ತಿದೆ. ಈ ಸಂದರ್ಶನಕ್ಕೆ 1,543 ವಿದ್ಯಾರ್ಥಿಗಳು ಅರ್ಹತೆ ಹೊಂದಿದ್ದು, ಈಗಾಗಲೇ 375 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿದೆ. 54 ಕಂಪನಿಗಳು ಈವರೆಗೆ ಕ್ಯಾಂಪಸ್ ಸಂದರ್ಶನ ನಡೆಸಿವೆ. ಕೆಲವು ವಿದ್ಯಾರ್ಥಿಗಳು ವರ್ಷಕ್ಕೆ ಗರಿಷ್ಠ ₹ 54 ಲಕ್ಷದಷ್ಟು ವೇತನ ಪಡೆದಿದ್ದಾರೆ' ಎಂದು ಹೇಳಿದರು.

'ಸರ್ಕಾರಿ ಶಾಲೆಗಳ ಬಲವರ್ಧನೆ'

'ವಿಶ್ವವಿದ್ಯಾಲಯದ ಬೂಟ್‌ಸ್ಟ್ರ್ಯಾಪ್ ಸಾಮಾಜಿಕ ಘಟಕವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಬೆಳೆಸಲು ಸಹಕಾರಿಯಾಗಿದೆ. ಈ ಘಟಕದ ಮೂಲಕ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಶ್ರಮಿಸಲಾಗುತ್ತಿದೆ. ಈ ವರ್ಷ ಆಲಹಳ್ಳಿ, ವಳಗೆರಹಳ್ಳಿ, ಸಕಲಾವರ ಹಾಗೂ ಮಂಟಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ಶಾಲೆಗಳ ಕಟ್ಟಡಗಳಿಗೆ ನಮ್ಮ ವಿಶ್ವವಿದ್ಯಾಲಯದ 150 ವಿದ್ಯಾರ್ಥಿಗಳು ಬಣ್ಣ ಬಳಿದಿದ್ದಾರೆ. ಕಳೆದ ಏಳು ವರ್ಷಗಳಿಂದ ಈ ಕಾರ್ಯ ಮಾಡಲಾಗುತ್ತಿದ್ದು, 25ಕ್ಕೂ ಅಧಿಕ ಶಾಲೆಗಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಕಾರ್ಯವನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸಲಾಗುವುದು' ಎಂದು ಪ್ರೊ.ಎಂ.ಆರ್. ದೊರೆಸ್ವಾಮಿ ವಿವರಿಸಿದರು.

ಮುಖ್ಯಾಂಶಗಳು

- ಒಟ್ಟು 92 ವಿದ್ಯಾರ್ಥಿಗಳಿಗೆ ರ‍್ಯಾಂಕ್
- ರ‍್ಯಾಂಕ್ ಪಡೆದವರಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ
- ನಾಲ್ವರು ವಿದ್ಯಾರ್ಥಿಗಳಿಗೆ ಪಿಎಚ್.ಡಿ

67 ವಿದ್ಯಾರ್ಥಿಗಳಿಗೆ 133 ಚಿನ್ನದ ಪದಕ

ಕೃಷಿ ವಿ.ವಿ 56ನೇ ಘಟಿಕೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 56ನೇ ಘಟಿಕೋತ್ಸವ ಸಮಾರಂಭ ಸೆಪ್ಟೆಂಬರ್ 9ರಂದು (ಶುಕ್ರವಾರ) ಬೆಳಿಗ್ಗೆ 10ಕ್ಕೆ ವಿ.ವಿ.ಯ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ನಡೆಯಲಿದೆ'.

'ಈ ಬಾರಿ ಒಟ್ಟು 1,144 ವಿದ್ಯಾರ್ಥಿಗಳು ವಿವಿಧ ಪದವಿಗಳನ್ನು ಪಡೆಯಲಿದ್ದಾರೆ. ಇವರಲ್ಲಿ ಸ್ನಾತಕ 751, ಸ್ನಾತಕೋತ್ತರ 304 ಹಾಗೂ 89 ವಿದ್ಯಾರ್ಥಿಗಳು ಡಾಕ್ಟೋರಲ್ ಪದವಿಗಳನ್ನು ಪಡೆಯಲಿದ್ದಾರೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಒಟ್ಟು 133 ಚಿನ್ನದ ಪದಕಗಳನ್ನು 67 ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವುದು. ಇದರಲ್ಲಿ 47 ವಿದ್ಯಾರ್ಥಿನಿಯರಿಗೆ 109 ಚಿನ್ನದ ಪದಕಗಳು, 18 ವಿದ್ಯಾರ್ಥಿಗಳಿಗೆ 24 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. 129 ವಿದ್ಯಾರ್ಥಿನಿಯರಿಗೆ 4 ವಿದ್ಯಾರ್ಥಿಗಳಿಗೆ ದಾನಿಗಳ ಚಿನ್ನದ ಪದಕ ಪ್ರಶಸ್ತಿ, ಪ್ರಮಾಣಪತ್ರ ಪ್ರದಾನ ಮಾಡಲಾಗುತ್ತದೆ' ಎಂದು ವಿವರಿಸಿದರು.

'ನವದೆಹಲಿ ಕೃಷಿ ವಿಜ್ಞಾನ ಪ್ರಗತಿ ಟ್ರಸ್ಟ್ ಅಧ್ಯಕ್ಷರಾದ ಡಾ.ಆರ್.ಎಸ್. ಪರೋಡ ಅವರು ಘಟಿಕೋತ್ಸವ ಭಾಷಣ ಮಾಡುವರು. ವಿಶ್ವವಿದ್ಯಾಲಯದ ಕುಲಾಧಿಪತಿ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕೃಷಿ ಸಚಿವ ಬಿ.ಸಿ. ಪಾಟೀಲ್ ಉಪಸ್ಥಿತಿರಿರಲಿದ್ದಾರೆ' ಎಂದು ಹೇಳಿದರು.

ರೈತ ಎನ್.ಸಿ. ಪಟೇಲ್‌ಗೆ ಗೌರವ ಡಾಕ್ಟರೇಟ್

ಪ್ರಗತಿಪರ ರೈತ ಎನ್.ಸಿ. ಪಟೇಲ್ ಅವರಿಗೆ 56ನೇ ಘಟಿಕೋತ್ಸವದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದು ಎಂದು ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಮಾಹಿತಿ ನೀಡಿದರು.

75 ಎಕರೆ ಜಮೀನಿನಲ್ಲಿ ಖುಷ್ಕಿ ಮತ್ತು ಕೊಳವೆಬಾವಿ ಆಶ್ರಯದಡಿ ಆಧುನಿಕ ನೀರಾವರಿ, ತಾಂತ್ರಿಕತೆ ಮತ್ತು ಸುಧಾರಿತ ಬೇಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ವಿವಿಧ ಆಹಾರ, ದ್ವಿದಳ ಧಾನ್ಯ, ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರೆಡ್ ಗ್ಲೋಬ್ ದ್ರಾಕ್ಷಿ, ಬೆಂಗಳೂರು ನೀಲಿ ದ್ರಾಕ್ಷಿ, ಬೆಣ್ಣೆಹಣ್ಣು, ಪಟೇಲ್ ಪಸಂದ್ ಮಾವಿನ ತಳಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಇಂತಹ ಪ್ರತಿಭಾವಂತ, ಚಿಂತನಶೀಲ ರೈತ ವಿಜ್ಞಾನಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು ಎಂದರು.

ವಾರ್ಡ್ ಮೀಸಲು: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಜಯನಗರ ಮತ್ತು ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳ ಮರು ವಿಂಗಡಣೆ ಅಧಿಸೂಚನೆ ಪ್ರಶ್ನಿಸಲಾದ ಅರ್ಜಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಶಾಸಕರಾದ ಸೌಮ್ಯಾ ರೆಡ್ಡಿ ಮತ್ತು ಬಿ.ಝಡ್. ಜಮೀರ್ ಅಹ್ಮದ್ ಖಾನ್ ಸೇರಿ 10ಕ್ಕೂ ಹೆಚ್ಚು ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದ ಅಡ್ವೋಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ನಾನು ದೆಹಲಿಯಲ್ಲಿರುವ ಕಾರಣ ವಾದ ಮಂಡನೆಗೆ ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಈ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು ಶುಕ್ರವಾರಕ್ಕೆ (ಸೆ.09) ಮುಂದೂಡಿತು.

'ವಾರ್ಡ್ ಮರು ವಿಂಗಡಣೆ ವೇಳೆ ಜನಸಂಖ್ಯೆ ಪ್ರಮಾಣವನ್ನು ಪರಿಗಣಿಸುವಲ್ಲಿ ಸರ್ಕಾರ ತರತಮ ತೋರಿದೆ. ಬಿಬಿಎಂಪಿ ಕಾಯ್ದೆ-2020ರ ಕಲಂ 7 ಅನ್ನು ಉಲ್ಲಂಘಿಸಲಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.



ಸೇಂಟ್ ಮೇರಿ ರಥೋತ್ಸವ

ಮೀನಾಕ್ಷಿ ಕೋವಿಲ್ ರಸ್ತೆಯಲ್ಲಿ ಸಂಚರಿಸಿದ ಸೇಂಟ್ ಮೇರಿ ರಥೋತ್ಸವದ ವೇಳೆ ಸಾವಿರಾರು ಜನರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಸಂಚಾರ ದಟ್ಟಣೆ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರ: ಸಿ.ಎಂ

ಬೆಂಗಳೂರು: ಬೆಂಗಳೂರು ನಗರದ ಸಂಚಾರ ದಟ್ಟಣೆಯ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರ ರಚಿಸಲಾಗುವುದು. ಮುಂದಿನ ಅಧಿವೇಶನದಲ್ಲೇ ಮಸೂದೆ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಜತೆ ಚರ್ಚೆ ನಡೆಸಿದ ನಂತರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ, ಲೋಕೋಪಯೋಗಿ ಇಲಾಖೆಗಳು ನಗರದಲ್ಲಿ ಹಲವು ಕಾಮಗಾರಿಗಳನ್ನು ಕೈಗೊಂಡಿವೆ. ಸಮಗ್ರ 'ಮಾಸ್ಟರ್ ಪ್ಲಾನ್' ರೂಪಿಸಿದರೆ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ. ಈ ಎಲ್ಲ ಸಂಸ್ಥೆಗಳ ಜತೆಗೆ ರೈಲ್ವೆ, ಮೆಟ್ರೊ ಒಳಗೊಂಡಂತೆ ಬೆಂಗಳೂರು ಹಾಗೂ ಬೆಂಗಳೂರು ಸುತ್ತಮುತ್ತಲಿನ ಸಂಚಾರ ದಟ್ಟಣೆಯ ನಿರ್ವಹಣೆಗೆ ಪ್ರಾಧಿಕಾರ ರಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಒಂದೇ ಪಿಲ್ಲರ್‌ನಲ್ಲಿ ಬಹು ಸಾರಿಗೆ: ನಗರದ ವಿವಿಧ ಬಾಗಗಳಲ್ಲಿ ಮೆಟ್ರೊ, ಫ್ಲೈ ಓವರ್ ಹಾಗೂ ರಸ್ತೆಗೆ ಬಳಕೆಯಾಗುವಂತಹ ಬಹೂಪಯೋಗಿ ಪಿಲ್ಲರ್ ನಿರ್ಮಿಸಲು ನಿರ್ಧರಿಸಲಾಗಿದೆ. ಮೂರು ಅಂತಸ್ತುಗಳಲ್ಲಿ ಸಾರಿಗೆ ವ್ಯವಸ್ಥೆ ಬಳಸಿಕೊಂಡರೆ ಭೂ ಸ್ವಾಧೀನದ ಪ್ರಮಾಣ ಕಡಿಮೆಯಾಗುವುದು. ಈ ಕುರಿತು ಅಂತರರಾಷ್ಟ್ರೀಯ ತಜ್ಞರ ಜತೆ ಚರ್ಚಿಸಲಾಗುವುದು ಎಂದರು.

ವರ್ತುಲ ರಸ್ತೆಯ ಮಧ್ಯದಲ್ಲಿ ಸಣ್ಣ ರಿಂಗ್ ರಸ್ತೆಗಳನ್ನು ನಿರ್ಮಿಸುವ ಚಿಂತನೆ ಇದೆ. ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಪುಣೆ-ಬೆಂಗಳೂರು ಹೆದ್ದಾರಿ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ತಕ್ಷಣ ಸರಿಪಡಿಸಲು ಗಡ್ಕರಿ ಅವರು ಸೂಚಿಸಿದ್ದಾರೆ.

ಅಪಘಾತ: ರಾತ್ರಿ ಪ್ರಯಾಣಕ್ಕೆ ನಿರ್ಬಂಧ

ಬೆಂಗಳೂರು: 'ಸಿಐಡಿ ಅಧಿಕಾರಿಗಳು, ಸಿಬ್ಬಂದಿ ಸುರಕ್ಷತೆ ದೃಷ್ಟಿಯಿಂದ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆ ಅವಧಿಯಲ್ಲಿ ಯಾವುದೇ ವಾಹನದಲ್ಲಿ ಪ್ರಯಾಣಿಸಬಾರದು' ಎಂದು ಸಿಐಡಿ ಡಿಜಿಪಿ ಸೂಚನೆ ನೀಡಿದ್ದಾರೆ.

ಕರ್ತವ್ಯದ ವೇಳೆ, ಕರ್ತವ್ಯದಿಂದ ಬಿಡುಗಡೆ ಹೊಂದಿದ ಸಂದರ್ಭದಲ್ಲಿ ಪೊಲೀಸರು ರಾತ್ರಿ ವೇಳೆ ಹೆಚ್ಚು ಸಂಚರಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಅಪಘಾತಗಳು ಸಂಭವಿಸುತ್ತಿದ್ದು, ಸಾವು–ನೋವುಗಳೂ ಘಟಿಸುತ್ತಿವೆ. ಇದೇ ಕಾರಣಕ್ಕೆ ರಾತ್ರಿ ಪ್ರಯಾಣಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಗೊತ್ತಾಗಿದೆ. ಸೂಚನೆ ಆದೇಶವನ್ನು ಸಿಐಡಿಯ ಎಲ್ಲ ಡಿವೈಎಸ್ಪಿಗಳು, ಇನ್‌ಸ್ಪೆಕ್ಟರ್‌ಗಳಿಗೆ ಕಳುಹಿಸಲಾಗಿದೆ.

'ಬಂದೋಬಸ್ತ್, ಚುನಾವಣೆ ಕರ್ತವ್ಯ, ತನಿಖೆ ಹಾಗೂ ಇನ್ನಿತರ ಕರ್ತವ್ಯಕ್ಕೆ ನಿಯೋಜನೆಗೊಳ್ಳುವವರು ಯಾವುದೇ ವಾಹನದಲ್ಲಿ ರಾತ್ರಿ ವೇಳೆ ಪ್ರಯಾಣಿಸಬಾರದು. ಕರ್ತವ್ಯದಲ್ಲಿ ಇಲ್ಲದಿದ್ದರೂ ಸುರಕ್ಷತೆ ದೃಷ್ಟಿಯಿಂದ ಯಾವುದೇ ಕಾರಣಕ್ಕೂ ರಾತ್ರಿ ಪ್ರಯಾಣಿಸಬಾರದು' ಎಂದೂ ಡಿಜಿಪಿ ಸೂಚಿಸಿದ್ದಾರೆ.







ಶುಕ್ರವಾರ, ಸೆಪ್ಟೆಂಬರ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 250 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ರಾಜಕೀಯದ ಬದಲು ತೆರೆಯ ಮೇಲಷ್ಟೇ ಬಣ್ಣ ಹಚ್ಚಿ ಕಾಣಿಸುತ್ತೇನೆ ಅಂದಿದ್ದಾರೆ ಝೈದ್ ಖಾನ್



ಆಳ-ಅಗಲ
ಆತ್ಮಹತ್ಯೆ ಪರಿಹಾರವಲ್ಲ, ಅದುವೇ ಸಮಸ್ಯೆ

ಭಾರತ -ಚೀನಾ ಸೇನಾ ವಾಪಸಾತಿ ಪ್ರಕ್ರಿಯೆ ಆರಂಭ 8

‘ಟರ್ಬನ್–ಹಿಜಾಬ್‌ಗೆ ಹೋಲಿಕೆ ಸಲ್ಲ’ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,688 ▲	17,798 ▲	₹52,300 (ಬೆಂಗಳೂರು)	₹55,400 (ಬೆಂಗಳೂರು)	79.69 ▲





ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಅವಾಂತರ

ದಶಪಥ ಲೋಪ: ಸಿಎಂ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯಗಳ ಮಹತ್ವಾಕಾಂಕ್ಷಿ ಯೋಜನೆಯಾದ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿಯಲ್ಲಿ ಸಾಕಷ್ಟು ಲೋಪಗಳಿವೆ ಎಂದು ವಿರೋಧ ಪಕ್ಷಗಳು, ಸಾರ್ವಜನಿಕರು ಆಕ್ಷೇಪ ಎತ್ತಿದ್ದ ಬೆನ್ನಲ್ಲೇ, ಈ ಕಾಮಗಾರಿಯಿಂದಾದ ಅವಾಂತರದ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ದೂರು ಕೊಟ್ಟಿದ್ದಾರೆ.

‘ರಸ್ತೆ, ಚರಂಡಿ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು ಗುತ್ತಿಗೆದಾರರಿಗೆ ಖಡಕ್ ಸೂಚನೆ ನೀಡಬೇಕು’ ಎಂದೂ ಅವರು ಅಹವಾಲು ಸಲ್ಲಿಸಿದ್ದಾರೆ.

ಕೇಂದ್ರ ಭೂಸಾರಿಗೆ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗುರುವಾರ ಇಲ್ಲಿ ಆಯೋಜಿಸಿದ್ದ ‘ಮಂಥನ’ ಕಾರ್ಯಕ್ರಮದ ವೇಳೆ ಬೊಮ್ಮಾಯಿ ಅವರು ಗಡ್ಕರಿ ಜತೆ ಪ್ರತ್ಯೇಕವಾಗಿ ಈ ಕುರಿತು ಮಾತುಕತೆ ನಡೆಸಿದರು. ಈ ಹೆದ್ದಾರಿಯ ಕಾಮಗಾರಿಗಳ ಬಗ್ಗೆ ಎದ್ದಿರುವ ತಕರಾರುಗಳ ಕುರಿತು ಗಮನ ಸೆಳೆದರು.

‘ಕಾಮಗಾರಿ ಗುಣಮಟ್ಟದಲ್ಲಿ ಯಾವುದೇ ರಾಜೀ ಇಲ್ಲ. ಲೋಪಗಳನ್ನು ಸರಿಪಡಿಸಿ, ಅತ್ಯುತ್ತಮ ಹೆದ್ದಾರಿಯನ್ನೇ ನಿರ್ಮಿಸುತ್ತೇವೆ’ ಎಂದು ಗಡ್ಕರಿ ಭರವಸೆ ನೀಡಿದರು.

‘ಈ ಹೆದ್ದಾರಿಯು ರಾಜ್ಯದ ಪ್ರತಿಷ್ಠಿತ ಯೋಜನೆಯಾಗಿದೆ. ಹೆದ್ದಾರಿ ನಿರ್ಮಾಣದಲ್ಲಿ ಯಾವುದೇ ಲೋಪವಾಗಿದ್ದರೂ ಅದನ್ನು ಈಗಲೇ ಸರಿಪಡಿಸಬೇಕು. ಇತ್ತೀಚೆಗೆ ಬಿದ್ದ ಮಳೆಯಿಂದ ಕೆಲವು ಸಮಸ್ಯೆಗಳು ಬೆಳಕಿಗೆ ಬಂದಿವೆ. ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಅಗತ್ಯ ಬದಲಾವಣೆಗಳನ್ನು ಮಾಡಬೇಕು. ಈ ಬಗ್ಗೆ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಬೇಕು’ ಎಂದು ಬೊಮ್ಮಾಯಿ ಅವರು ಗಡ್ಕರಿಗೆ ಅವರಿಗೆ ಹೇಳಿದರು.



ಈಚೆಗೆ ಸುರಿದ ಭಾರಿ ಮಳೆಗೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ರಾಮನಗರ ಜಿಲ್ಲೆಯ ವಡೇರಹಳ್ಳಿಯಲ್ಲಿ ಬಳಿ ಜಲಾವೃತವಾಗಿತ್ತು

ಹೆದ್ದಾರಿ ಬದಿ ‘ಟ್ರೀ ಬ್ಯಾಂಕ್’

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಸಹಯೋಗದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಎರಡೂ ಕಡೆಗಳಲ್ಲಿ 80 ಲಕ್ಷ ಸಸಿಗಳನ್ನು ಬೆಳೆಸಲು ‘ಟ್ರೀ ಬ್ಯಾಂಕ್’ ಯೋಜನೆ ರೂಪಿಸಲಾಗಿದೆ. ಭಾರತದ ಹಸಿರು ಪ್ರದೇಶದ ವಿಸ್ತಾರಕ್ಕೆ ಕೈಜೋಡಿಸಲಾಗುವುದು. ಆ ಮೂಲಕ ಆಮ್ಲಜನಕಯುಕ್ತ ಪ್ರಯಾಣಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಸಚಿವ ಗಡ್ಕರಿ ವಿವರಿಸಿದರು.

> ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸ್ಥಳೀಯರಿಗೆ ಹಾಗೂ ರೈತರಿಗೆ ತೊಂದರೆಯಾಗದಂತೆ ಸೇವಾ ಮತ್ತು ಸಂಪರ್ಕ ರಸ್ತೆಗಳನ್ನು ನಿರ್ಮಿಸಲು ಕೇಂದ್ರ ಸಚಿವರು ಸಮ್ಮತಿಸಿದ್ದಾರೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ


ಒಳಚರಂಡಿಗೆ ವ್ಯವಸ್ಥೆ: ‘ಎಕ್ಸ್‌ಪ್ರೆಸ್ ಹೆದ್ದಾರಿಯ ಉದ್ದಕ್ಕೂ ಎರಡೂ ಬದಿಗಳಲ್ಲಿ ಮಳೆ ನೀರಿನ ಒಳಚರಂಡಿ ವ್ಯವಸ್ಥೆಯಲ್ಲಿ ತೊಡಕುಗಳಿವೆ. ಇತ್ತೀಚಿನ ಮಳೆಯಿಂದ ಇದು ಗೊತ್ತಾಗಿದೆ. ಎಲ್ಲೆಲ್ಲಿ ನೀರು ನಿಂತಿದೆ. ಭವಿಷ್ಯದಲ್ಲಿ ಎಲ್ಲೆಲ್ಲಿ ನೀರು ನಿಂತು ಸಮಸ್ಯೆಗಳು ಸೃಷ್ಟಿಯಾಗಬಹುದು ಎಂಬುದನ್ನು ಅಂದಾಜು ಮಾಡಿ ಅದಕ್ಕೆ ಪೂರಕವಾಗಿ ಒಳಚರಂಡಿ ವ್ಯವಸ್ಥೆಗೆ ಹೊಸ ಯೋಜನೆಯನ್ನೇ ರೂಪಿಸಿ, ಜಾರಿಗೊಳಿಸಬೇಕು’ ಎಂದು ಗಡ್ಕರಿ ಅಧಿಕಾರಿಗಳಿಗೆ ಸೂಚಿಸಿದರು.

‘ಉಳಿದಂತೆ ಯೋಜನೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡುವುದಿಲ್ಲ. ಆದರೆ, ಗ್ರಾಮಸ್ಥರ ಕೋರಿಕೆಯ ಮೇರೆಗೆ ಅಲ್ಲಲ್ಲಿ ಪ್ರವೇಶ ಮತ್ತು ನಿರ್ಗಮನಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯವಸ್ಥೆ ಮಾಡಿಕೊಡಲಿದೆ’ ಎಂದೂ ಅವರು ಭರವಸೆ ನೀಡಿದರು.

2B ಪುಟ ನೋಡಿ

ನೀಟ್: ರಾಜ್ಯದ 72,262 ವಿದ್ಯಾರ್ಥಿಗಳು ಅರ್ಹ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ರಾಜ್ಯದ 72,262 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.



ಹೃಷಿಕೇಶ್

ರಾಜ್ಯದಿಂದ 1,22,423 ವಿದ್ಯಾರ್ಥಿಗಳು ಹಾಜರಾಗಿದ್ದರು. ಅಖಿಲಭಾರತ ಮಟ್ಟದ ಮೊದಲ ಐದು ಸ್ಥಾನಗಳಲ್ಲಿ ರಾಜ್ಯದ ಇಬ್ಬರು, ಅಗ್ರ 10 ಸ್ಥಾನಗಳಲ್ಲಿ ಮೂವರು ವಿದ್ಯಾರ್ಥಿಗಳು ಇದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಮೂರನೇ ರ್‍ಯಾಂಕ್ ಪಡೆದ ಬೆಂಗಳೂರಿನ ನ್ಯಾಷನಲ್ ಸೆಂಟರ್ ಫಾರ್ ಎಕ್ಸ್‌ಲೆನ್ಸ್‌ನ ಹೃಷಿಕೇಶ್ ನಾಗಭೂಷಣ ಗಂಗುಲೆ ರಾಜ್ಯಕ್ಕೆ ಮೊದಲಿಗ.

2B ಪುಟ ನೋಡಿ



ಉದ್ಘಾಟನೆಯ ಬಳಿಕ ವಿದ್ಯುತ್ ದೀಪಗಳಿಂದ ಕಂಗೊಳಿಸಿದ ನವದೆಹಲಿಯ ಕರ್ತವ್ಯಪಥ –ಪಿಟಿಐ ಚಿತ್ರ

ಬೋಸ್ ಪ್ರತಿಮೆ ಅನಾವರಣಗೊಳಿಸಿದ ಪ್ರಧಾನಿ

ಕರ್ತವ್ಯಪಥ ಜನರಿಗೆ ಮುಕ್ತ

ನವದೆಹಲಿ (ಪಿಟಿಐ): ಪುನರ್ ಅಭಿವೃದ್ಧಿಪಡಿಸಲಾದ ಮತ್ತು ಹೆಸರು ಬದಲಿಸಲಾದ ಕರ್ತವ್ಯಪಥವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಸಂಜೆ ಏಳು ಗಂಟೆಗೆ ಉದ್ಘಾಟಿಸಿದರು. ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗಿನ ರಸ್ತೆಯನ್ನು ಈ ಹಿಂದೆ ರಾಜಪಥ ಎಂದು ಕರೆಯಲಾಗುತ್ತಿತ್ತು.

ರಾಜಪಥದ ಹೆಸರು ಬದಲಾವಣೆಯು ದೇಶಕ್ಕೆ ಹೊಸ ಚೈತನ್ಯ ಮತ್ತು ಸ್ಫೂರ್ತಿ ನೀಡಿದೆ ಎಂದು ಮೋದಿ ಅವರು ಉದ್ಘಾಟನೆಯ ಬಳಿಕ ಹೇಳಿದರು. ಕಿಂಗ್ಸ್‌ವೇ ಅಥವಾ ರಾಜಪಥ ಎಂಬ ಹೆಸರು ಗುಲಾಮಗಿರಿಯ ಸಂಕೇತ. ಈಗ ಅದು ಇತಿಹಾಸಕ್ಕೆ ಸಂದು ಹೋಗಿದೆ ಎಂದು ಹೇಳಿದರು.

ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆಯನ್ನು ಇಂಡಿಯಾ ಗೇಟ್‌ನಲ್ಲಿ ಮೋದಿ ಅವರು ಅನಾವರಣಗೊಳಿಸಿದರು. ಬೋಸ್ ಅವರು ತೋರಿದ್ದ ಹಾದಿಯಲ್ಲಿ ಭಾರತವು ಮುನ್ನಡೆದಿದ್ದರೆ, ದೇಶವು ಹೊಸ ಎತ್ತರಕ್ಕೆ ಏರುತ್ತಿತ್ತು. ಆದರೆ, ಅವರು ತೋರಿದ ದಾರಿಯನ್ನು ಮರೆತಿದ್ದೇವೆ ಎಂಬುದು ಬೇಸರದ ವಿಚಾರ ಎಂದು ಪ್ರಧಾನಿ ಹೇಳಿದರು. ಬೋಸ್ ಅವರು ಅಖಂಡ ಭಾರತದ ಮೊದಲ ಪ್ರಧಾನಿ ಎಂದು ಮೋದಿ ಬಣ್ಣಿಸಿದ್ದಾರೆ. ಅವರು 1947ಕ್ಕೆ ಮೊದಲೇ ಅಂಡಮಾನ್ ಅನ್ನು ಬ್ರಿಟಿಷರ ಹಿಡಿತದಿಂದ ಬಿಡಿಸಿದ್ದರು. ಅಲ್ಲಿ ತ್ರಿವರ್ಣ ಧ್ವಜ ಹಾರಿಸಿದ್ದರು ಎಂದರು.

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಗಳ ಸಚಿವಾಲಯವು ಈ ಪಥವನ್ನು ಅಭಿವೃದ್ಧಿಪಡಿಸಿದೆ. ಇಲ್ಲಿ 15.5 ಕಿ.ಮೀ. ಉದ್ದದ ಪಾದಚಾರಿ ಹಾದಿ ನಿರ್ಮಿಸಲಾಗಿದೆ. ಕರ್ತವ್ಯಪಥವನ್ನು ಪಾದಚಾರಿಸ್ನೇಹಿಯನ್ನಾಗಿ ರೂಪಿಸಲಾಗಿದೆ ಎಂದು ಸಚಿವಾಲಯವು ಹೇಳಿದೆ. ಪಾದಚಾರಿ ಮಾರ್ಗಕ್ಕೆ ಕೆಂಪು ಶಿಲೆ ಹಾಸಲಾಗಿದೆ, ನಾಲ್ಕು ಅಂಡರ್ ಪಾಸ್‌ಗಳನ್ನು ನಿರ್ಮಿಸಲಾಗಿದೆ.

ಸೆಂಟ್ರಲ್ ವಿಸ್ತಾ ಪುನರ್ ಅಭಿವೃದ್ಧಿಯು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಹೊಸ ಸಂಸತ್ ಭವನ, ಪ್ರಧಾನಿ ಕಚೇರಿ ಮತ್ತು ನಿವಾಸ, ಉಪರಾಷ್ಟ್ರಪತಿ ನಿವಾಸ ಮುಂತಾದ ಕಟ್ಟಡಗಳನ್ನು ಇದರ ಭಾಗವಾಗಿ ನಿರ್ಮಿಸಲಾಗುತ್ತಿದೆ. ಈ ಪುನರ್ ಅಭಿವೃದ್ಧಿಯ ಭಾಗವಾಗಿ ಕರ್ತವ್ಯಪಥವನ್ನೂ ನವೀಕರಿಸಲಾಗಿದೆ.

ಪ್ರತಿಮೆ ಕೆತ್ತಿದ ಮೈಸೂರಿನ ಶಿಲ್ಪಿ

ಬೋಸ್ ಅವರ ಕಪ್ಪುಶಿಲೆಯ ಪ್ರತಿಮೆಯನ್ನು ತೆಲಂಗಾಣದ ಕಮ್ಮಮ್‌ನಲ್ಲಿ ಕೆತ್ತಲಾಗಿದೆ. ಮೈಸೂರಿನ ಅರುಣ್ ಯೋಗಿರಾಜ್ ಮತ್ತು ಇತರರು ಈ ಪ್ರತಿಮೆಯನ್ನು ಕೆತ್ತಿದ್ದಾರೆ. ಕೇದಾರನಾಥ ದೇವಾಲಯದಲ್ಲಿರುವ ಶಂಕರಾಚಾರ್ಯರ ಪ್ರತಿಮೆಯನ್ನು ಅರುಣ್ ಅವರೇ ಕೆತ್ತಿದ್ದರು. ಈ ಪ್ರತಿಮೆಯು ಮೋದಿ ಅವರ ಮೆಚ್ಚುಗೆಗೆ ಪಾತ್ರವಾಗಿತ್ತು. ಹಾಗಾಗಿ ಬೋಸ್ ಪ್ರತಿಮೆ ಕೆತ್ತಲು ಅರುಣ್ ಅವರನ್ನು ಆಯ್ಕೆ ಮಾಡಲಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಶ್ಚಿಮಘಟ್ಟದ ಹೃದಯ ಸೀಳಿದ ಗಣಿಗಾರಿಕೆ

• ಎಸ್. ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಶ್ಚಿಮಘಟ್ಟದಲ್ಲಿ ಪ್ರತಿ ಮಳೆಗಾಲದಲ್ಲೂ ತೀವ್ರ ಸ್ವರೂಪದ ಭೂಕುಸಿತ, ಜೀವಹಾನಿಗಳಿಗೆ ಈ ಭಾಗದಲ್ಲಿ ನಡೆಯುತ್ತಿರುವ ಅವ್ಯಾಹತ, ಅಕ್ರಮ ಗಣಿಗಾರಿಕೆಯೇ ಕಾರಣ ಎಂದು ತಜ್ಞರ ಸಮಿತಿಯ ವರದಿ ಹೇಳಿದೆ.

ರಾಜ್ಯ ಸರ್ಕಾರ ರಚಿಸಿದ್ದ ಭೂಕುಸಿತ ಅಧ್ಯಯನ ಸಮಿತಿ ನಡೆಸಿದ ಅಧ್ಯಯನದ ವೇಳೆ, ಭೂಕುಸಿತ ಸಂಭವಿಸಿರುವ ಪ್ರದೇಶದ ಆಸುಪಾಸಿನಲ್ಲಿ ಸಾಕಷ್ಟು ಗಣಿಗಾರಿಕೆ ನಡೆಯುತ್ತಿರುವುದು ಪತ್ತೆಯಾಗಿದೆ. ಸಮಿತಿಯು 2021ರಲ್ಲಿಯೇ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿ ಆಧರಿಸಿ, ಈವರೆಗೆ ಯಾವುದೇ ಕ್ರಮವನ್ನೂ ಸರ್ಕಾರ ಕೈಗೊಂಡಿಲ್ಲ.

ಕೊಡಗಿನಲ್ಲಿ ನಿರಂತರ ಎರಡು ವರ್ಷ ಭಾರೀ ಭೂಕುಸಿತ ಸಂಭವಿಸಿತ್ತು. ಅದೇ ರೀತಿ ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಪ್ರದೇಶದಲ್ಲೂ ವಿವಿಧ ಪ್ರಮಾಣದ ಭೂಕುಸಿತವಾಗಿತ್ತು. ಅಚ್ಚರಿ ಎಂದರೆ ಗಣಿಗಾರಿಕೆ ನಡೆದ ಪ್ರದೇಶದ ಸುತ್ತಮುತ್ತಲೇ ಭೂಕುಸಿತ ಆಗುತ್ತಿದೆ ಎಂಬುದನ್ನು ತಜ್ಞರು ಗುರುತಿಸಿದ್ದಾರೆ.

ಈ ಪ್ರದೇಶದಲ್ಲಿ ಶೇ 10 ರಷ್ಟು ಗಣಿಗಾರಿಕೆಗಳು ಅಧಿಕೃತವಾಗಿ ನಡೆಯುತ್ತಿದ್ದರೆ, ಶೇ 90 ರಷ್ಟು ಅನಧಿಕೃತವಾಗಿ ನಡೆಯುತ್ತಿವೆ. ಅಂದರೆ 10 ಗುಂಟೆಗೆ ಅನುಮತಿ ಪಡೆದು 5 ರಿಂದ 10 ಎಕರೆಯಷ್ಟು ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ. ಸರ್ಕಾರಕ್ಕೆ ಇದರ ಅರಿವೂ ಇಲ್ಲ ರಾಯಧನವೂ ಸಿಗುವುದಿಲ್ಲ ಎಂಬ ಅಂಶ ವರದಿಯಲ್ಲಿದೆ.

ಗಣಿಗಾರಿಕೆ ಪೂರ್ಣಗೊಂಡ ಬಳಿಕ ಆ ಜಾಗವನ್ನು ಸುಸ್ಥಿರಗೊಳಿಸಬೇಕು ಎಂಬ ಮಾರ್ಗಸೂಚಿ ಇದೆ. ಆದರೆ, ಆ ಪ್ರಕ್ರಿಯೆ ಪಾಲಿಸದೇ ಬರಿದಾದ ಗಣಿ ಪ್ರದೇಶ ಹಾಗೇ ಬಿಟ್ಟು ಹೋಗುವುದರಿಂದ ಹೊಂಡಗಳಲ್ಲಿ ನೀರು ತುಂಬಿಕೊಂಡು ಕುಸಿತವಾಗುತ್ತಿದೆ. ಬೇಕಾಬಿಟ್ಟಿ ಸ್ಫೋಟಕಗಳನ್ನು ಬಳಸುತ್ತಿರುವುದರಿಂದ ಪಶ್ಚಿಮಘಟ್ಟದ ಹೃದಯ ಭಾಗವೇ ಸೀಳಿ ಹೋಗುತ್ತಿದೆ. ಪ್ರೊ.ಮಾಧವ ಗಾಡ್ಗೀಳ್ ಅವರು ತಮ್ಮ ವರದಿಯಲ್ಲಿ ವಾಸ್ತವ ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ. ಪಶ್ಚಿಮಘಟ್ಟವನ್ನು ಉಳಿಸಬೇಕಾದರೆ, ಗಣಿಗಾರಿಕೆಗೆ ನಿಷೇಧ ಹೇರುವುದೇ ಸರಿಯಾದ ಕ್ರಮ ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

2B ಪುಟ ನೋಡಿ

ಒಳ ಪುಟಗಳಲ್ಲಿ
ಮನುಕುಲದ ನೆರವಿಗೆ ‘ಕಪ್ಪೆಲೋಕ’ದ ಮೊರೆ 2B



ಕಡಿಮೆಯಾದ ಮಳೆ: ಮುಂದುವರಿದ ಪ್ರವಾಹ 2A
ಹಾಸನ ಟಿಕೆಟ್: ಜೆಡಿಎಸ್‌ನಲ್ಲಿ ಹೆಚ್ಚಿದ ಕುತೂಹಲ 2A

ರಾಣಿ 2ನೇ ಎಲಿಜಬೆತ್ ಇನ್ನಿಲ್ಲ



21.4.1926 - 8.9.2022

ಲಂಡನ್ (ಎಎಫ್‌ಪಿ): ಬ್ರಿಟನ್‌ನ ರಾಣಿ 2ನೇ ಎಲಿಜಬೆತ್ (96) ಗುರುವಾರ ರಾತ್ರಿ ನಿಧನರಾದರು. ಬಂಕಿಂಗ್‌ಹ್ಯಾಮ್ ಅರಮನೆ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದೆ.

ಬ್ರಿಟನ್‌ನ ಇತಿಹಾಸದಲ್ಲಿಯೇ ಸುದೀರ್ಘ ಕಾಲ ರಾಣಿಯಾಗಿದ್ದ ಹಿರಿಮೆ ಅವರದು. 1953ರ ಜೂನ್ 2ರಂದು ಅಧಿಕಾರ ಸ್ವೀಕರಿಸಿದ್ದರು. ಮೃತರ ಗೌರವಾರ್ಥ ಸರ್ಕಾರ 10 ದಿನ ರಾಷ್ಟ್ರೀಯ ಶೋಕ ಘೋಷಿಸಿದೆ. ಪಾರ್ಥಿವ ಶರೀರವನ್ನು ಬಾಲ್ಮೊರಲ್‌ನ ಎಸ್ಟೇಟ್‌ನಲ್ಲಿ ಇರಿಸಲಾಗಿದ್ದು, ಶುಕ್ರವಾರ ಲಂಡನ್‌ಗೆ ಒಯ್ಯಲಾಗುತ್ತದೆ.

ರಾಣಿಗೆ ನಾಲ್ವರು ಮಕ್ಕಳು. ಹಿರಿಯ ಮಗ, ವೇಲ್ಸ್‌ನ ರಾಜಕುಮಾರ, 73 ವರ್ಷದ ಚಾರ್ಲ್ಸ್ ಅವರು ತಕ್ಷಣದಿಂದಲೇ ಅನ್ವಯವಾಗುವಂತೆ ರಾಜನಾಗಿ ಕರ್ತವ್ಯ ನಿಭಾಯಿಸಲಿದ್ದಾರೆ.

ನಿಧನದ ಸುದ್ದಿ ತಿಳಿದು ಮಕ್ಕಳಾದ ಚಾರ್ಲ್ಸ್, ರಾಜಕುಮಾರಿ 72 ವರ್ಷದ ಆ್ಯನೆ, ರಾಜಕುಮಾರರಾದ 62 ವರ್ಷದ ಆಂಡ್ರ್ಯೂ, 58 ವರ್ಷದ ಎಡ್ವರ್ಡ್ ಎಸ್ಟೇಟ್‌ಗೆ ಧಾವಿಸಿದರು. ಎಲಿಜಬೆತ್ ಅವರು ಬುಧವಾರವಷ್ಟೇ ಬ್ರಿಟನ್‌ನ 15ನೇ ಪ್ರಧಾನಿಯಾಗಿ ಲಿಜ್ ಟ್ರಸ್ ಅವರನ್ನು ನೇಮಿಸಿದ್ದರು.

ಇನ್ನೊಂದು ಸುದ್ದಿ 8

ಚುಟುಕು ಕ್ರಿಕೆಟ್ ವಿರಾಟ್ ಶತಕ

ದುಬೈನಲ್ಲಿ ಗುರುವಾರ ನಡೆದ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದಲ್ಲಿ ಅಫ್ಗಾನಿಸ್ತಾನ ಎದುರು ಭಾರತದ ವಿರಾಟ್ ಕೊಹ್ಲಿ ಶತಕ ಗಳಿಸಿದರು. ಅಂತರರಾಷ್ಟ್ರೀಯ ಟಿ20 ಮಾದರಿಯಲ್ಲಿ ಮೊದಲ ಸಲ ಮೂರಂಕಿ ತಲುಪಿದರು. ಕಳೆದ 34 ತಿಂಗಳುಗಳಿಂದ ಅವರು ಯಾವುದೇ ಮಾದರಿಯಲ್ಲಿಯೂ ನೂರರ ಗಡಿ ದಾಟಿರಲಿಲ್ಲ.



9



ಬೆಂಗಳೂರಿನ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್ ವತಿಯಿಂದ ಬನವಾಸಿಗುಡಿಯ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪಿ.ಯು ಕಾಲೇಜಿನ 1400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

ನಿಧನ ವಾರ್ತೆ

ಸೂರ್ಯಾಚಾರ್



ಬೆಂಗಳೂರು: ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ, ವಿಜಯನಗರದ ನಿವಾಸಿ ಎನ್.ಎಚ್. ಸೂರ್ಯಾಚಾರ್(86) ಬುಧವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಇಬ್ಬರು ಪುತ್ರರಿದ್ದಾರೆ. ಶುಕ್ರವಾರ ಮಧ್ಯಾಹ್ನ ಸುಮನಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬ ಮೂಲಗಳು ತಿಳಿಸಿವೆ.

ಕೆರೆ ಹೂಳು ಎತ್ತಿಲ್ಲ, ಒತ್ತುವರಿ ತೆರವು ಮಾಡಿಲ್ಲ– ಸರ್ಕಾರದ ವಿರುದ್ಧ ಸಿದ್ದರಾಮಯ್ಯ ಆಕ್ರೋಶ

‘ಮಳೆ ಅನಾಹುತ ಅಧಿವೇಶನದಲ್ಲಿ ಪ್ರಸ್ತಾಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಮಳೆ ಪ್ರವಾಹದಿಂದ ಉಂಟಾಗಬಹುದಾದ ಹಾನಿ ತಡೆಯಲು ರಾಜ್ಯ ಸರ್ಕಾರ ಯಾವುದೇ ಯೋಜನೆ ರೂಪಿಸಿಲ್ಲ. ಕೆರೆ ಹೂಳು ಎತ್ತುವ ಕೆಲಸವನ್ನೂ ಮಾಡಿಲ್ಲ. ಒತ್ತುವರಿಯನ್ನೂ ತೆರವುಗೊಳಿಸಿಲ್ಲ. ಇದರಿಂದ ಜನರಿಗೆ ಸಾಕಷ್ಟು ಸಮಸ್ಯೆಯಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಿರಂತರ ಮಳೆಯಿಂದ ಜಲಾವೃತವಾಗಿರುವ ವಿವಿಧ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿ ಸ್ಥಳೀಯ ನಿವಾಸಿಗಳ ಅಹವಾಲು ಆಲಿಸಿದ ಬಳಿಕ ಮಾತನಾಡಿದ ಅವರು, ‘ಮಳೆ ಅನಾಹುತ ವಿಚಾರವನ್ನೂ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ’ ಎಂದರು.

‘ಇಂಥ ಪರಿಸ್ಥಿತಿ ಹಿಂದೆಂದೂ ಬಂದಿಲ್ಲ. ಇದಕ್ಕೆಲ್ಲ ಹಿಂದಿನ ಸರ್ಕಾರ ಕಾರಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಾರೆ. ನಮ್ಮ ಅವಧಿಯಲ್ಲಿ ರಾಜಕಾಲುವೆಗಳ ಒತ್ತುವರಿ ಸಮೀಕ್ಷೆ ಮಾಡಿಸಿದ್ದೆವು. ದಾಖಲೆಗಳೇ ಹೇಳುತ್ತವೆ. ಆದರೆ, ಈಗಿನ ಸರ್ಕಾರ ಏನು ಮಾಡಲಿಲ್ಲ’ ಎಂದು ದೂರಿದರು.

‘ಮಹದೇವಪುರ ಕ್ಷೇತ್ರದಲ್ಲಿ ಹೆಚ್ಚಿನ ಅನಾಹುತಗಳಾಗಿದ್ದು, ಅಲ್ಲಿ ಬಿಜೆಪಿಯ ಅರವಿಂದ ಲಿಂಬಾವಳಿ ಮೂರು ಬಾರಿ ಶಾಸಕರಾಗಿದ್ದಾರೆ. ಅವರೇ ಅಕ್ರಮವಾಗಿ ಅಪಾರ್ಟ್‌ಮೆಂಟ್‌ಗಳಿಗೆ ಪರವಾನಗಿ ಕೊಡಿಸಿದ್ದರಾ? ಅಕ್ರಮವಾಗಿ ಕಟ್ಟಡಗಳ ನಿರ್ಮಾಣ ಆಗಿದ್ದರೆ ಯಾಕೆ ಕ್ರಮ ಕೈಗೊಳ್ಳಲಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಮಲೂರು ಇಪ್ಸಿಲಾನ್ ಬಡಾವಣೆ, ಬೆಳ್ಳಂದೂರು ರಿಂಗ್ ರಸ್ತೆ ಇಕೋ ಸ್ಪೇಸ್ ಬಡಾವಣೆ, ರೈನ್ ಬೋ ಬಡಾವಣೆ ಮುಂತಾದ ಸ್ಥಳಗಳಿಗೆ ಅವರು ಭೇಟಿ ನೀಡಿದರು.



ಜಲಾವೃತ್ತವಾಗಿರುವ ಇಪ್ಸಿಲಾನ್ ಬಡಾವಣೆಯ ಸುತ್ತಮುತ್ತಲಿನ ಪ್ರದೇಶಗಳನ್ನು ಸಿದ್ದರಾಮಯ್ಯ ಗುರುವಾರ ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ಜಲಾವೃತ್ತವಾಗಿರುವ ಇಪ್ಸಿಲಾನ್ ಬಡಾವಣೆಯಲ್ಲಿ ಟ್ಯೂಬ್ ಬೋಟ್‌ನಲ್ಲಿ ತೆರಳಿ ಸಿದ್ದರಾಮಯ್ಯ ಸುತ್ತಮುತ್ತಲಿನ ಪ್ರದೇಶಗಳನ್ನು ವೀಕ್ಷಿಸಿದರು. ಬಳಗೆರೆಯ ದಿಶಾ ಅಪಾರ್ಟ್‌ಮೆಂಟ್‌ನ ನಿವಾಸಿಗಳ ಸಮಸ್ಯೆ ಆಲಿಸಿದ ಅವರು, ಬಳಿಕ ಮುನ್ನೇಕೊಳಾಲ ಗ್ರಾಮಕ್ಕೆ ಭೇಟಿ ಅಲ್ಲಿನ ಕೊಳೆಗೇರಿ ನಿವಾಸಿಗಳಿಗೆ ಹೊದಿಕೆಗಳನ್ನು ವಿತರಿಸಿದರು.

ಸಿದ್ದಾಪುರದಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟಿದ್ದ ಅಖಿಲಾ ಪೋಷಕರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಸಿದ್ದರಾಮಯ್ಯ, ಅಖೀಲಾ ಕುಟುಂಬಕ್ಕೆ ₹ 1 ಲಕ್ಷ ಪರಿಹಾರ ನೀಡಿದರು. ಅಲ್ಲದೆ, ಒತ್ತುವರಿ ವಿಚಾರವಾಗಿ ಅರವಿಂದ ಲಿಂಬಾವಳಿ ಜೊತೆ ವಾಗ್ವಾದ ನಡೆಸಿದ್ದ ರುತ್ ಸಗಾಯಿ ಮೇರಿ ಅಮೀಲಾ ಅವರ ಒಡೆತನದ ಕಾಂಪ್ಲೆಕ್ಸ್ ಅನ್ನು ವೀಕ್ಷಿಸಿದರು. ನಲ್ಲೂರ್ ಹಳ್ಳಿ ವೈಟ್‌ಫೀಲ್ಡ್ ರಸ್ತೆಯಲ್ಲಿ ಮಳೆ ನೀರು ನುಗ್ಗಿದ್ದ ಸುಮಾರು 300 ಮನೆಗಳಿರುವ ಬಿಎಂ ಗ್ಲೋರಿಟಾ ಅಪಾರ್ಟ್‌ಮೆಂಟ್ ವೀಕ್ಷಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಕಾಂಗ್ರೆಸ್ ಕಾರ್ಯಕರ್ತರು ಜೊತೆಗಿದ್ದರು.

‘ಜನಸ್ಪಂದನದ ಬದಲು ಜಲಸ್ಪಂದನ ಮಾಡಲಿ’

ಬೆಂಗಳೂರು: ‘ರಾಜ್ಯ ಸರ್ಕಾರ ಬೆಂಗಳೂರಿನ ಐಟಿ ಕಾರಿಡಾರ್‌ನಲ್ಲಿ ಜಲಸಂಚಾರಕ್ಕಾಗಿ ಬೋಟ್ ಫ್ಯಾಕ್ಟರಿ ಆರಂಭಿಸುವುದು ಉತ್ತಮ. ಬಿಜೆಪಿಯವರು ಜನಸ್ಪಂದನದ ಬದಲು, ಮೊದಲು ಜಲಸ್ಪಂದನ ಕೆಲಸ ಮಾಡಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯ ಸರ್ಕಾರಕ್ಕೆ ಬೆಂಗಳೂರಿನ ಬೆಲೆ ತಿಳಿದಿಲ್ಲ. ಬೆಂಗಳೂರು ಎಷ್ಟು ಜನರಿಗೆ ಉದ್ಯೋಗ ನೀಡಿದೆ ಎಂಬುದೂ ಗೊತ್ತಿಲ್ಲ’ ಎಂದರು.

‘ಬ್ರ್ಯಾಂಡ್ ಬೆಂಗಳೂರಿಗೆ ಮಸಿ’

ಬೆಂಗಳೂರು: ಕಾಂಗ್ರೆಸ್ ಪಕ್ಷದವರು ಹಾಗೂ ಸ್ವಹಿತಾಸಕ್ತಿ ಇರುವವರು ನಗರದ ಕೆಲವು ಪ್ರದೇಶಗಳಲ್ಲಿ ಮಳೆಯಿಂದ ಉಂಟಾದ ನೆರೆಯನ್ನೇ ಮುಂದಿಟ್ಟುಕೊಂಡು ’ಬ್ರ್ಯಾಂಡ್ ಬೆಂಗಳೂರು‘ ಎಂಬ ಹೆಗ್ಗಳಿಕೆಗೆ ಕುಂದು ತರುತ್ತಿದ್ದಾರೆ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಆರೋಪಿಸಿದ್ದಾರೆ.

’ರಾಜಕೀಯ ಲಾಭಕ್ಕಾಗಿ ಬ್ರ್ಯಾಂಡ್ ಬೆಂಗಳೂರು ಎಂಬ ಗೌರವಕ್ಕೆ ವಿರೋಧ ಪಕ್ಷದವರು ಚ್ಯುತಿ ತರುತ್ತಿದ್ದಾರೆ. ಬೆಳ್ಳಂದೂರಿನಲ್ಲಿ ಐಟಿ ಪಾರ್ಕ್ ಯಾರ ಮಾಲೀಕತ್ವದಲ್ಲಿ ಇತ್ತು, ಕೆರೆಗಳು ಹಾಗೂ ಜಲಾನಯನ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡವರು ಯಾರು‘ ಎಂದು ಗುರುವಾರ ಅವರು ಪ್ರಶ್ನಿಸಿದರು.



ಗೃಹ ಸಚಿವ ಅರಗ ಜ್ಞಾನೇಂದ್ರ ಅವರು ಸರ್ಜಾಪುರ ರಸ್ತೆಯ ರೈನ್‌ಬೋ ಡ್ರೈವ್ ಮತ್ತು ಕಂಟ್ರಿಸೈಡ್ ಅಪಾರ್ಟ್‌ಮೆಂಟ್‌ಗಳಲ್ಲಿ ರಕ್ಷಣಾ ಕಾರ್ಯವನ್ನು ಗುರುವಾರ ವೀಕ್ಷಿಸಿದರು

5 ಸಾವಿರ ಜನರು ಸುರಕ್ಷಿತ ಸ್ಥಳಕ್ಕೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಸಂಕಷ್ಟಕ್ಕೊಳಗಾದ 5 ಸಾವಿರ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿದೆ. ಜಲಾವೃತವಾಗಿರುವ ಕಟ್ಟಡಗಳಿಂದ ನೀರು ಹೊರಹಾಕಲು ಸಿಬ್ಬಂದಿ ಹಗಲು–ರಾತ್ರಿ ಶ್ರಮಿಸುತ್ತಿದ್ದಾರೆ ಎಂದು ಗೃಹ ಸಚಿವ ಅರಗ ಜ್ಞಾನೇಂದ್ರ ಅವರು ತಿಳಿಸಿದರು.

ನಗರದಲ್ಲಿ ಮಳೆ ನೀರಿನಿಂದ ಅವೃತಗೊಂಡ ವಸತಿ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಹೊರವರ್ತುಲ ರಸ್ತೆ, ಸರ್ಜಾಪುರ ರಸ್ತೆ ಸುತ್ತಮುತ್ತಲಿನ ಜಲಾವೃತ ಪ್ರದೇಶಗಳಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಹಾಗೂ ಅಗ್ನಿಶಾಮಕ ಹಾಗೂ ತುರ್ತು ಸೇವೆ ಇಲಾಖೆಯ ಸಿಬ್ಬಂದಿ ರಕ್ಷಣಾ ಕಾರ್ಯಗಳಲ್ಲಿ ತೊಡಗಿರುವ ಕಾರ್ಯವನ್ನು ವೀಕ್ಷಿಸಿದರು.

ನಗರದಲ್ಲಿ ಮಳೆ ನೀರಿನ ತುರ್ತು ಪರಿಸ್ಥಿತಿ ಎದುರಿಸಲು 36 ಯಾಂತ್ರೀಕೃತ ದೋಣಿಗಳು, 56 ಅಗ್ನಿಶಾಮಕ ವಾಹನಗಳು 24 ಗಂಟೆಗಳ ಕಾಲ ಸೇವೆಗೆ ಲಭ್ಯವಿದ್ದು, ಪರಿಸ್ಥಿತಿ ಎದುರಿಸಲು ಸಜ್ಜಾಗಿವೆ.

ಜಲಾವೃತದ ಪರಿಸ್ಥಿತಿ ಹಾಗೂ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿರಿಯ ಅಧಿಕಾರಿಗಳು, ನಗರದ ಸಚಿವರು ಹಾಗೂ ಶಾಸಕರೊಂದಿಗೆ ಸಮಾಲೋಚಿಸಿದ್ದಾರೆ. ಕೂಡಲೇ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

1600 ಸಿಬ್ಬಂದಿ ನೇಮಕ: ಅಗ್ನಿಶಾಮಕ ಹಾಗೂ ತುರ್ತು ಸೇವೆ ಇಲಾಖೆಗೆ ಸುಮಾರು 1600 ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ಹೊಸತಾಗಿ ನೇಮಕಗೊಂಡ ಸಿಬ್ಬಂದಿಗೆ ಅಗ್ನಿ ಅವಘಡದಂತಹ ಪರಿಸ್ಥಿತಿ ಎದುರಿಸಲು ಆರು ತಿಂಗಳ ಕಾಲ ತರಬೇತಿ ನೀಡಲಾಗುತ್ತಿದೆ. ಈ ವರ್ಷದಿಂದ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಒಂದು ವರ್ಷ ತರಬೇತಿ ನೀಡಲಾಗುತ್ತದೆ ಎಂದರು.

ರಾಜ್ಯ ಅಗ್ನಿಶಾಮಕ, ತುರ್ತು ಸೇವೆಗಳು, ವಿಪತ್ತು ನಿರ್ವಹಣಾ ಇಲಾಖೆ ಮುಖ್ಯಸ್ಥ ಅಮರ್ ಕುಮಾರ್ ಪಾಂಡೆ ಇದ್ದರು.

ಪ್ರಹ್ಲಾದ್ ಬಿಬಿಎಂಪಿ ಪ್ರಧಾನ ಎಂಜಿನಿಯರ್



ಬೆಂಗಳೂರು: ಬಿಬಿಎಂಪಿ ಪ್ರಧಾನ ಎಂಜಿನಿಯರ್ ಆಗಿ ಬಿ.ಎಸ್. ಪ್ರಹ್ಲಾದ್ ಗುರುವಾರ ಅಧಿಕಾರ ವಹಿಸಿಕೊಂಡರು. ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ಪ್ರಹ್ಲಾದ್ ಅವರು 1993ರಲ್ಲಿ ಪಾಲಿಕೆಗೆ ಸೇರಿಕೊಂಡಿದ್ದರು. ಪ್ರಧಾನ ಎಂಜಿನಿಯರ್ ಹುದ್ದೆಯ ಜೊತೆಗೆ ರಸ್ತೆ ಮೂಲಸೌಕರ್ಯ ವಿಭಾಗದ ನೇರ ಮೇಲ್ವಿಚಾರಣೆ ಜವಾಬ್ದಾರಿಯನ್ನೂ ಪ್ರಹ್ಲಾದ್ ಅವರಿಗೆ ವಹಿಸಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ನಗರದಲ್ಲಿ ಇಂದು

ಸದ್ಗುರು ಅನಂತಸ್ವಾಮಿ ಮಹಾರಾಜರ 171ನೇ ಜನ್ಮೋತ್ಸವ: ಬೆಳಿಗ್ಗೆ 6ಕ್ಕೆ ಅಭಿಷೇಕ ಮತ್ತು ಪೂಜೆ, ಬೆಳಿಗ್ಗೆ 8ಕ್ಕೆ ಸಾಮೂಹಿಕ ಸತ್ಯನಾರಾಯಣ ಪೂಜೆ, ಬೆಳಿಗ್ಗೆ 11 ಸಾಂಪ್ರದಾಯಿಕ ಪಂಢರಿ ಭಜನೆ ಮತ್ತು ಕೀರ್ತನೆ, 1.30ಕ್ಕೆ ಜ್ಞಾನೇಶ್ವರ ಹುಣಸಿಕಟ್ಟಿ, ಎಂ.ಕೆ. ಹುಬ್ಬಳ್ಳಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಅನಂತಸ್ವಾಮಿ ಆಶ್ರಮ, ಸುಬೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ

56ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಪ್ರಧಾನ ಭಾಷಣಕಾರರು: ಡಾ.ಆರ್.ಎಸ್. ಪರೋಡ, ಉಪಸ್ಥಿತಿ: ಬಿ.ಸಿ. ಪಾಟೀಲ, ಎಸ್.ರಾಜೇಂದ್ರ ಪ್ರಸಾದ್, ಆಯೋಜನೆ: ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10,

4ನೇ ರಾಜ್ಯದ ಮಟ್ಟದ ಜಾಗೃತ ಸಮಾವೇಶ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಜಿ. ಪರಮೇಶ್ವರ್, ಅತಿಥಿಗಳು: ಕೋಟ ಶ್ರೀನಿವಾಸ್ ಪೂಜಾರಿ, ಎಂ.ಪಿ. ಕುಮಾರಸ್ವಾಮಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ, ಎಸ್.ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ಬೆಳಿಗ್ಗೆ 10.30

ಒಡಲಾಳ: ಒಂದು ಒಳನೋಟ: ಅಧ್ಯಕ್ಷತೆ: ಎಸ್. ಅನೀಲ್ ಕುಮಾರ್, ಪ್ರಸ್ತಾವಿಕ ನುಡಿ: ಪದ್ಮಿನಿ ನಾಗರಾಜು, ಉಪನ್ಯಾಸ: ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಶಿವಾನಂದ ಶರ್ಮಾ ಮೆಮೋರಿಯಲ್ ಆರ್.ವಿ. ಕಾಲೇಜು, ಜಯನಗರ, ಬೆಳಿಗ್ಗೆ 10.30

ನವೀನ್ ಸೂರಿಂಜೆ ಸಂಪಾದಕತ್ವದ ‘ಸದನದಲ್ಲಿ ಶ್ರೀರಾಮರೆಡ್ಡಿ’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಅನಂತ್ ನಾಯ್ಕ್ ಎನ್., ವಿ.ಜೆ.ಕೆ. ನಾಯರ್, ವಿ. ಗೀತಾ, ಉಪಸ್ಥಿತಿ: ನವೀನ್ ಸೂರಿಂಜೆ, ಅಭಿರುಚಿ ಗಣೇಶ್, ಅಧ್ಯಕ್ಷತೆ: ವೈ.ಎಸ್.ವಿ. ದತ್ತಾ, ಆಯೋಜನೆ: ಅಭಿರುಚಿ ಪ್ರಕಾಶನ, ಸ್ಥಳ: ಗಾಂಧಿ ಭವನ, ಬೆಳಿಗ್ಗೆ 11

7ನೇ ವಾರ್ಷಿಕ ಘಟಿಕೋತ್ಸವ: ಅತಿಥಿಗಳು: ರಾಜೀವ್ ಚಂದ್ರಶೇಖರ್, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಡಿ. ಜವಾಹರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ಯೂನಿವರ್ಸಿಟಿ, ಎಂಆರ್‌ಡಿ ಸಭಾಂಗಣ, ಆರ್.ಆರ್. ಆವರಣ, ಬನಶಂಕರಿ 3ನೇ ಹಂತ, ಬೆಳಿಗ್ಗೆ 11

ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಉದ್ಘಾಟನೆ: ಎಲ್. ಹನುಮಂತಯ್ಯ, ಅತಿಥಿಗಳು: ಮಂಜುನಾಥ್, ಪುಟ್ಟಣ್ಣ, ಎಂ.ಎಸ್. ಸುರೇಶ್, ಅಧ್ಯಕ್ಷತೆ: ಜಿ.ಕೆ. ಶ್ರೀರಾಮ್, ಆಯೋಜನೆ ಮತ್ತು ಸ್ಥಳ: ಪ್ರಗತಿ ಪದವಿ ಪೂರ್ವ, ಪ್ರಥಮ ದರ್ಜೆ ಹಾಗೂ ನರ್ಸಿಂಗ್ ಕಾಲೇಜು, ಚಿಕ್ಕಬಾಣಾವರ, ಬೆಳಿಗ್ಗೆ 11

ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಅತಿಥಿಗಳು: ಅಕ್ಷತಾ ಪಾಂಡವಪುರ, ಪ್ರಮೋದ್ ಶೆಟ್ಟಿ, ಅಧ್ಯಕ್ಷತೆ: ಕೆ.ಪಿ. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ಕಲೆ ಮತ್ತು ವಾಣಿಜ್ಯ ಸಂಜೆ ಪದವಿ ಹಾಗೂ ಪದವಿಪೂರ್ವ ಕಾಲೇಜು, ಎನ್.ಆರ್. ಕಾಲೊನಿ, ಸಂಜೆ 5.30

ಅಶೋಕ ದೊಮ್ಮಲೂರು ಅವರು ಸಂಪಾದಿಸಿದ ‘ಮಡಿವಾಳ ಮಾಚಿದೇವರ ಸಮಗ್ರ ವಚನಗಳು’ ಗ್ರಂಥ ಬಿಡುಗಡೆ ಸಮಾರಂಭ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಗ್ರಂಥ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಎಸ್. ಜಿ. ಸಿದ್ದರಾಮಯ್ಯ, ರಂಜಾನ್ ದರ್ಗಾ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 5.30



ಪ್ರೊ. ಎಸ್ ಜಿ.ಸಿದ್ದರಾಮಯ್ಯ

85ನೇ ಗಣೇಶೋತ್ಸವ: ವಿವಿಧ ಸಂಗೀತ ಕಾರ್ಯಕ್ರಮಗಳು, ಆಯೋಜನೆ: ಶ್ರೀರಾಮಸೇವಾ ಮಂಡಳಿ, ಸ್ಥಳ: ಎಸ್.ವಿ.ಎನ್. ರಾವ್ ಮಾರ್ಗ, ಚಾಮರಾಜಪೇಟೆ, ಸಂಜೆ 6

‘ರಕ್ತ–ಧ್ವಜ’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಣಿ ಭಟ್.ಎ., ಸಂಗೀತ: ಗಜಾನನ.ಟಿ. ನಾಯ್ಕ್, ತಬಲಾ: ಅಕ್ಷಯ್ ಭೋಂಸ್ಲೆ, ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಉದ್ಯಮಿ ರಘುನಾಥ್ ಕೊಲೆ ಪ್ರಕರಣ: ಸಿಬಿಐ ತನಿಖೆಗೆ ಅಸ್ತು

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಕೆ.ರಘುನಾಥ್ ನಿಗೂಢ ಸಾವಿನ ಪ್ರಕರಣ ಕುರಿತಂತೆ ಖ್ಯಾತ ಉದ್ಯಮಿ, ಮಾಜಿ ಸಂಸದ, ಟಿಟಿಡಿ ಅಧ್ಯಕ್ಷರೂ ಆಗಿದ್ದ ದಿ. ಡಿ.ಕೆ. ಆದಿಕೇವಶವುಲು ಅವರ ಪುತ್ರ ಡಿ.ಎ.ಶ್ರೀನಿವಾಸ್ ವಿರುದ್ಧ ಸಿಬಿಐ ತನಿಖೆಗೆ ಹೈಕೋರ್ಟ್ ಆದೇಶಿಸಿದೆ.

ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಕೋರಿ ಕೆ.ರಘುನಾಥ್ ಅವರ ಪತ್ನಿ ಎಂ.ಮಂಜುಳಾ, ಪುತ್ರ ರೋಹಿತ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಭಾಗಶಃ ಪುರಸ್ಕರಿಸಿದ್ದು, ಸಿಬಿಐ ತನಿಖೆಗೆ ಆದೇಶಿಸಿದೆ.

‘ಪೊಲೀಸ್, ಎಸ್ಐಟಿ ತನಿಖೆಯಲ್ಲಿ ಲೋಪಗಳಿವೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ‘ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸುವ ಅಗತ್ಯವಿದೆ. ಹಾಗಾಗಿ, ಆರು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ನೀಡಬೇಕು’ ಎಂದು ಸಿಬಿಐಗೆ ಆದೇಶಿಸಿದೆ.

ಪ್ರಕರಣವೇನು?: ಕೆ.ರಘುನಾಥ್ 2019ರ ಮೇನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ‘ಇದು ಆತ್ಮಹತ್ಯೆಯಲ್ಲ, ಕೊಲೆ’ ಎಂಬ ಆರೋಪದಡಿ ಶ್ರೀನಿವಾಸ್ ಸೇರಿ ನಾಲ್ವರ ವಿರುದ್ಧ ಎಫ್ಐಆರ್ ದಾಖಲಾಗಿತ್ತು.

‘ಆಸ್ತಿ ವಿಚಾರ ಮಾತನಾಡಲು ನನ್ನ ಪತಿ ರಘುನಾಥ್ ಅವರನ್ನು ಕರೆಸಿಕೊಂಡಿದ್ದ ಆರೋಪಿಗಳು ಕೊಲೆ ಮಾಡಿದ್ದಾರೆ’ ಎಂದು ಪತ್ನಿ ಮಂಜುಳಾ ದೂರು ನೀಡಿದ್ದರು. ‘ರಘುನಾಥ್ ತೀರಿಕೊಂಡ 7 ತಿಂಗಳ ನಂತರ ಆರೋಪಿಗಳೇ ಫೋರ್ಜರಿ ವಿಲ್ ಮಾಡಿಸಿ ಬಹುಕೋಟಿ ಮೌಲ್ಯದ ಸ್ಥಿರಾಸ್ತಿ ಕಬಳಿಸಲು ಮುಂದಾಗಿದ್ದಾರೆ’ ಎಂದು ವಿವರಿಸಿದ್ದರು. ದೂರಿನನ್ವಯ ಪೊಲೀಸ್, ಎಸ್ಐಟಿ ತನಿಖೆ ನಡೆಸಲಾಗಿತ್ತು.

ತನಿಖೆಯನ್ನು ಪೂರ್ಣಗೊಳಿಸಿದ್ದ ಎಸ್ಐಟಿ, ‘ಆರೋಪದಲ್ಲಿ ಹುರುಳಿಲ್ಲ, ಪ್ರಕರಣ ಮುಕ್ತಾಯಗೊಳಿಸಬಹುದು’ ಎಂದು ನ್ಯಾಯಾಲಯಕ್ಕೆ ಅಂತಿಮ ‘ಬಿ’ ವರದಿ ಸಲ್ಲಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ವೃದ್ಧೆ ಸೇರಿ ಮೂವರು ಸಾವು • ಸಿರುಗುಪ್ಪದಲ್ಲಿ 8 ಜನರ ರಕ್ಷಣೆ • ಮುಳುಗಿದ ರಕ್ಷಣಾ ತಂಡದ ದೋಣಿ

ತುಸು ತಗ್ಗಿದ ಮಳೆ: ಮುಂದುವರಿದ ಪ್ರವಾಹ

ಪ್ರಜಾವಾಣಿ ವಾರ್ತೆ



ಕೋಲಾರ ತಾಲ್ಲೂಕಿನ ಹೋಳೂರು– ಬೆಳ್ಳಂಬರಿ ರಸ್ತೆಯಲ್ಲಿ ಮಹಿಳೆಯರು ತೆರಳಿದರು

ಬಾಗಲಕೋಟೆ/ಮಂಡ್ಯ/ಬಳ್ಳಾರಿ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಮಳೆ ಪ್ರಮಾಣ ತಗ್ಗಿದೆ. ಆದರೆ, ಮಳೆಯಿಂದಾಗಿದ್ದ ಸಮಸ್ಯೆಗಳು ಮುಂದುವರಿದಿವೆ. ಗದಗದಲ್ಲಿ ಗೋಡೆ ಕುಸಿದು ವೃದ್ಧೆ ಮೃತಪಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿ ನದಿಯಲ್ಲಿ ಕೊಚ್ಚಿಹೋಗಿದ್ದ ಇಬ್ಬರ ಶವಗಳು ಗುರುವಾರ ಪತ್ತೆಯಾಗಿವೆ.

ಬಾಗಲಕೋಟೆ ಜಿಲ್ಲೆಯಲ್ಲಿ ಮಲಪ್ರಭಾ ನದಿಯ ಪ್ರವಾಹ ಯಥಾಸ್ಥಿತಿಯಲ್ಲಿದ್ದು, ನದಿಯಲ್ಲಿ ಕೊಚ್ಚಿ ಹೋಗಿದ್ದ ಗಂಜಿಹಾಳದ ರೈತ ದೇವಾನಂದ ಕಮ್ಮಾರ ಅವರ ಪತ್ತೆ ಗುರುವಾರವೂ ಆಗಿಲ್ಲ.

ಹುನಗುಂದ ತಾಲ್ಲೂಕಿನ ಕೆಂಗಲ್, ಕಜಗಲ್, ಹೂವನೂರು, ವರಗೊಡದಿನ್ನಿ, ಗಂಜಿಹಾಳ, ಇದ್ದಲಗಿ, ಬೆಳಗಲ್, ಹಿಟ್ನಾಳಕೊಪ್ಪ ಗ್ರಾಮಗಳಿಗೆ ನೀರು ನುಗ್ಗಿದೆ. ಕಮತಗಿ ಸಂಪರ್ಕಿಸುವ ರಸ್ತೆಯಲ್ಲಿ ನೀರು ಹರಿಯುತ್ತಿದ್ದು, ಸಾರಿಗೆ ಬಸ್‌ಗಳು ಗ್ರಾಮಕ್ಕೆ ತೆರಳುತ್ತಿಲ್ಲ.

ಬೇವಿನಾಳ ಶಾಲೆ ಜಲಾವೃತವಾಗಿದ್ದರಿಂದ ಶೆಡ್‌ನಲ್ಲಿ ತರಗತಿ ನಡೆಸಲಾಯಿತು. ಕಮತಗಿ ಸೇತುವೆ ಮೇಲಿಂದ ಮಹಿಳೆಯೊಬ್ಬರು ನದಿಗೆ ಹಾರಿದ್ದು, ಸ್ಥಳದಲ್ಲಿದ್ದ ಯುವಕರು ರಕ್ಷಿಸಿದ್ದಾರೆ. ಚಿತ್ತರಗಿ ಗ್ರಾಮದಲ್ಲಿ ಪಂಚಾಯಿತಿ, ಆರೋಗ್ಯ ಕೇಂದ್ರಗಳು ಜಲಾವೃತವಾಗಿವೆ.

ಮನೆ ಕುಸಿದು ವೃದ್ಧೆ ಸಾವು: ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೀರೇಹಾಳ ಗ್ರಾಮದಲ್ಲಿ ಮಳೆಯಿಂದಾಗಿ ಮನೆ ಗೋಡೆ ಕುಸಿದು ವೃದ್ಧೆ ಲಕ್ಷ್ಮವ್ವ ಹನಮಪ್ಪ ಮಾದರ (80) ಗುರುವಾರ ಮೃತಪಟ್ಟಿದ್ದಾರೆ.

ವ್ಯಕ್ತಿ ಶವವಾಗಿ ಪತ್ತೆ

ಮೈಸೂರು ವರದಿ: ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹಡತಲೆ ಗ್ರಾಮದಲ್ಲಿ ದನ ಮೇಯಿಸಲು ಹೋಗಿದ್ದಾಗ ಮಳೆಯ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದ ವ್ಯಕ್ತಿ ಶವವಾಗಿ ಪತ್ತೆಯಾಗಿದ್ದಾರೆ. ಗ್ರಾಮದ ಕರಿನಾಯಕ (65) ಮೃತಪಟ್ಟವರು.

ಸೆ.5ರಂದು ಅವರು ದನ ಮೇಯಿಸಲು ತೆರಳಿದ್ದರು. ಧಾರಾಕಾರ ಮಳೆಯಿಂದಾಗಿ ಮೂಡಲುಗುಂಡ್ಲದ ನೀರಿನ ಹರಿವಿನಲ್ಲಿ ಹೆಚ್ಚಳವಾಗಿದ್ದು, ಆಕಸ್ಮಿಕವಾಗಿ ನೀರಿನ ಸೆಳೆತಕ್ಕೆ ಸಿಲುಕಿ ನೀರಿನಲ್ಲಿ ಕೊಚ್ಚಿ ಹೋಗಿ ನಾಪತ್ತೆಯಾಗಿದ್ದರು.

ಕುಟುಂಬದವರು, ಸಂಬಂಧಿಕರು ಎಲ್ಲೆಡೆ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಗುರುವಾರ ಮೂಡಲುಗುಂಡ್ಲದ ಮುಳ್ಳಿನ ಪೊದೆಯಲ್ಲಿ ಶವ ದೊರತಿದೆ ಎಂದು ಕವಲಂದೆ ಪೊಲೀಸರು ತಿಳಿಸಿದ್ದಾರೆ.

ಮಗುಚಿದ ರಕ್ಷಣಾ ದೋಣಿ

ಬಳ್ಳಾರಿ ವರದಿ: ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನಲ್ಲಿ ವೇದಾವತಿ ನದಿಯಲ್ಲಿ ಪ್ರವಾಹ ಹೆಚ್ಚಿದೆ. ದೇವಸ್ಥಾನ ದ್ವೀಪವಾಗಿದೆ. ಅಲ್ಲಿ ಸಿಲುಕಿದ್ದ ಎಂಟು ಜನರನ್ನು ರಕ್ಷಿಸಲು ಸಾಗಿದ್ದ ದೋಣಿಯು ಮುಗುಚಿದ್ದು, ನೀರಿನಲ್ಲಿ ಕೊಚ್ಚಿಹೋಯಿತು.

ಇದರಿಂದಾಗಿ, ರಕ್ಷಣಾ ಕಾರ್ಯ ಕೆಲಕಾಲ ಸ್ಥಗಿತಗೊಂಡಿತು. ಬಳಿಕ ಮತ್ತೊಂದು ಬೋಟ್ ಹಾಗೂ ರಕ್ಷಣಾ ತಂಡದೊಂದಿಗೆ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ಮುಂದುವರಿಸಲಾಯಿತು.

ಸಿರುಗುಪ್ಪ ತಾಲ್ಲೂಕಿನಲ್ಲಿ 3,500ಕ್ಕೂ ಹೆಚ್ಚು ಎಕರೆ ಬೆಳೆ ಜಲಾವೃತಗೊಂಡಿದೆ.

ಕಳೆದ ಮೂರು ದಿನಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ 120 ಮತ್ತು ವಿಜಯನಗರ ಜಿಲ್ಲೆಯಲ್ಲಿ 40 ಮನೆಗಳಿಗೆ ಹಾನಿಯಾಗಿದೆ. ಆಂಧ್ರದ ಬೈರವಾನಿತಿಪ್ಪೆ ಜಲಾಶಯದಿಂದ ನೀರು ಬಿಡುತ್ತಿರುವುದರಿಂದ ಇಲ್ಲಿ ಪ್ರವಾಹ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಡ್ಯ: 5 ಮನೆ ಕುಸಿತ

ಮಂಡ್ಯ ವರದಿ: ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಮೂರು, ಮಳವಳ್ಳಿ ಪಟ್ಟಣದಲ್ಲಿ ಎರಡು ಮನೆಗಳು ಕುಸಿದಿದ್ದರೆ, ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಯಲ್ಲಿ ಮನೆಯೊಂದರ ಗೋಡೆ ಕುಸಿದಿದೆ.

ಕೊಚ್ಚಿಹೋಗಿದ್ದ ವ್ಯಕ್ತಿ ಶವ ಪತ್ತೆ: ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಡಿಯಿಟ್ಟು ಬಳಿ ಜಲಾವೃತಗೊಂಡಿದ್ದ ಕೃಷಿ ಭೂಮಿಯಲ್ಲಿ ಅಂಬಳೆ ಗ್ರಾಮದ ಮಂಜು (45) ಅವರ ಶವ ಪತ್ತೆಯಾಗಿದೆ. ಮಂಗಳವಾರ ಸುವರ್ಣಾವತಿ ನದಿಯಲ್ಲಿ ಕೊಚ್ಚಿ ಹೋಗಿದ್ದರು ಎನ್ನಲಾಗಿದೆ.

ಪ್ರವಾಹದಲ್ಲೇ ಆಂಬುಲೆನ್ಸ್ ಚಾಲನೆ



ಮಸ್ಕಿ ಸಮೀಪದ ವೆಂಕಟಾಪುರ ಹಳ್ಳದ ಪ್ರವಾಹದಲ್ಲಿ ಆಂಬುಲೆನ್ಸ್ ಸಾಗಿತು

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ವೆಂಕಟಾಪುರ ಗ್ರಾಮದ ಹಳ್ಳದ ಸೇತುವೆ ಜಲಾವೃತವಾಗಿದ್ದು, ಬುಧವಾರ 108 ಆಂಬುಲೆನ್ಸ್ ಚಾಲಕ ಮಲ್ಲಿಕಾರ್ಜುನ ಅವರು ಗರ್ಭಿಣಿಯನ್ನು ಕರೆದೊಯ್ಯಲು ಹರಸಾಹಸಪಟ್ಟರು. ನೀರಿನಲ್ಲೇ ಚಾಲನೆ ಮಾಡಿ, ಆಸ್ಪತ್ರೆಗೆ ತಲುಪಿಸಿದರು.

ಸಕಾಲದಲ್ಲಿ ಆಸ್ಪತ್ರೆಗೆ ಸೇರಿದ ವೆಂಕಟಾಪುರ ಗ್ರಾಮದ ದುರ್ಗಮ್ಮ (25) ಅವರಿಗೆ ಸುರಕ್ಷಿತವಾಗಿ ಗಂಡು ಮಗುವಿಗೆ ಜನ್ಮ ನೀಡಿದರು. ‘ವೆಂಕಟಾಪುರದಿಂದ 20 ಕಿ.ಮೀ. ದೂರದ ಸಿಂಧನೂರು ತಾಲ್ಲೂಕು ಆಸ್ಪತ್ರೆಗೆ ಹೋಗಲು ಇದೊಂದೇ ಮಾರ್ಗ. ಹೀಗಾಗಿ ಆಂಬುಲೆನ್ಸ್ ಚಾಲಕ ಮತ್ತು ಸಿಬ್ಬಂದಿ ಹೀಗೆ ಸಾಹಸ ಮಾಡಬೇಕಾಯಿತು’ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ ತಿಳಿಸಿದರು.

ಕೇರ್ಗಾಲಿನಲ್ಲಿ 17.7 ಸೆಂ.ಮೀ ಮಳೆ

ಉಡುಪಿ: ಜಿಲ್ಲೆಯಾದ್ಯಂತ ಗುರುವಾರವೂ ಉತ್ತಮ ಮಳೆಯಾಗಿದೆ. ಕೇರ್ಗಾಲುವಿನಲ್ಲಿ ಅತ್ಯಧಿಕ ಅಂದರೆ 17.7 ಸೆಂ.ಮೀ ಮಳೆಯಾಗಿರುವುದು ದಾಖಲಾಗಿದೆ. ಕಾರ್ಕಳ ತಾಲ್ಲೂಕಿನ ಎರ್ಲಪಾಡಿ ಯಲ್ಲಿ ಮನೆಗೆ ಹಾನಿಯಾಗಿದೆ. ಉಳಿದಂತೆ ಉಪ್ಪುಂದದಲ್ಲಿ 14.3 ಸೆಂ.ಮೀ., ಮತ್ತು ಪಡುವರಿಯಲ್ಲಿ 12.8 ಸೆಂ.ಮೀ. ಮಳೆಯಾಗಿದೆ. ಸೆಪ್ಟೆಂಬರ್ 9, 10ರಂದೂ ಭಾರಿ ಮಳೆ ಆಗಬಹುದು. ಮೀನುಗಾರರು ಕಡಲಿಗಿಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ರಸ್ತೆ ಜಲಾವೃತ–ಪರದಾಟ

ಕೋಲಾರ: ಜಿಲ್ಲೆಯಲ್ಲಿ ಮುದುವಾಡಿ ಕೆರೆ ಭರ್ತಿಯಾಗಿ ಕೋಡಿ ಹರಿದಿದ್ದು ಹೋಳೂರು-ಬೆಳ್ಳಂಬರಿ ಸಂಪರ್ಕ ರಸ್ತೆ ಜಲಾವೃತಗೊಂಡಿದೆ. ವಿವಿಧ ಹಳ್ಳಿಗಳಿಂದ ನಗರಕ್ಕೆ ಬರುವ ಜನರು ಹಾಗೂ ವಾಹನ ಸವಾರರು ಪರದಾಡಿದರು.

ತಾಲ್ಲೂಕಿನ ಬೆಳ್ಳಂಬರಿ, ಅರಳಿ ಮರದ ಹೊಳ್ಳಿ, ಖಾನೆ ಗ್ರಾಮ ಜಲಾವೃತವಾಗಿದೆ. ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರು ರಸ್ತೆ ದಾಟಲು ಹರಸಾಹಸಪಟ್ಟರು. ಕೆಲವರು ಕಷ್ಟಪಟ್ಟು ದಾಟಿದರೆ, ಕೆಲವರು ಗಂಟೆಗಟ್ಟಲೆ ಕಾದು ಟ್ರಾಕ್ಟರ್‌ನಲ್ಲಿ ರಸ್ತೆ ದಾಟಿದರು.

ಕಲಬುರಗಿ: ಭಾರಿ ಮಳೆ

ಕಲಬುರಗಿ ವರದಿ: ಕಲಬುರಗಿ ನಗರ ಸೇರಿ ಜಿಲ್ಲೆಯ, ಆಳಂದ, ಕಾಳಗಿ, ಯಡ್ರಾಮಿ, ಚಿತ್ತಾಪುರ ತಾಲ್ಲೂಕಿನ ವಾಡಿ, ಯಡ್ರಾಮಿ ಮತ್ತು ಯಾದಗಿರಿ ನಗರದಲ್ಲಿ ಗುರುವಾರ ಬಿರುಸಿನ ಮಳೆಯಾಯಿತು.

ಆಳಂದ ತಾಲ್ಲೂಕಿನ ದಬ್ದಬ್ಬಿ ಹಳ್ಳ ತುಂಬಿದ್ದು, ಆಳಂದ-ತಡಕಲ್ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿತ್ತು. ರಾಯಚೂರು ಜಿಲ್ಲೆಯ ಕೆಲ ಕಡೆ ಬುಧವಾರ ರಾತ್ರಿ ಮಳೆ ಸುರಿಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.10	20,643	19,573
ಹಾರಂಗಿ	2,859	2,856.60	1,600	1,500
ಕಬಿನಿ	2,284	2,283.64	15,000	15,000
ಹೇಮಾವತಿ	2,922	2,921.90	8,653	9,150
ಲಿಂಗನಮಕ್ಕಿ	1,819	1814.75	5,223	5,092
ಸೂಪಾ (ಮೀ)	564	550.98	3,082	1,494
ಮಾಣಿ	594	589.04	751	-
ತುಂಗಭದ್ರಾ	1,633	1,632.47	82,800	1,04,344
ಮಲಪ್ರಭಾ	2,079.50	2,079.50	3,894	3,894
ಘಟಪ್ರಭಾ	2,175	2,175	2,458	2,458
ಭದ್ರಾ	186	185.3	11,082	8,664
ಆಲಮಟ್ಟಿ (ಮೀ)	519.60	519.60	39,201	35,000
ನಾರಾಯಣಪುರ (ಮೀ)	492.25	491.40	81,000	88,980

* ನೆಲಮಟ್ಟದಿಂದ

‘10 ದಿನದೊಳಗೆ ಕೇಂದ್ರಕ್ಕೆ ವರದಿ’

ಹುಬ್ಬಳ್ಳಿ: ‘ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಪ್ರದೇಶಗಳ ವೀಕ್ಷಣೆ ಪೂರ್ಣಗೊಂಡ ನಂತರ 10 ದಿನಗಳೊಳಗೆ ಕೇಂದ್ರ ಸರ್ಕಾರಕ್ಕೆ ನಷ್ಟದ ಬಗ್ಗೆ ವಿಸ್ತೃತ ವರದಿ ಸಲ್ಲಿಸುತ್ತೇವೆ’ ಎಂದು ಕೇಂದ್ರ ಸರ್ಕಾರದ ಅಂತರ್ ಸಚಿವಾಲಯದ ಅಧಿಕಾರಿಗಳ ಅಧ್ಯಯನ ತಂಡದ ಸದಸ್ಯ ಅಶೋಕಕುಮಾರ್ ಹೇಳಿದರು.

ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಹುಬ್ಬಳ್ಳಿ ತಾಲ್ಲೂಕಿನ ಕಿರೇಸೂರ ಗ್ರಾಮಕ್ಕೆ ಗುರುವಾರ ಭೇಟಿ ನೀಡಿದ ನಂತರ ಸುದ್ದಿಗಾರರ ಜೊತೆ ಅವರು ಮಾತನಾಡಿದರು. ‘ಅತಿವೃಷ್ಟಿಯಿಂದ ಧಾರವಾಡ ಜಿಲ್ಲೆಯಲ್ಲಿ ಆಗಿರುವ ಹಾನಿಯನ್ನು ಅಧ್ಯಯನ ಮಾಡಲಾಗುತ್ತಿದೆ. ಜಿಲ್ಲಾಡಳಿತವು ಕಳೆದ ಎರಡು ಮೂರು ದಿನಗಳಲ್ಲಿ ನಷ್ಟದ ಮಾಹಿತಿಯನ್ನು ಕ್ರೋಡೀಕರಿಸಿ ಒದಗಿಸಲಿದೆ. ಎಲ್ಲಾ ಮಾಹಿತಿಯನ್ನು ಮೌಲ್ಯಮಾಪನ ಮಾಡಿ ಹತ್ತು ದಿನಗಳೊಳಗೆ ಕೇಂದ್ರ ಸರ್ಕಾರಕ್ಕೆ ತಂಡವು ವರದಿ ಸಲ್ಲಿಸಲಿದೆ’ ಎಂದು ತಿಳಿಸಿದರು.

ವಿಜಯಪುರ, ಧಾರವಾಡ, ಉತ್ತರ ಕನ್ನಡ ಹಾಗೂ ಗದಗ ಜಿಲ್ಲೆಯ ಅತಿವೃಷ್ಟಿ ಹಾಗೂ ಪ್ರವಾಹ ಪೀಡಿತ ಪ್ರದೇಶಗಳಿಗೂ ಕೇಂದ್ರ ಅಧ್ಯಯನ ತಂಡ ಭೇಟಿ ನೀಡಿದೆ.

ಗದಗ: ಉಗ್ರಾಣಕ್ಕೆ ನುಗ್ಗಿದ ನೀರು, ಔಷಧ ಹಾಳು

ಗದಗ: ಇಲ್ಲಿನ ಜಿಲ್ಲಾ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿನ ಔಷಧ ಉಗ್ರಾಣಕ್ಕೆ ಮಳೆ ನೀರು ನುಗ್ಗಿದ್ದು, ಕೋಟ್ಯಂತರ ಮೌಲ್ಯದ ಔಷಧಗಳು ನೀರಿನಲ್ಲಿ ತೇಲುತ್ತಿವೆ. ಅವುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಸಿಬ್ಬಂದಿ ಗುರುವಾರ ಹರಸಾಹಸಪಟ್ಟರು.

‘ನಿರಂತರ ಮಳೆಯ ನೀರು ಔಷಧ ಉಗ್ರಾಣಕ್ಕೆ ನುಗ್ಗಿದೆ. ಇಲ್ಲಿ ಅಂದಾಜು ₹3 ರಿಂದ ₹4 ಕೋಟಿ ಮೌಲ್ಯದ ಔಷಧವಿತ್ತು. ಮಳೆಯಿಂದಾಗಿ ₹ 8 ರಿಂದ ₹ 10 ಲಕ್ಷ ಮೌಲ್ಯದ ಔಷಧಗಳಿಗೆ ಹಾನಿಯಾಗಿದೆ’ ಎಂದು ಜಿಮ್ಸ್ ನಿರ್ದೇಶಕ ಡಾ. ರೇಖಾ ಸೋನಾವಣೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಾಕೃತಿಕ ವಿಕೋಪ ತಡೆಯಲು ಸಾಧ್ಯವಿಲ್ಲ. ಜಿಲ್ಲಾ ಆಸ್ಪತ್ರೆ ನೆಲಮಹಡಿಯಲ್ಲೇ ವಿದ್ಯುತ್ ಪೂರೈಕೆ ನಿರ್ವಹಣಾ ಕೊಠಡಿ ಇತ್ತು. ಆಸ್ಪತ್ರೆಗೆ ನೀರು ನುಗ್ಗಿದರೂ ಜೀವ ಹಾನಿ ಆಗಿಲ್ಲ ಎಂಬುದೇ ನೆಮ್ಮದಿ ತರಿಸಿದೆ’ ಎಂದು ಹೇಳಿದರು.

‘ಹೆಚ್ಚಿನ ಔಷಧಗಳಿಗೆ ಪ್ಲಾಸ್ಟಿಂಗ್ ಕೋಟಿಂಗ್ ಇದ್ದು, ಬಳಸಬಹುದಾಗಿದೆ. ನೀರಿನಲ್ಲಿ ತೊಯ್ದಿರುವ ಔಷಧಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮವಹಿಸಿದ್ದು, ರೋಗಿಗಳಿಗೆ ಔಷಧಗಳ ಕೊರತೆ ಆಗದಂತೆ ನೋಡಿಕೊಳ್ಳಲಾಗುವುದು’ ಎಂದೂ ತಿಳಿಸಿದರು.

ವಾಣಿ ವಿಲಾಸ ಸಾಗರ ಸುರಕ್ಷಿತ: ಕಾರಜೋಳ

ಬೆಂಗಳೂರು: ‘ವಾಣಿ ವಿಲಾಸ (ವಿವಿ) ಸಾಗರ ಜಲಾಶಯದ ಸುರಕ್ಷತೆ ಬಗ್ಗೆ ಯಾವುದೇ ಆತಂಕ ಅಗತ್ಯ ಇಲ್ಲ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸ್ಪಷ್ಟಪಡಿಸಿದ್ದಾರೆ.

‘ವಾಣಿವಿಲಾಸ ಸಾಗರ ಜಲಾಶಯಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಜ್ಞರ ಸಮಿತಿ ಗುರುವಾರ (ಸೆ.8) ಭೇಟಿ ನೀಡಿ ಸಮಗ್ರವಾಗಿ ಪರಿಶೀಲಿಸಿದೆ. ಅಲ್ಲದೆ, ಅಣೆಕಟ್ಟೆಯ ಯಾವುದೇ ಭಾಗದಲ್ಲಿ ನೀರು ಸೋರುವಿಕೆ ಇಲ್ಲ. ಸುರಕ್ಷತೆಗೂ ತೊಂದರೆ ಇಲ್ಲವೆಂದು ವರದಿ ನೀಡಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ಅಣೆಕಟ್ಟೆಯ ಗರಿಷ್ಠ ಮಟ್ಟ 142 ಅಡಿ. ಪ್ರಸ್ತುತ ನೀರಿನ ಸಂಗ್ರಹ 135 ಅಡಿ ಇರುವುದಾಗಿ ಅಣೆಕಟ್ಟೆಗೆ ಭೇಟಿ ನೀಡಿರುವ ತಜ್ಞರು ತಿಳಿಸಿದ್ದಾರೆಂದು ಭದ್ರಾ ಮೇಲ್ದಂಡೆ ಯೋಜನಾ ವಲಯದ ಮುಖ್ಯ ಎಂಜಿನಿಯರ್ ವರದಿ ಸಲ್ಲಿಸಿದ್ದಾರೆ. ಹೀಗಾಗಿ ಯಾವುದೇ ಆತಂಕಕ್ಕೆ ಕಾರಣವಿಲ್ಲ’ ಎಂದೂ ಅವರು ವಿವರಿಸಿದ್ದಾರೆ.

ಕ್ಷೇತ್ರದಲ್ಲಿ ಭವಾನಿ ರೇವಣ್ಣ ಓಡಾಟ • ಸ್ವರೂಪ್ ಬೆಂಬಲಿಗರಿಂದಲೂ ಬೇಡಿಕೆ

ಹಾಸನ ಟಿಕೆಟ್: ಜೆಡಿಎಸ್‌ನಲ್ಲಿ ಹೆಚ್ಚಿದ ಕುತೂಹಲ

• ಚಿದಂಬರಪ್ರಸಾದ

ಹಾಸನ: ಜಿಲ್ಲೆಯ ಜಿದ್ದಾಜಿದ್ದಿನ ಕ್ಷೇತ್ರವಾಗಿರುವ ಹಾಸನ ವಿಧಾನಸಭಾ ಕ್ಷೇತ್ರವನ್ನು ಮತ್ತೆ ವಶಕ್ಕೆ ಪಡೆಯಲು ಮುಂದಾಗಿರುವ ಜೆಡಿಎಸ್, ಯಾರಿಗೆ ಟಿಕೆಟ್ ನೀಡಲಿದೆ ಎನ್ನುವ ಕುತೂಹಲ ಹೆಚ್ಚಾಗುತ್ತಿದೆ. ಭವಾನಿ ರೇವಣ್ಣ ಸ್ಪರ್ಧಿಸಲಿದ್ದಾರೆ ಎಂಬ ಮಾತುಗಳು ಒಂದೆಡೆ ಕೇಳಿ ಬರುತ್ತಿವೆ. ಇನ್ನೊಂದೆಡೆ, ಮಾಜಿ ಶಾಸಕ ಎಚ್. ಎಸ್. ಪ್ರಕಾಶ್ ಅವರ ಪುತ್ರ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎಚ್.ಪಿ.ಸ್ವರೂಪ್ ಅವರಿಗೇ ಟಿಕೆಟ್ ನೀಡಬೇಕೆಂಬ ಒತ್ತಾಯವೂ ಕೇಳಿ ಬರುತ್ತಿದೆ.

ಸದ್ಯ ಹಾಸನದಲ್ಲಿ ಬಿಜೆಪಿಯ ಪ್ರೀತಂ ಗೌಡ ಶಾಸಕರಾಗಿದ್ದು, ಈ ಬಾರಿ ಜೆಡಿಎಸ್‌ನಿಂದ ಪ್ರಬಲ ಪೈಪೋಟಿ ಎದುರಿಸುವ ಸಾಧ್ಯತೆ ಇದೆ. ಕ್ಷೇತ್ರದಲ್ಲಿ ಹೇಗಾದರೂ ಮಾಡಿ, ಮತ್ತೊಮ್ಮೆ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂಬ ಲೆಕ್ಕಾಚಾರ ಜೆಡಿಎಸ್ ಮುಖಂಡರದ್ದು.

ಹಾಸನದತ್ತಲೇ ರೇವಣ್ಣ ಚಿತ್ತ

ಇತ್ತೀಚಿನ ಕೆಲದಿನಗಳಲ್ಲಿ ಶಾಸಕ ಎಚ್.ಡಿ. ರೇವಣ್ಣ ಅವರು ಹಾಸನ ಕ್ಷೇತ್ರದ ಸಮಸ್ಯೆಗಳ ಬಗ್ಗೆಯೇ ಹೆಚ್ಚು ಪ್ರಸ್ತಾಪಿಸುತ್ತಿದ್ದು, ಈ ಬಾರಿ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಇರಾದೆಯಲ್ಲಿ ಇದ್ದಂತೆ ತೋರುತ್ತಿದೆ ಎಂದು ಹೇಳಲಾಗುತ್ತಿದೆ.

ಇದು ಶಾಸಕ ಪ್ರೀತಂ ಗೌಡರ ಅಸಮಾಧಾನಕ್ಕೂ ಕಾರಣವಾಗಿದೆ. ‘ದಿನ ಬೆಳಗಾದರೆ ಹಾಸನ ಕ್ಷೇತ್ರದ ಕುರಿತು ಪತ್ರಿಕಾಗೋಷ್ಠಿ ನಡೆಸುವ ರೇವಣ್ಣ ಅವರಿಂದ ಕಿರಿಕಿರಿ ಆಗುತ್ತಿದೆ. ಅವರಿಗೆ ಈ ಕ್ಷೇತ್ರದ ಬಗ್ಗೆ ಆಸಕ್ತಿ ಇದ್ದರೆ ನನ್ನ ವಿರುದ್ಧ ಸ್ಪರ್ಧಿಸಿ ಗೆಲ್ಲಲಿ’ ಎಂದು ಆಹ್ವಾನವನ್ನೂ ನೀಡಿದ್ದಾರೆ.



ಹಾಸನ ಕ್ಷೇತ್ರದ ಟಿಕೆಟ್ ಬಗ್ಗೆ ಚರ್ಚೆಯಾಗಿಲ್ಲ. ನನಗಂತೂ ಗೊತ್ತಿಲ್ಲ. ಅದನ್ನು ವರಿಷ್ಠರು ನೋಡಿಕೊಳ್ಳುತ್ತಾರೆ. ಹಾಸನಕ್ಕೆ ನಿರಂತರವಾಗಿ ಬರುತ್ತಿರುತ್ತೇನೆ

ಭವಾನಿ ರೇವಣ್ಣ, ಜಿ.ಪಂ. ಮಾಜಿ ಸದಸ್ಯೆ



ಚುನಾವಣೆಯಲ್ಲಿ ಪ್ರತಿ ಪಕ್ಷದವರೂ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವ ಲೆಕ್ಕಾಚಾರ ಮಾಡುವುದು ಸಹಜ. ಆದರೆ, ಮತದಾರರ ನಿರ್ಣಯವೇ ಅಂತಿಮ

ಪ್ರೀತಂ ಗೌಡ, ಹಾಸನ ಶಾಸಕ



ಟಿಕೆಟ್ ಕುರಿತು ಪಕ್ಷದ ವರಿಷ್ಠರು ತೀರ್ಮಾನಿಸಲಿದ್ದಾರೆ. ಹಿರಿಯರಾದ ಎಚ್.ಡಿ.ರೇವಣ್ಣ ಅವರ ನೇತೃತ್ವದಲ್ಲಿ ಪಕ್ಷ ಸಂಘಟನೆ ಮಾಡುತ್ತಿದ್ದೇನೆ

ಎಚ್.ಪಿ.ಸ್ವರೂಪ್

ಜಿ.ಪಂ. ಮಾಜಿ ಉಪಾಧ್ಯಕ್ಷ

ಅದಕ್ಕಾಗಿಯೇ ಭವಾನಿ ರೇವಣ್ಣ ಇತ್ತೀಚೆಗೆ ಹಾಸನ ನಗರದಲ್ಲಿ ಸಂಚರಿಸಿ, ಗಣೇಶ ಪೆಂಡಾಲ್‌ಗಳಿಗೆ ಭೇಟಿ ನೀಡಿದ್ದಾರೆ. ಜನರೊಂದಿಗೆ ಮಾತುಕತೆ ನಡೆಸಿದ್ದಾರೆ. ಕ್ಷೇತ್ರದಲ್ಲಿ ಮಹಿಳೆಯೊಬ್ಬರಿಗೆ ಟಿಕೆಟ್ ನೀಡಿದರೆ, ಗೆಲುವಿಗೆ ಸುಲಭವಾಗಲಿದೆ. ಮಹಿಳಾ ಮತದಾರರು ಜೆಡಿಎಸ್‌ಗೆ ಬೆಂಬಲ ನೀಡಲಿದ್ದಾರೆ ಎನ್ನುವ ಲೆಕ್ಕಾಚಾರವೂ ಇದೆ.

ಕೆಲ ತಿಂಗಳ ಹಿಂದೆ ಜಿಲ್ಲೆಗೆ ಬಂದಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಎಚ್.ಪಿ. ಸ್ವರೂಪ್ ಅವರಿಗೆ ಸಿದ್ಧತೆ ಮಾಡಿಕೊಳ್ಳುವಂತೆ ಪರೋಕ್ಷ ಸೂಚನೆ ನೀಡಿದ್ದರು. ಅದರಂತೆ ಅವರೂ ಬೆಂಬಲಿಗರೊಂದಿಗೆ ಸಿದ್ಧತೆಯಲ್ಲಿ ತೊಡಗಿದ್ದಾರೆ. ಈ ಮಧ್ಯೆ ಭವಾನಿ ರೇವಣ್ಣ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಸ್ವರೂಪ್ ಬೆಂಬಲಿಗರ ಆಕ್ರೋಶಕ್ಕೆ ಕಾರಣವಾಗಿದೆ.

ನಗರದಲ್ಲಿ ಇತ್ತೀಚೆಗೆ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲೂ ಆಕ್ರೋಶ ಮಾರ್ದನಿಸಿದೆ. ‘ಸ್ವರೂಪ್ ಅವರಿಗೇ ಟಿಕೆಟ್ ನೀಡಬೇಕು’ ಎಂದು ಬೆಂಬಲಿಗರು ಆಗ್ರಹಿಸಿದ್ದಕ್ಕೆ ಎಚ್.ಡಿ. ರೇವಣ್ಣ ಕೆಂಡಾಮಂಡಲರಾಗಿದ್ದರು. ಆ ಹಿನ್ನೆಲೆಯಲ್ಲೇ, ‘ಪಕ್ಷ ಮತ್ತೆ ಕುಟುಂಬ ರಾಜಕಾರಣವನ್ನೇ ಮಾಡುತ್ತಿದೆ’ ಎಂದು ಕಾರ್ಯಕರ್ತರು ಆರೋಪಿಸುತ್ತಿದ್ದಾರೆ.

ವಿಟಿಯು: ಮೂರೇ ತಿಂಗಳಿಗೆ ಸೆಮಿಸ್ಟರ್ ಪೂರ್ಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯ (ವಿಟಿಯು) ಮೂರೇ ತಿಂಗಳಿಗೆ ಸೆಮಿಸ್ಟರ್ ಮುಗಿಸಿ, ಪರೀಕ್ಷೆ ನಡೆಸಲು ಮುಂದಾಗಿರುವುದಕ್ಕೆ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಟಿಯು ವ್ಯಾಪ್ತಿಯಲ್ಲಿ 208 ಎಂಜಿನಿಯರಿಂಗ್ ಕಾಲೇಜುಗಳಿದ್ದು, 2.65 ಲಕ್ಷ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ. ಮೇ 23ರಂದು ಎರಡು, ನಾಲ್ಕು ಹಾಗೂ ಆರನೇ ಸೆಮಿಸ್ಟರ್‌ಗಳು ಆರಂಭವಾಗಿದ್ದವು. ನಿಯಮದಂತೆ ಬೋಧನೆಯ ಅವಧಿ ಕನಿಷ್ಠ 4 ತಿಂಗಳು ಇರಬೇಕು. ಆದರೆ, ಶೇ 70ರಷ್ಟು ಪಾಠಗಳು ಪೂರ್ಣವಾಗುವ ಮುನ್ನವೇ ಪರೀಕ್ಷಾ ವೇಳಾಪಟ್ಟಿ (ಸೆ.17ರಂದು ಆರಂಭ) ಪ್ರಕಟಿಸಲಾಗಿದೆ.

ನಾಲ್ಕು ವರ್ಷಗಳ ಎಂಜಿನಿಯರಿಂಗ್ ಪದವಿ ಶಿಕ್ಷಣದಲ್ಲಿ ಕೌಶಲದ ವಿಷಯ, ತಾಂತ್ರಿಕ, ಬೌದ್ಧಿಕ ವಿಷಯಗಳಿರುತ್ತವೆ. ಅವುಗಳಲ್ಲಿ ಕೆಲ ಅಂಶಗಳನ್ನು ಕಡಿತಗೊಳಿಸಲಾಗಿದೆ ಎಂದು ವಿಶ್ವವಿದ್ಯಾಲಯ ಹೇಳಿದರೂ, ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಸೂಕ್ತ ಮಾಹಿತಿ ಇಲ್ಲ. ಅಧ್ಯಾಪಕರು ಪಠ್ಯಕೌಶಲ ಕಲಿಸದೆ, ಪಠ್ಯಕ್ರಮ ಪೂರ್ಣಗೊಳಿಸುತ್ತಿದ್ದಾರೆ.

ಹಲವು ಕಾಲೇಜುಗಳಲ್ಲಿ ಬೆಳಗ್ಗೆ 7ರಿಂದ ಸಂಜೆ 5ರವರೆಗೆ ಕಾಲೇಜುಗಳು ನಡೆಯುತ್ತವೆ. ಫಲಿತಾಂಶವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಕೆಲವು ಕಾಲೇಜುಗಳು ಸಂಜೆ 6.30ರಿಂದ 11ರವರೆಗೆ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿವೆ. ಮೂರು ತಿಂಗಳಲ್ಲಿ ಸರಾಸರಿ ಏಳು ಪತ್ರಿಕೆ, ಎರಡು ಪ್ರಾಕ್ಟಿಕಲ್, ಅಸೈನ್ಮೆಂಟ್, ಇಂಟರ್ನಲ್ಸ್ ಎಂದು ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಪ್ರಾಧ್ಯಾಪಕರು ಬಿಡುವು ನೀಡದೇ ಪಠ್ಯ ವಿಷಯಗಳನ್ನು ತಲೆಗೆ ತುಂಬುತ್ತಿದ್ದಾರೆ ಎನ್ನುವುದು ಬಹುತೇಕ ವಿದ್ಯಾರ್ಥಿಗಳ ಅಳಲು.

ಪದವಿ ಕಾಲೇಜುಗಳಲ್ಲೂ ಪರದಾಟ: ಪೂರ್ವಸಿದ್ಧತೆ ಮಾಡಿಕೊಳ್ಳದೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದ ಪದವಿ ಕಾಲೇಜುಗಳಲ್ಲಿ ತರಾತುರಿಯಲ್ಲಿ ಅನುಷ್ಠಾನಗೊಳಿಸಿದ್ದರಿಂದ ಸಕಾಲಕ್ಕೆ ಸೆಮಿಸ್ಟರ್‌ಗಳನ್ನು ಮುಗಿಸಲು ಸಾಧ್ಯವಾಗಿಲ್ಲ. ಮೊದಲನೇ ಸೆಮಿಸ್ಟರ್‌ಗೆ ಹೆಚ್ಚು ಸಮಯ ತೆಗೆದುಕೊಂಡ ಕಾಲೇಜುಗಳು, ಅಲ್ಪಾವಧಿಯಲ್ಲೇ 2ನೇ ಸೆಮಿಸ್ಟರ್ ಮುಗಿಸುವ ಒತ್ತಡ ಎದುರಿಸುತ್ತಿವೆ.

ಎರಡನೇ ಸೆಮಿಸ್ಟರ್ ಮುಗಿಯುವ ಮೊದಲೇ ಹಲವು ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಪ್ರಥಮ ವರ್ಷದ ತರಗತಿಗಳನ್ನು ಸೆ.1ರಿಂದ ನಡೆಸಲಾಗುತ್ತಿದೆ. ಇದರಿಂದ ಮೊದಲ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣಗೊಂಡಿದೆ. ಕೊಠಡಿಗಳಿಲ್ಲದೆ ಹೊಸ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ.

‘ಒಂದೇ ಕೊಠಡಿಯಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತುಂಬಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಹಳೆಯ ವಿದ್ಯಾರ್ಥಿಗಳು ಹೋಗದ ಕಾರಣ ಹಾಸ್ಟೆಲ್‌ಗಳಲ್ಲೂ ಪ್ರವೇಶ ದೊರೆತಿಲ್ಲ’ ಎನ್ನುತ್ತಾರೆ ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿ ಆರ್. ಕೆ.ಮಂಜುನಾಥ್.

ಅಂಕಿ-ಅಂಶಗಳು

208 ಎಂಜಿನಿಯರಿಂಗ್ ಕಾಲೇಜುಗಳು

2.65 ಲಕ್ಷ ಎಂಜಿನಿಯರಿಂಗ್ ವಿದ್ಯಾರ್ಥಿಗಳು

430 ರಾಜ್ಯದ ಪದವಿ ಕಾಲೇಜುಗಳು

3.5 ಲಕ್ಷ ಪದವಿ ಕಾಲೇಜು ವಿದ್ಯಾರ್ಥಿಗಳು

ಎಐಸಿಟಿಇ ಅನ್ವಯವೇ ಶೈಕ್ಷಣಿಕ, ಪರೀಕ್ಷಾ ವೇಳಾಪಟ್ಟಿ ನಿಗದಿ ಮಾಡಲಾಗಿದೆ. ಪಾಠಗಳನ್ನೂ ಪೂರ್ಣಗೊಳಿಸಲಾಗಿದೆ. ವಿದ್ಯಾರ್ಥಿಗಳ ಆರೋಪದಲ್ಲಿ ಹುರುಳಿಲ್ಲ

ಪ್ರೊ.ರಂಗಸ್ವಾಮಿ, ಪರೀಕ್ಷಾಂಗ ಕುಲಸಚಿವ, ವಿಟಿಯು

ವಿವಿಧ ನೇಮಕಾತಿ ಪರೀಕ್ಷೆ ಅಕ್ರಮ : ಆರೋಪಿ ಬಂಧನ

ಬೆಳಗಾವಿ: ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನಡೆದ ಈವರೆಗಿನ ವಿವಿಧ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಲು ಎಲೆಕ್ಟ್ರಾನಿಕ್ ಉಪಕರಣಗಳನ್ನು ಪೂರೈಸುತ್ತಿದ್ದ ಪ್ರಮುಖ ಆರೋಪಿಯನ್ನು ಬೆಳಗಾವಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಬೆಂಗಳೂರಿನ ದೇವಸಂದ್ರದ ನಿವಾಸಿ, ಎಸ್ಪಿ ರಸ್ತೆಯಲ್ಲಿ ‘ಸ್ಪೈ ಜೋನ್’ ಎಂಬ ಎಲೆಕ್ಟ್ರಾನಿಕ್ ಮಳಿಗೆ ಇಟ್ಟುಕೊಂಡ ಮಹಮ್ಮದ್ ಅಜೀಮುದ್ದೀನ್ (37) ಬಂಧಿತ ಆರೋಪಿ. ವಿವಿಧ ನೇಮಕಾತಿ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳಿಗೆ ಅಕ್ರಮ ಎಸಗಲು ಪೂರೈಸಿದ ಹಲವು ಎಲೆಕ್ಟ್ರಾನಿಕ್ ಉಪಕರಣಗಳನ್ನೂ ಈತನಿಂದ ವಶಕ್ಕೆ ಪಡೆಯಲಾಗಿದ್ದು, ಮಳಿಗೆ ಸೀಜ್ ಮಾಡಲಾಗಿದೆ.

12ಕ್ಕೆ ಪಿಯು ಪೂರಕ ಪರೀಕ್ಷೆ ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಯ ಫಲಿತಾಂಶ ಸೆ.12ರಂದು ಬೆಳಿಗ್ಗೆ 11ಕ್ಕೆ ಪ್ರಕಟಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ದ್ವಿತೀಯ ಪಿಯು ಪೂರಕ ಪರೀಕ್ಷೆಗಳು ಆ.12ರಿಂದ 25ರವರೆಗೆ ನಡೆದಿದ್ದವು. 1,85,270 ವಿದ್ಯಾರ್ಥಿಗಳು ಪೂರಕ ಪರೀಕ್ಷೆ ತೆಗೆದುಕೊಂಡಿದ್ದರು.

ಎಸ್‌ಡಿಪಿಐ ಮುಖಂಡ ರಿಯಾಜ್ ಮನೆ ಮೇಲೆ ಎನ್‌ಐಎ ದಾಳಿ



ರಿಯಾಜ್ ಫರಂಗಿಪೇಟೆ

ಮಂಗಳೂರು: ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳ ತಂಡವು ಬಿ.ಸಿ. ರೋಡ್ ಕೈಕಂಬ ಬಳಿಯ ಪರ್ಲಿಯಾದಲ್ಲಿರುವ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ರಾಷ್ಟ್ರೀಯ ಕಾರ್ಯದರ್ಶಿ ರಿಯಾಜ್ ಫರಂಗಿಪೇಟೆ ಅವರ ಮನೆ ಮೇಲೆ ಗುರುವಾರ ದಾಳಿ ನಡೆಸಿ, ಪರಿಶೀಲನೆ ನಡೆಸಿದೆ.

ಈ ವೇಳೆ ಸ್ಥಳದಲ್ಲಿ ಜಮಾಯಿಸಿದ ಎಸ್‌ಡಿಪಿಐ ಕಾರ್ಯಕರ್ತರು, ‘ಪಕ್ಷದ ನಾಯಕರಿಗೆ ವಿನಾ ಕಾರಣ ಕಿರುಕುಳ ನೀಡಲಾಗುತ್ತಿದೆ’ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ರಿಯಾಜ್, ‘ಎನ್‌ಐಎ ಅಧಿಕಾರಿಗಳು ಬಿಹಾರದ ಪ್ರಕರಣವೊಂದರ ವಿಚಾರಣೆ ಸಲುವಾಗಿ ಬೆಳಿಗ್ಗೆ ನನ್ನ ಮನೆಗೆ ಬಂದಿದ್ದರು. ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ದಾಖಲೆಗಳನ್ನು ಪರಿಶೀಲಿಸಿದ್ದಾರೆ’ ಎಂದು ತಿಳಿಸಿದರು.

‘ಸತ್ಯ ಏನೆಂದು ಎನ್‌ಐಎಯವರು ಜನತೆಗೆ ತಿಳಿಸಬೇಕು. ಯಾರಿಗೂ ಅನ್ಯಾಯ ಆಗುವುದಕ್ಕೆ ಎನ್‌ಐಎ ಅವಕಾಶ ನೀಡಬಾರದು’ ಎಂದು ಅವರು ಒತ್ತಾಯಿಸಿದರು.

‘ಅಮಾನವೀಯ ಕೃತ್ಯಗಳನ್ನು ಸಂಘ ಪರಿವಾರ ನಡೆಸುತ್ತಿದೆ. ಬಿಜೆಪಿ ಇದಕ್ಕೆ ಸಂಪೂರ್ಣ ಬೆಂಬಲವನ್ನು ನೀಡುತ್ತಿದೆ. ಎನ್‌ಐಎ ಅಧಿಕಾರಿಗಳು ಹಾಗೂ ವಿಶೇಷ ತನಿಖಾ ತಂಡಗಳು ಹೇಗೆ ನಮ್ಮ ಮನೆ ಬಾಗಿಲಿಗೆ ಬರುತ್ತವೆಯೋ, ಅದೇ ರೀತಿ ಸಂಘ ಪರಿವಾರದವರ ಮನೆ ಬಾಗಿಲಿಗೂ ಭೇಟಿ ನೀಡಲಿ. ಅವರ ಮುಖಂಡರನ್ನೂ ವಿಚಾರಣೆಗೆ ಒಳಪಡಿಸಲಿ’ ಎಂದು ಆಗ್ರಹಿಸಿದರು.

‘ರಿಯಾಜ್ ಫರಂಗಿಪೇಟೆ ಅವರ ಮನೆ ಮೇಲೆ ಎನ್‌ಐಎ ದಾಳಿ ನಡೆಸಿದ್ದು, ಬಿಜೆಪಿ ಜಿಲ್ಲಾ ಯುವ ಮೋರ್ಚಾದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿದ್ದಲ್ಲ’ ಎಂದು ಸ್ಥಳೀಯ ಪೊಲೀಸ್ ಮೂಲಗಳು ತಿಳಿಸಿವೆ.

ಬಿಹಾರದ ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ ಎಂಬ ಮಾಹಿತಿಯನ್ನು ಎನ್‌ಐಎ ಅಥವಾ ರಿಯಾಜ್ ಫರಂಗಿಪೇಟೆ ಅವರು ಬಹಿರಂಗಪಡಿಸಿಲ್ಲ.

ಈ ವರ್ಷ 33 ಲಕ್ಷ ರೈತರಿಗೆ ಸಾಲ: ಸೋಮಶೇಖರ್

ನವದೆಹಲಿ: ‘ಕರ್ನಾಟಕದಲ್ಲಿ 2022-23ನೇ ಸಾಲಿನಲ್ಲಿ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ₹24 ಸಾವಿರ ಕೋಟಿ ಕೃಷಿ ಸಾಲ ವಿತರಿಸುವ ಗುರಿ ಇದೆ. ಅದರಲ್ಲಿ 3 ಲಕ್ಷ ಹೊಸ ರೈತರಿಗೆ ಸಾಲ ನೀಡುವ ಗುರಿ ಹೊಂದಲಾಗಿದೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಇಲ್ಲಿ ಗುರುವಾರ ನಡೆದ ರಾಜ್ಯ ಸಹಕಾರ ಸಚಿವರ ಸಮ್ಮೇಳನದಲ್ಲಿ ಅವರು ಮಾತನಾಡಿ, ‘ಕೇಂದ್ರ ಪ್ರಾಯೋಜಿತ ಯೋಜನೆಯಡಿ ₹228 ಕೋಟಿ ವೆಚ್ಚದಲ್ಲಿ 5,852 ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಕಂಪ್ಯೂಟರೀಕರಣ ಮಾಡಲಾಗುತ್ತಿದೆ’ ಎಂದರು.

‘ಸಹಕಾರ ಸಂಘಗಳ ಸದಸ್ಯರು ಮತ್ತು ಕುಟುಂಬದವರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಯಶಸ್ವಿನಿ ಆರೋಗ್ಯ ಯೋಜನೆಯನ್ನು ಮರು ಆರಂಭಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರ ₹300 ಕೋಟಿ ಮೀಸಲಿರಿಸಿದೆ’ ಎಂದು ಅವರು ಹೇಳಿದರು.

ರಾಜ್ಯದ 16 ಹಾಲು ಒಕ್ಕೂಟಗಳು ಪ್ರತಿದಿನ 85 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿದೆ. ಕರ್ನಾಟಕ ಮತ್ತು ನೆರೆಯ ರಾಜ್ಯಗಳಲ್ಲಿ 100 ಕ್ಕೂ ಹೆಚ್ಚು ವಿವಿಧ ಹಾಲಿನ ಉತ್ಪನ್ನಗಳು ಜನಪ್ರಿಯವಾಗಿವೆ ಎಂದರು.

ವಿರಳ ಕಾಯಿಲೆ: ಪರಿಶಿಷ್ಟರಿಗೆ ಚಿಕಿತ್ಸೆ

ಬೆಂಗಳೂರು: ‘ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ’ ಯೋಜನೆಯಡಿ ಪರಿಶಿಷ್ಟ ಜಾತಿ (ಎಸ್ಸಿ) ಹಾಗೂ ಪರಿಶಿಷ್ಟ ಪಂಗಡದವರಿಗೆ (ಎಸ್ಟಿ) ವಿರಳ ಕಾಯಿಲೆಗಳಿಗೂ ಚಿಕಿತ್ಸಾ ವೆಚ್ಚ ಭರಿಸುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ.

ಈಯೋಜನೆಯಡಿ ಎಸ್ಸಿ ಮತ್ತು ಎಸ್ಟಿ ವರ್ಗದವರಿಗೆ ಹೆಚ್ಚು ಚಿಕಿತ್ಸಾ ವೆಚ್ಚ ತಗುಲುವ ಕಾಯಿಲೆಗಳಿಗೂ ನೀಡುವ ಉಚಿತ ಚಿಕಿತ್ಸೆಯ ವೆಚ್ಚವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ಭರಿಸಲಾಗುತ್ತದೆ. ಕುಸುಮ ರೋಗ, ಥಲಸೀಮಿಯಾ, ಸಿಕಲ್ ಸೆಲ್ ಅನಿಮಿಯಾ ಮೊದಲಾದ ವಿರಳ ಕಾಯಿಲೆಗಳಿಗೆ ಯೋಜನೆಯಡಿ ಈ ಮೊದಲು ಚಿಕಿತ್ಸೆ ದೊರೆಯುತ್ತಿರಲಿಲ್ಲ. ಆದ್ದರಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವಿರಳ ಕಾಯಿಲೆಗಳ ಚಿಕಿತ್ಸೆ ಹಾಗೂ ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿ, ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಪ್ರಸ್ತಾವನೆಗೆ ಸರ್ಕಾರ ಒಪ್ಪಿಗೆ ನೀಡಿ ಆದೇಶ ಹೊರಡಿಸಿದೆ. ಇದರ ಜತೆಗೆ ಅಧಿಕ ವೆಚ್ಚ ತಗುಲುವ ಕಾಯಿಲೆಗಳ ಚಿಕಿತ್ಸಾ ವಿಧಾನಗಳನ್ನು ಗುರುತಿಸಿ, ಅವುಗಳಿಗೂ ವೆಚ್ಚ ನಿಗದಿ ಮಾಡಲಾಗಿದೆ.

ವಿರಳ ಕಾಯಿಲೆ ಹಾಗೂ ಅಧಿಕ ವೆಚ್ಚ ತಗುಲುವ ಚಿಕಿತ್ಸೆಗೆ ಗಿರಿಜನ ಉಪಯೋಜನೆಯಡಿ ₹ 7.39 ಕೋಟಿ, ಪರಿಶಿಷ್ಟ ಜಾತಿ ಉಪಯೋಜನೆಯಡಿ ₹ 15.79 ಕೋಟಿ ಮೊತ್ತವನ್ನು ಸರ್ಕಾರ ಪುನರ್ ವಿನಿಯೋಗದ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ದರ ನಿಗದಿ: ಪೆಟ್ ಸ್ಕ್ಯಾನ್‌ಗೆ ₹10 ಸಾವಿರ, ಅಸ್ಥಿ ಮಜ್ಜೆ ಕಸಿಗೆ ಎರಡು ವಿಧಾನಗಳಲ್ಲಿ ₹ 7 ಲಕ್ಷ ಹಾಗೂ ₹21 ಲಕ್ಷ, ರೋಬೋಟಿಕ್ ಶಸ್ತ್ರಚಿಕಿತ್ಸೆಗೆ ₹1.50 ಲಕ್ಷ ನಿಗದಿ ಮಾಡಲಾಗಿದೆ.

‘ಈ ಯೋಜನೆಯಿಂದ ಎಸ್ಸಿ, ಎಸ್ಟಿ ಸಮುದಾಯದ ಫಲಾನುಭವಿಗಳಿಗೆ ಪ್ರಯೋಜನವಾಗಲಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಮಾಜಿ ಶಾಸಕ ಕೆ.ಕೆಂಪೇಗೌಡ ನಿಧನ



ಪಾಂಡವಪುರ: ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಮಾಜಿ ಶಾಸಕ ಕೆ.ಕೆಂಪೇಗೌಡ (96) ಗುರುವಾರ ಬೆಳಿಗ್ಗೆ ಚಿನಕುರಳಿಯ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ನಾಲ್ವರು ಪುತ್ರರು, ಐವರು ಪುತ್ರಿಯರಿದ್ದಾರೆ. ಅವರ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಅವರು ಪಾಂಡವಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ 3 ಬಾರಿ ಶಾಸಕರಾಗಿದ್ದರು. ಮೊದಲ ಬಾರಿಗೆ 1983ರಲ್ಲಿ ಜನತಾ ಪಕ್ಷದಿಂದ ಆಯ್ಕೆಯಾಗಿದ್ದರು. 1985ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ, 1999ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. 2008ರಲ್ಲಿ ಮೇಲುಕೋಟೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡಿದ್ದರು. ಬಳಿಕ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು.

ನಾಲ್ವರಿಗೆ ‘ಡಾ.ಎಚ್.ನರಸಿಂಹಯ್ಯ ಪ್ರಶಸ್ತಿ’

ಕನ್ನಡ ವಿಜ್ಞಾನ ಸಮ್ಮೇಳನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



ಸಮ್ಮೇಳನದ ಸರ್ವಾಧ್ಯಕ್ಷರಾದ ಇಸ್ರೊ ನಿವೃತ್ತ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಅವರನ್ನು ಸಾರೋಟಿನಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಪರಿಷತ್ತಿನ ಅಧ್ಯಕ್ಷ ಗಿರೀಶ ಕಡ್ಲೆವಾಡ ಇದ್ದಾರೆ —ಪ್ರಜಾವಾಣಿ ಚಿತ್ರ

ಮೈಸೂರು: ‘ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ’ ಕುರಿತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ನಗರದಲ್ಲಿ ಸೆ.10ರವರೆಗೆ ಆಯೋಜಿಸಿರುವ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನಕ್ಕೆ ಗುರುವಾರ ಚಾಲನೆ ದೊರೆಯಿತು.

ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನದಿಂದ ಮಾತನಾಡಿದ ಇಸ್ರೊ ನಿವೃತ್ತ ಅಧ್ಯಕ್ಷ, ಖ್ಯಾತ ವಿಜ್ಞಾನಿ ಎ.ಎಸ್.ಕಿರಣ್‌ಕುಮಾರ್, ‘ಇತ್ತೀಚಿನ ದಿನಗಳಲ್ಲಿ ಹವಾಮಾನ ಮುನ್ಸೂಚನೆಯನ್ನು ನಿಖರವಾಗಿ ಹೇಳಲಾಗುತ್ತಿಲ್ಲ. ಇಡೀ ಪ್ರಪಂಚದಲ್ಲಿ ಹವಾಮಾನ ವೈಪರೀತ್ಯ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವುದು ಇದಕ್ಕೆ ಕಾರಣ. ಇದರಿಂದಾಗಿ ಹೆಚ್ಚು ತೊಂದರೆಯಾಗುತ್ತಿದೆ’ ಎಂದರು.

‘ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ಅಂತರರಾಷ್ಟ್ರೀಯ ಕಂಪನಿಗಳು ಮನುಷ್ಯನ ವ್ಯಕ್ತಿತ್ವವನ್ನು ಬದಲಾಯಿಸಿ, ಕೇವಲ ಗ್ರಾಹಕರನ್ನಾಗಿ ಮಾಡಿಕೊಂಡು ಲಾಭ ಪಡೆದುಕೊಳ್ಳುತ್ತಿವೆ. ನಮ್ಮ ಎಲ್ಲ ಕೆಲಸಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಕಾರ್ಯವನ್ನೂ ಮಾಡಲಾಗುತ್ತಿದೆ’ ಎಂದರು.

‘ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಸುಸ್ಥಿರ ಅಭಿವೃದ್ಧಿಗೆ ಬಳಸಿಕೊಳ್ಳಲು ಆದ್ಯತೆ ಕೊಡಬೇಕು’ ಎಂದು ಸಲಹೆ ನೀಡಿದರು.

ಪ್ರಶಸ್ತಿ: ನಾಡಿನಲ್ಲಿ ವಿಜ್ಞಾನ ಜನಪ್ರಿಯಗೊಳಿಸಲು ಶ್ರಮಿಸಿದವರಿಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಿಂದ ನೀಡುವ 2022ನೇ ಸಾಲಿನ ರಾಜ್ಯಮಟ್ಟದ ‘ಡಾ.ಎಚ್.ನರಸಿಂಹಯ್ಯ ಪ್ರಶಸ್ತಿ’ ಪ್ರಕಟಿಸಲಾಗಿದೆ.

ಮೈಸೂರು ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಮತ್ತು ‘ಬಾಲವಿಜ್ಞಾನ’ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಹರಿಪ್ರಸಾದ್ (ಮೈಸೂರು), ವಿಜ್ಞಾನ ಸಂವಹನಕಾರ ಪ್ರೊ.ಎಂ.ಆರ್. ನಾಗರಾಜು (ಬೆಂಗಳೂರು), ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆರ್.ಬಳೂರಗಿ (ವಿಜಯಪುರ) ಮತ್ತು ಶಿಕ್ಷಣ ತಜ್ಞ ಪ್ರೊ. ಬಿ.ಕೆ.ಚಳಗೇರಿ (ಕಲಬುರಗಿ) ಅವರನ್ನು ಆಯ್ಕೆ ಮಾಡಲಾಗಿದೆ.

ಸೆ.10ರಂದು ನಡೆಯುವ ಸಮ್ಮೇಳನದ ಸಮಾರೋಪದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯ ಎ.ಎನ್.ಮಹೇಶ್ ತಿಳಿಸಿದ್ದಾರೆ.

ನಾನು ಗೋಮಾಂಸ ತಿನ್ನುತ್ತೇನೆ: ವಿವೇಕ್

ಬೆಂಗಳೂರು: ವಿವಾದಿತ ಹೇಳಿಕೆಗೆ ಹೆಸರುವಾಸಿಯಾಗಿರುವ 'ಕಾಶ್ಮೀರ್ ಫೈಲ್ಸ್' ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಈಗ ಮತ್ತೊಂದು ವಿವಾದದಲ್ಲಿ ಸಿಲುಕಿದ್ದಾರೆ.

ಗೋಮಾಂಸ ಸೇವನೆಗೆ ಸಂಬಂಧಿಸಿದಂತೆ ಅಗ್ನಿಹೋತ್ರಿ ನೀಡಿರುವ ಹೇಳಿಕೆಯ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

'ಎಲ್ಲಿ ಉತ್ತಮ ಗೋಮಾಂಸ ಸಿಗುವುದೆಂದು ನಾನು ಹಿಂದೆ ಬರೆದಿದ್ದೆ. ನಾನು ಅದನ್ನು ತಿನ್ನುತ್ತಿದ್ದೆ, ಈಗಲೂ ತಿನ್ನುತ್ತೇನೆ. ನನ್ನ ಬದುಕಲ್ಲಿ ಏನೂ ಬದಲಾಗಿಲ್ಲ' ಎಂದು ವಿವೇಕ್ ಅಗ್ನಿಹೋತ್ರಿ ವಿಡಿಯೊದಲ್ಲಿ ಹೇಳಿದ್ದಾರೆ. ಇದು ಹಳೆಯ ವಿಡಿಯೊ ಎನ್ನಲಾಗಿದೆ.

ನಟ ರಣಬೀರ್ ಕಪೂರ್ ಅವರು ಗೋಮಾಂಸ ಸೇವಿಸುವುದಾಗಿ ಹೇಳಿದ ವಿಡಿಯೊ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಕಪೂರ್ ನಟನೆಯ ಬ್ರಹ್ಮಾಸ್ತ್ರ ಚಿತ್ರವನ್ನು ಬಹಿಷ್ಕರಿಸಬೇಕೆಂದು ಕರೆ ನೀಡಲಾಗಿತ್ತು.


ಬ್ರಹ್ಮಾಸ್ತ್ರ ಚಿತ್ರವನ್ನು ಟೀಕಿಸಿದ್ದ ಅಗ್ನಿಹೋತ್ರಿ ವಿಡಿಯೊ ಈಗ ವೈರಲ್ ಆಗಿದ್ದು, ನೆಟ್ಟಿಗರ ಆಕ್ರೋಶಕ್ಕೆ ಕಾರಣವಾಗಿದೆ.

6ರಿಂದ 14 ವರ್ಷದೊಳಗಿನವರ ಸೆರೋ ಸಮೀಕ್ಷೆಯಿಂದ ದೃಢ

ಶೇ 75.38 ಮಕ್ಕಳಲ್ಲಿ ಪ್ರತಿಕಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಮೇಲೆ ಕೊರೊನಾ ಸೋಂಕಿನ ತೀವ್ರತೆ ಕಡಿಮೆಯಿದ್ದು, 6ರಿಂದ 14 ವರ್ಷದವರಲ್ಲಿ ಶೇ 75.38ರಷ್ಟು ಮಕ್ಕಳಲ್ಲಿ 'ಇಮ್ಯುನೊಗ್ಲೋಬ್ಯುಲಿನ್ ಜಿ' (ಐಜಿಜಿ) ಪ್ರತಿಕಾಯ ವೃದ್ಧಿಯಾಗಿದೆ ಎನ್ನುವುದು ಸೆರೋ ಸಮೀಕ್ಷೆಯಿಂದ ದೃಢಪಟ್ಟಿದೆ.



ಆರೋಗ್ಯ ಇಲಾಖೆ ಜೂನ್‌ನಲ್ಲಿ ಈ ಸಮೀಕ್ಷೆ ನಡೆಸಿದೆ. 6–14 ವರ್ಷದ ಮಕ್ಕಳು ಲಸಿಕಾ ಅಭಿಯಾನದಿಂದ ಹೊರಗುಳಿದಿದ್ದರಿಂದ ಅವರಲ್ಲಿ ಸೋಂಕಿನ ತೀವ್ರತೆ ಹಾಗೂ ಪರಿಣಾಮದ ಬಗ್ಗೆ ತಿಳಿಯುವುದು ಸಮೀಕ್ಷೆಯ ಉದ್ದೇಶವಾಗಿತ್ತು. ಇಲಾಖೆಯು ಈ ಸಮೀಕ್ಷೆಗೆ ರಾಜ್ಯದ ಎಲ್ಲ ಜಿಲ್ಲೆಗಳಿಂದ 5,358 ಮಕ್ಕಳ ಗಂಟಲ ದ್ರವದ ಮಾದರಿಗಳನ್ನು ಸಂಗ್ರಹಿಸಿತ್ತು. ಸಮೀಕ್ಷೆಗೆ ಒಳಪಟ್ಟ ಹೆಚ್ಚಿನ ಮಕ್ಕಳಲ್ಲಿ ಪ್ರತಿಕಾಯ ವೃದ್ಧಿಯಾಗಿದೆ. ಆದ್ದರಿಂದ ಕೊರೊನಾ ಸೋಂಕು ಅರಿವಿಗೆ ಬಾರದೆ ದೇಹ ಪ್ರವೇಶಿಸಿ, ಮರೆಯಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಸಮೀಕ್ಷೆಗೆ ಒಳಗಾದವರಲ್ಲಿ 2,726 ಗಂಡು ಹಾಗೂ 2,632 ಹೆಣ್ಣು ಮಕ್ಕಳಾಗಿದ್ದಾರೆ. ಇವರಲ್ಲಿ 6-8 ವರ್ಷ, 9–11 ವರ್ಷ ಹಾಗೂ 12-14 ವರ್ಷ ಎಂದು ಮೂರು ಗುಂಪುಗಳಾಗಿ ವಿಂಗಡಿಸಿ, ಭೌಗೋಳಿಕವಾಗಿಯೂ ನಗರ ಪ್ರದೇಶ, ಕೊಳಚೆ ಪ್ರದೇಶ ಮತ್ತು ಗ್ರಾಮೀಣ ಪ್ರದೇಶ ಎಂದು ವರ್ಗೀಕರಿಸಿ ಅಧ್ಯಯನ ನಡೆಸಲಾಗಿತ್ತು.

709 ಮಕ್ಕಳಿಗೆ ಲಕ್ಷಣ: ಸಮೀಕ್ಷೆಗೆ ಒಳಗಾಗಿದ್ದ ಮಕ್ಕಳಲ್ಲಿ 709 (ಶೇ 13.23 ರಷ್ಟು) ಮಕ್ಕಳಿಗೆ ರೋಗ ಲಕ್ಷಣಗಳಿದ್ದವು. ಆದರೆ, ಇವರಿಗೆ ನಡೆಸಲಾದ ಕೋವಿಡ್ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿರಲಿಲ್ಲ. ಹಾಗಾಗಿ, ಈ ಮಕ್ಕಳಿಗೆ ಬೆಂಗಳೂರಿನ ರಾಷ್ಟ್ರೀಯ ವೈರಾಣು ಸಂಸ್ಥೆಯಲ್ಲಿ (ಎನ್‌ಐವಿ) ಸಾರಿ (ತೀವ್ರ ಉಸಿರಾಟದ ಸಮಸ್ಯೆ) ಹಾಗೂ ಐಎಲ್‌ಐ (ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ), ಎಚ್‌1 ಎನ್‌1, ಎಚ್‌3 ಎನ್‌2, ಆರ್‌ಎಸ್‌ವಿ ಎ ಮತ್ತು ಆರ್‌ಎಸ್‌ವಿ ಬಿ ಸೇರಿ ಇತರೆ ಪರೀಕ್ಷೆಗಳನ್ನು ನಡೆಸಲಾಗಿತ್ತು. ವರದಿ ಆಧರಿಸಿ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಸಮೀಕ್ಷೆಗೆ ಒಳಪಟ್ಟ ಮಕ್ಕಳಲ್ಲಿ 57 ಮಕ್ಕಳ ಮಾದರಿಗಳನ್ನು ತಿರಸ್ಕರಿಸಲಾಗಿತ್ತು. 23 ಮಾದರಿಗಳ ಫಲಿತಾಂಶ ನಿರ್ಣಾಯಕವಾಗಿರಲಿಲ್ಲ. ಅಂತಿಮವಾಗಿ 5,278 ಮಾದರಿಗಳನ್ನು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಯಿತು. ಉಡುಪಿ ಹಾಗೂ ಚಿತ್ರದುರ್ಗದ ತಲಾ ಒಬ್ಬರಿಗೆ ಸೋಂಕು ದೃಢಪಟ್ಟಿತ್ತು. ಇದರಲ್ಲಿ ರೋಗ ಲಕ್ಷಣ ಹೊಂದಿದ್ದ ಮಗುವಿಗೆ ಬಿ.ಎ.5 ಓಮೈಕ್ರಾನ್ ತಳಿ ಪತ್ತೆಯಾಗಿತ್ತು. ರೋಗ ಲಕ್ಷಣ ಇಲ್ಲದ ಮಗುವಿಗೆ ಬಿ.ಎ.2.10 ಓಮೈಕ್ರಾನ್ ತಳಿ ದೃಢಪಟ್ಟಿತ್ತು ಎಂದು ಇಲಾಖೆ ಹೇಳಿದೆ.


ಅಧಿಕ ಪ್ರತಿಕಾಯ ಪಡೆದ ಮಕ್ಕಳಿರುವ ಜಿಲ್ಲೆಗಳು

ಜಿಲ್ಲೆ	ಮಾದರಿಗಳು	ಪ್ರತಿಕಾಯ (%)
ಚಿಕ್ಕಮಗಳೂರು	72	100
ಬಾಗಲಕೋಟೆ	177	91.12
ಉತ್ತರ ಕನ್ನಡ	102	89.61
ಗದಗ	91	88.62
ಬಿಬಿಎಂಪಿ	781	86.88
ಕಡಿಮೆ ಪ್ರತಿಕಾಯ ಇರುವ ಮಕ್ಕಳಿರುವ ಜಿಲ್ಲೆಗಳು		
ಕಲಬುರ್ಗಿ	276	43.24
ಯಾದಗಿರಿ	145	48.20
ಉಡುಪಿ	74	52.31
ಹಾವೇರಿ	132	59.47
ರಾಮನಗರ	72	62.72

ಸುದ್ದಿ 2 ನಿಮಿಷ

'12ರೊಳಗೆ ದಢೇಸೂಗೂರು ಬಂಧಿಸದಿದ್ದರೆ ಪಾದಯಾತ್ರೆ'

ಕೊಪ್ಪಳ: 'ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಕನಕಗಿರಿಯ ಬಿಜೆಪಿ ಶಾಸಕ ಬಸವರಾಜ ದಢೇಸೂಗೂರು ಹೆಸರು ಕೇಳಿ ಬಂದಿದ್ದು, ಅವರನ್ನು ಸೆಪ್ಟೆಂಬರ್ 12ರೊಳಗೆ ಸರ್ಕಾರ ಬಂಧಿಸಬೇಕು. ಇಲ್ಲದಿದ್ದರೆ, ಕನಕಗಿರಿ ಕ್ಷೇತ್ರದಿಂದ ಪಾದಯಾತ್ರೆ ಮಾಡಲಾಗುವುದು' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಜ ತಂಗಡಗಿ ಹೇಳಿದರು.




ಕನಕಗಿರಿ ಕ್ಷೇತ್ರದ ಮಾಜಿ ಶಾಸಕರೂ ಆದ ತಂಗಡಗಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಆಡಿಯೊದಲ್ಲಿರುವ ಧ್ವನಿ ತಮ್ಮದೇ ಎಂದು ಶಾಸಕರೇ ಒಪ್ಪಿದ್ದಾರೆ. ಪರಸಪ್ಪ ಎಂಬುವವರು ಮಗನ ಪಿಎಸ್‌ಐ ನೇಮಕಾತಿಗೆ ₹15 ಲಕ್ಷ ಕೊಟ್ಟಿರುವುದಾಗಿ ಹೇಳಿದ್ದಾರೆ. ಇಷ್ಟೆಲ್ಲಾ ದಾಖಲೆಗಳು ಇದ್ದರೂ ಸರ್ಕಾರ ಯಾವ ಕ್ರಮ ಕೈಗೊಂಡಿಲ್ಲ' ಎಂದು ಹೇಳಿದರು.

'ಪಿಎಸ್‌ಐ ಹಗರಣದ ಬಗ್ಗೆ ಮಾತನಾಡಿದ್ದಕ್ಕೆ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ನೋಟಿಸ್ ನೀಡಲಾಗಿತ್ತು. ಸರ್ಕಾರ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಬೇಕು. ಮುಂಬರುವ ಅಧಿವೇಶನದಲ್ಲಿ ನಮ್ಮ ಪಕ್ಷದ ನಾಯಕರು ಈ ವಿಷಯ ಪ್ರಸ್ತಾಪಿಸುವರು' ಎಂದು ತಿಳಿಸಿದರು.

ಬಾಲಕಿಯರಿಗೆ ಲೈಂಗಿಕ ಕಿರುಕುಳ: 20 ವರ್ಷ ಜೈಲು ಶಿಕ್ಷೆ

ಮಂಡ್ಯ: ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರ್.ಅಜಯ್ ಎಂಬಾತಗೆ ನಗರದ ಹೆಚ್ಚುವರಿ ಸೆಷನ್ಸ್ ಮತ್ತು 2ನೇ ತ್ವರಿತಗತಿ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ₹35,000 ದಂಡ ವಿಧಿಸಿದೆ.

ಚಾಕೊಲೇಟ್, ತಿಂಡಿ ನೀಡುವುದಾಗಿ ಮೂವರು ಬಾಲಕಿಯರನ್ನು ಪುಸಲಾಯಿಸಿದ್ದ ಅಜಯ್, ನಾಲ್ಕು ದಿನ ಅಕ್ರಮ ಬಂಧನದಲ್ಲಿರಿಸಿ, ಅಶ್ಲೀಲ ನಗ್ನ ದೃಶ್ಯಗಳನ್ನು ತೋರಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದ. ಕೊಲೆ ಬೆದರಿಕೆಯನ್ನೂ ಹಾಕಿದ್ದು ತನಿಖೆಯಿಂದ ಗೊತ್ತಾಗಿತ್ತು. ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶೆ ಕೆ.ಎ.ನಾಗಜ್ಯೋತಿ ಅಪರಾಧಿಗೆ ಕಠಿಣ ಸಜೆ ವಿಧಿಸಿದರು. ಸರ್ಕಾರಿ ಅಭಿಯೋಜಕಿ ಪಿ.ಕೆ.ಶಕೀಲಾ ಅಬೂಬಕರ್ ವಾದ ಮಂಡಿಸಿದ್ದರು.




ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಕಳವಳ

'ಸಿಇಟಿ ಗೊಂದಲ: ಶೈಕ್ಷಣಿಕ ಅವಧಿ ನಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಆದಷ್ಟು ಶೀಘ್ರ ಸಿಇಟಿ ರ‍್ಯಾಂಕ್ ಗೊಂದಲವನ್ನು ಬಗೆಹರಿಸಿ, ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಆರಂಭಿಸಲು ಅವಕಾಶ ಮಾಡಿಕೊಡಬೇಕು.



ಇಲ್ಲದಿದ್ದರೆ ವಿದ್ಯಾರ್ಥಿಗಳ ಶೈಕ್ಷಣಿಕ ಅವಧಿ ನಷ್ಟವಾಗುವ ಸಾಧ್ಯತೆಯಿದೆ' ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಪಿಇಎಸ್ ವಿಶ್ವವಿದ್ಯಾಲಯವು 2022-23ನೇ ಸಾಲಿನ ತರಗತಿಗಳನ್ನು ಶೀಘ್ರದಲ್ಲೇ ಆರಂಭಿಸಲಿದೆ. ಸಿಇಟಿ ವಿದ್ಯಾರ್ಥಿಗಳು ಬರುವವರೆಗೂ ಹಾಲಿ ಪ್ರವೇಶ ಪಡೆದಿರುವ ಶೇ 60ರಷ್ಟು ವಿದ್ಯಾರ್ಥಿಗಳಿಗೆ ಬೋಧನೆ ಮಾಡದೇ ಇರಲು ಸಾಧ್ಯವಿಲ್ಲ. ಸಿಇಟಿ ಮೂಲಕ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಿ, ಶೈಕ್ಷಣಿಕ ಅವಧಿಯ ನಷ್ಟವನ್ನು ಸರಿದೂಗಿಸುತ್ತೇವೆ. ಆದರೂ ಸರ್ಕಾರ ಸಿಇಟಿ ಗೊಂದಲವನ್ನು ಬೇಗ ಬಗೆಹರಿಸದೇ ಇರುವುದು ನ್ಯಾಯ ಸಮ್ಮತವಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಲಿದೆ' ಎಂದರು.

'ಪ್ರತಿ ವರ್ಷ ಒಂದಲ್ಲ ಒಂದು ವಿಷಯದಿಂದ ಸಿಇಟಿ ಪ್ರವೇಶ ಪ್ರಕ್ರಿಯೆ ವಿಳಂಬವಾಗುತ್ತಲೇ ಇದೆ. ಈ ಬಗ್ಗೆ ಹಲವು ಬಾರಿ ಮನವಿ ಮಾಡಿದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಸಿಇಟಿಯನ್ನೇ ಇಷ್ಟೊಂದು ವಿಳಂಬ ಮಾಡುತ್ತಿರುವ ಸರ್ಕಾರ, ಪಿಜಿಸಿಇಟಿ ಯಾವಾಗ ನಡೆಸಲಿದೆ' ಎಂದು ಪ್ರಶ್ನಿಸಿದರು.

'ಎಂಬಿಎ, ಎಂಸಿಎ ಸೇರಿ ಹಲವು ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಪಿಜಿಸಿಇಟಿಯನ್ನು ಯಾವಾಗ ನಡೆಸಲಿದೆ ಎಂಬ ಬಗ್ಗೆ ಕೆಇಎ ಈವರೆಗೆ ಮಾಹಿತಿ ನೀಡಿಲ್ಲ. ಆದಷ್ಟು ಬೇಗ ಸಿಇಟಿ ಪ್ರಕ್ರಿಯೆ ಮುಗಿಸಿ, ಪಿಜಿಸಿಇಟಿ ನಡೆಸಬೇಕು' ಎಂದು ಆಗ್ರಹಿಸಿದರು

ಸಿಇಟಿ ರ‍್ಯಾಂಕಿಂಗ್: ಪರಿಷ್ಕೃತ ಪಟ್ಟಿಗೆ ಆಗ್ರಹ

ಬೆಂಗಳೂರು: ಕೋರ್ಟ್ ತೀರ್ಪಿನ ಪ್ರಕಾರ ಪಿಯು ಅಂಕಗಳನ್ನು ಪರಿಗಣಿಸಿ, ಸಿಇಟಿ ಪರಿಷ್ಕೃತ ರ‍್ಯಾಂಕ್ ಪಟ್ಟಿ ಪ್ರಕಟಿಸಬೇಕು ಎಂದು ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಅವರ ಪೋಷಕರು ಆಗ್ರಹಿಸಿದರು.

ಹೊಸದಾಗಿ ಸಿಇಟಿ ರ‍್ಯಾಂಕಿಂಗ್ ಪಟ್ಟಿ ಪ್ರಕಟಿಸಿದರೆ ಭಾರಿ ವ್ಯತ್ಯಾಸ ಆಗುವುದಿಲ್ಲ. ಅಲ್ಲದೇ, 24 ಸಾವಿರ ವಿದ್ಯಾರ್ಥಿಗಳಲ್ಲಿ ಬಹುತೇಕರು ನೀಟ್ ಸೇರಿದಂತೆ ಇತರೆ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಾರೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಾಲವೀರ ರೆಡ್ಡಿ, ವಕೀಲರಾದ ರಾಜೇಂದ್ರ, ಶಿವಕುಮಾರ್, ರತ್ನಾ ಗೌಡ, ಪೋಷಕ ಗಿರೀಶ್ ಡಿ. ಕುಲಕರ್ಣಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

2020–21ನೇ ಸಾಲಿನಲ್ಲಿ ಕೋವಿಡ್ ಕಾರಣದಿಂದ ದ್ವಿತೀಯ ಪಿಯು ಫಲಿತಾಂಶವನ್ನು ಪರೀಕ್ಷೆ ಇಲ್ಲದೇ ಪ್ರಕಟಿಸಲಾಗಿತ್ತು. ಅಂದು ಶೈಕ್ಷಣಿಕ ಬೋಧನೆ, ಪೂರ್ವ ತಯಾರಿ ಇಲ್ಲದೇ ಸಿಇಟಿ ಬರೆದಿದ್ದಾರೆ. ಹಾಗಾಗಿ, ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗಿರಲಿಲ್ಲ. ತರಬೇತಿ ಪಡೆದು ಈ ವರ್ಷ ಮತ್ತೆ ಸಿಇಟಿ ಬರೆದಿದ್ದಾರೆ. ಪರೀಕ್ಷೆಗೆ ಮುಂಚಿತವಾಗಿ ಕೆಇಎ ಪಿಯು ಅಂಕಗಳನ್ನು ಪರಿಗಣಿಸದಿರುವ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿರಲಿಲ್ಲ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಕೋರ್ಟ್ ನ್ಯಾಯ ದೊರಕಿಸಿದೆ. ಆದರೆ, ಸರ್ಕಾರ ಆದೇಶ ಪಾಲಿಸಲು ಮೀನಮೇಷ ಎಣಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆಯುದ್ದಕ್ಕೂ ರಾಹುಲ್ ಸ್ವಾಗತಕ್ಕೆ ಭಾರಿ ಜನಸ್ತೋಮ

ಕನ್ಯಾಕುಮಾರಿ/ನಾಗರ್‌ಕೋಯಿಲ್: 'ದ್ವೇಷದ ರಾಜಕಾರಣ ಮಣಿಯಲಿದೆ. ದ್ವೇಷವೇ ಅವರ ಪಕ್ಷದ ಮೇಲೆ ಚುನಾವಣೆಯಲ್ಲಿ ಅಡ್ಡ ಪರಿಣಾಮ ಬೀರಲಿದೆ' ಎಂಬ ಭರವಸೆಯೊಂದಿಗೆ ನೂರಾರು ಜನರು ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದು, 'ತಲೈವರ್' ರಾಹುಲ್ ಗಾಂಧಿ ಎಂಬ ಘೋಷಣೆಗಳನ್ನು ಕೂಗುತ್ತಾ ಕಾಂಗ್ರೆಸ್‌ನ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಹೆಜ್ಜೆ ಹಾಕಿದರು.

ದೇವಾಲಯಗಳ ಪಟ್ಟಣ ಸುಚಿಂದ್ರಮ್‌ನಲ್ಲಿ ಬೆಳಿಗ್ಗೆ ಕೆಲ ಸಮಯ ವಿಶ್ರಮಿಸಿ, ಕನ್ಯಾಕುಮಾರಿಯಿಂದ ನಾಗರಕೋಯಿಲ್‌ಗೆ ಸುಮಾರು 21 ಕಿ.ಮೀ. ದೂರವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಾದಯಾತ್ರಿಗಳ ಜತೆಗೆ ತಲುಪಿದರು.

ರಾಹುಲ್ ಜತೆಗೆ ಪಕ್ಷದ ಹಿರಿಯ ನಾಯಕರಾದ ಪಿ. ಚಿದಂಬರಂ, ಅಶೋಕ್ ಗೆಹಲೋತ್, ಕೆ.ಸಿ. ವೇಣುಗೋಪಾಲ್, ದಿಗ್ವಿಜಯ್ ಸಿಂಗ್ ಮತ್ತು ಜೈರಾಮ್ ರಮೇಶ್ ಸೇರಿ ಅನೇಕ ಮುಖಂಡರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ರಾಹುಲ್ ಗಾಂಧಿಯವರು ಪ್ರತಿ ದಿನ 25 ಕಿ.ಮೀ ಕ್ರಮಿಸಲು ಬಯಸಿದ್ದಾರೆ. ಆದರೆ, ಸಂಘಟಕರು ಎಲ್ಲರನ್ನೂ ಗಮನದಲ್ಲಿರಿಸಿಕೊಂಡು ದಿನಕ್ಕೆ 20–22 ಕಿ.ಮೀ ನಡಿಗೆ ನಿಗದಿಪಡಿಸಿದ್ದಾರೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಕಂಟೈನರ್‌ಗಳಲ್ಲಿ ರಾತ್ರಿ ವಾಸ್ತವ್ಯ: ಯಾತ್ರೆಯಲ್ಲಿ ಪಾಲ್ಗೊಂಡಿರುವ ಸುಮಾರು 230 ಪಾದಯಾತ್ರಿಗಳು ವಾಸ್ತವ್ಯಕ್ಕಾಗಿ ಮಾರ್ಪಡಿಸಿರುವ ಕಂಟೈನರ್‌ಗಳಲ್ಲಿ ರಾತ್ರಿ ಸಮಯ ಕಳೆಯಲಿದ್ದಾರೆ. ಈ ಕಂಟೈನರ್‌ಗಳನ್ನು ಹೊತ್ತಿರುವ ಟ್ರಕ್‌ಗಳು ದಿನವೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸಲಿವೆ. ಇದೇ ಕಂಟೈನರ್‌ನಲ್ಲಿಯೇ ರಾಹುಲ್ ಗಾಂಧಿಯವರು ಬುಧವಾರದ ರಾತ್ರಿ ಕಳೆದಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಗುರುವಾರ ತಿಳಿಸಿದರು.

ದಶಪಥ ಲೋಪ: ಸಿಎಂ ದೂರು

ಒಂದನೇ ಪುಟದಿಂದ

ರಾಮನಗರದ ಹೊರವಲಯದಲ್ಲಿ ಹಾದು ಹೋಗುವ ಎಕ್ಸ್‌ಪ್ರೆಸ್ ಹೆದ್ದಾರಿಯ ಅಂಡರ್‌ಪಾಸ್‌ನಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ನೀರು ತುಂಬಿಕೊಂಡು ಪ್ರವಾಹವೇ ಸೃಷ್ಟಿಯಾಗಿತ್ತು. ರಸ್ತೆಗಳು, ಬಡಾವಣೆಗಳಲ್ಲಿ ನೀರು ನಿಂತು ಜನರು ತೊಂದರೆ ಪರದಾಡಿದ್ದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, ಕಾಮಗಾರಿಯಲ್ಲಿ ಅಕ್ರಮ ನಡೆದಿದೆ ಎಂದು ದೂರಿದ್ದರು.

ಹುಬ್ಬಳ್ಳಿ– ಧಾರವಾಡ ಬೈಪಾಸ್: ಹುಬ್ಬಳ್ಳಿ– ಧಾರವಾಡದ ಮಧ್ಯೆ ಬೈಪಾಸ್ ಕಾಮಗಾರಿಯನ್ನು ಖಾಸಗಿಯವರಿಗೆ ಹಸ್ತಾಂತರಿಸಿದ್ದು, ಟೆಂಡರ್ ಪ್ರಕ್ರಿಯೆಯೂ ಮುಗಿದಿದೆ. ಇನ್ನು 2–3 ತಿಂಗಳಲ್ಲಿ ಕಾಮಗಾರಿ ಆರಂಭವಾಗುತ್ತದೆ ಎಂದು ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಮುಖ್ಯವಾಗಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು, ಶಿರಾಡಿ ಘಾಟ್ ಸೇರಿ ಪ್ರಮುಖ ಹೆದ್ದಾರಿಗಳ ಬಗ್ಗೆ ಗಡ್ಕರಿ ಜತೆ ಚರ್ಚೆ ನಡೆಸಲಾಗಿದೆ ಎಂದು ಹೇಳಿದರು.

ಮಾಲಿನ್ಯ ಮುಕ್ತ ಹೆದ್ದಾರಿಗಳಿಗೆ ಒತ್ತು

ಬೆಂಗಳೂರು: ನೈಸರ್ಗಿಕ ಇಂಧನ ವಾಹನಗಳ ಬಳಕೆಗೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಭಾರತದ ರಸ್ತೆಗಳು ಭವಿಷ್ಯದಲ್ಲಿ ಮಾಲಿನ್ಯ ರಹಿತವಾಗಲಿವೆ ಎಂದು ಕೇಂದ್ರ ಭೂಸಂಪರ್ಕ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದರು.

ಕೇಂದ್ರ ಭೂ ಸಾರಿಗೆ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗುರುವಾರ ಆಯೋಜಿಸಿದ್ದ 'ಮಂಥನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರಗಳು ಸೂಕ್ತ ಭೂಮಿ ಒದಗಿಸಿದರೆ ಕೇಂದ್ರ ಸರ್ಕಾರ ಸುವ್ಯವಸ್ಥಿತ ಟ್ರಕ್ ಟರ್ಮಿನಲ್‌ಗಳನ್ನು ನಿರ್ಮಿಸಿಕೊಡಲಿದೆ. ನಿರ್ಮಾಣದ ಗುಣಮಟ್ಟ ಸುಧಾರಿಸಬೇಕಾದರೆ ನಿರ್ಮಾಣ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಬೇಕು. ಬಹುಮಾದರಿ ಸಾರಿಗೆಗೆ ಆದ್ಯತೆ ನೀಡಬೇಕು ಎಂದರು.

ಪಾಲುದಾರರು ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪರಸ್ಪರ ಒಪ್ಪಿಗೆಯೊಂದಿಗೆ ಕೆಲಸ ಮಾಡಬೇಕು. ಹೊಸ ತಂತ್ರಜ್ಞಾನ, ಆಧುನಿಕ ಉಪಕರಣಗಳು ಹಾಗೂ ಸಾಮಗ್ರಿಗಳ ಬಳಕೆ ಮಾಡಿಕೊಳ್ಳಬೇಕು. ದೀರ್ಘ ಬಾಳಿಕೆಯ ಕಾಂಕ್ರೀಟ್ ರಸ್ತೆಗಳಿಗೆ ಆದ್ಯತೆ ನೀಡಬೇಕು. ಇದರಿಂದ ಕನಿಷ್ಠ 25 ವರ್ಷಗಳು ನಿರ್ವಹಣಾ ವೆಚ್ಚ ಉಳಿಯಲಿದೆ. ಶೇ 90ರಷ್ಟು ಪ್ರಯಾಣಿಕರು, ಶೇ 70ರಷ್ಟು ಸರಕು ಸಾಗಣೆ ರಸ್ತೆಗಳನ್ನೇ ಅವಲಂಬಿಸಿವೆ. ಜಲಮಾರ್ಗ, ರೈಲ್ವೆ ಮತ್ತು ವಿಮಾನಯಾನ ಬಳಕೆಯ ಸಮಗ್ರ ಬಳಕೆಯ ಮೂಲಕ ಸರಕು ಸಾಗಣೆ ವೆಚ್ಚ ಶೇ 10ಕ್ಕೆ ಇಳಿಸಬೇಕು ಎಂದು ಕೋರಿದರು.

ಗಣಿಗಾರಿಕೆ ಗುತ್ತಿಗೆ ರದ್ದುಗೊಳಿಸಲು ಹಿರೇಮಠ ಆಗ್ರಹ

ಧಾರವಾಡ: 'ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಪುನಃ ಗಣಿಗಾರಿಕೆ ಆರಂಭಿಸಲು ಎಲ್ಲ ಸಿದ್ಧತೆ ಮಾಡಿಕೊಂಡು ಕೆಲಸ ಆರಂಭಿಸಿದ್ದಾರೆ. ಇದನ್ನು ತಡೆಯುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ' ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ತಿಳಿಸಿದರು.

'ಪಕ್ಕದ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ರೆಡ್ಡಿಗೆ ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಬಳ್ಳಾರಿ ಜಿಲ್ಲೆಯು ಅಕ್ರಮ ಗಣಿಗಾರಿಕೆಯ ಆಗರವಾಗಿದೆ. ಹೀಗಾಗಿ ರೆಡ್ಡಿ ಬಳಿ ಇರುವ ಗಣಿಗಳ ಗುತ್ತಿಗೆಯನ್ನು ರದ್ದುಗೊಳಿಸಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಟಿಬಿ ಸ್ಯಾನಿಟೇರಿಯಮ್ ಬಳಿಯ ಸರ್ವೆ ನಂ. 601ರ ಪೈಕಿ 57 ಎಕರೆ ಜಮೀನು ಕಬಳಿಸಿದ ಸಾರಿಗೆ ಸಚಿವ ಬಿ. ಶ್ರೀರಾಮುಲು ಹಾಗೂ ಸಹಚರರಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ನೋಟಿಸ್ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ಭೂ ಕಬಳಿಕೆಗೆ ಅಂದಿನ ಜಿಲ್ಲಾಧಿಕಾರಿ ಶಿವಪ್ಪ, ಉಪವಿಭಾಗಾಧಿಕಾರಿ ವೆಂಕಟೇಶ್, ತಹಶೀಲ್ದಾರ್ ಶಶಿಧರ ಬಗಲಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಶ್ರೀರಾಮುಲುಗೆ ಸಾಥ್ ನೀಡಿದ್ದಾರೆ. ಇವರೆಲ್ಲರನ್ನು ಶಿಕ್ಷೆಗೆ ಗುರಿಪಡಿಸಬೇಕು' ಎಂದು ಒತ್ತಾಯಿಸಿದರು.

ಕೆಲ ನ್ಯಾಯಾಧೀಶರು ಇಂಥ ಪ್ರಕರಣಗಳಲ್ಲಿ ವಿಚಾರಣೆಯಿಂದ ಹಿಂದೆ ಸರಿದಿದ್ದು ಕಳವಳಕಾರಿ. ಸ್ವಾಮೀಜಿಗಳು, ರಾಜಕಾರಣಿಗಳ ಅಪವಿತ್ರ ಮೈತ್ರಿಯೇ ಇಂಥ ಘಟನೆಗಳಿಗೆ ಕಾರಣ' ಎಂದರು.

ನೀಟ್: ರಾಜ್ಯದ 72,262 ವಿದ್ಯಾರ್ಥಿಗಳು ಅರ್ಹ

ಒಂದನೇ ಪುಟದಿಂದ

ರಾಜ್ಯ ಸಿಇಟಿಯಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ, ಪಶು ವೈದ್ಯಕೀಯದಲ್ಲಿ ಪ್ರಥಮ ರ‍್ಯಾಂಕ್ ಪಡೆದಿದ್ದರು. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಆಶಯ ವ್ಯಕ್ತಪಡಿಸಿದ ಹೃಷಿಕೇಶ್ ದೆಹಲಿಯ ಏಮ್ಸ್‌ಗೆ ಸೇರಲು ನಿರ್ಧರಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಉಚಗಾವಿಯ ರುಚಾ ಪವಾಶೆ ರಾಷ್ಟ್ರ ಮಟ್ಟದಲ್ಲಿ 4ನೇ ರ‍್ಯಾಂಕ್ ಪಡೆದಿದ್ದು, ರಾಜ್ಯದಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ. ಅವರು ಸೇಂಟ್ ಝೇವಿಯರ್ಸ್ ಪ್ರೌಢಶಾಲೆ ಹಾಗೂ ರಾಜಾ ಲಖಮಗೌಡ ಪಿಯು ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ. ನಿರೀಕ್ಷಿಸಿದ್ದಕ್ಕಿಂತ ಅತ್ಯುತ್ತಮ ಫಲಿತಾಂಶ ಬಂದಿದೆ. ಸಂತಸದೊಂದಿಗೆ ಅಚ್ಚರಿಯೂ ಆಗಿದೆ. ಅಪ್ಪ, ಅಮ್ಮನ ಆಸೆಯಂತೆ ವೈದ್ಯೆಯಾಗುವ ಖುಷಿ ಇದೆ ಎಂದು ರುಚಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬೆಂಗಳೂರಿನ ಶ್ರೀಚೈತನ್ಯ ಟೆಕ್ನೋ ಸ್ಕೂಲ್‌ನ ಆರ್. ಕೃಷ್ಣ ರಾಜ್ಯದ 3ನೇ ಟಾಪರ್. ಅವರು ಅಖಿಲ ಭಾರತ ಮಟ್ಟದಲ್ಲಿ 8ನೇ ರ‍್ಯಾಂಕ್ ಗಳಿಸಿದ್ದಾರೆ. ಸಿಇಟಿಯ ನ್ಯಾಚುರೋಪತಿ ಮತ್ತು ಯೋಗದಲ್ಲಿ 3ನೇ ರ‍್ಯಾಂಕ್ ಪಡೆದಿದ್ದರು. ಉಡುಪಿಯ ಮಣಿಪಾಲದ ಮಾಧವ ಕೃಪಾ ಇಂಗ್ಲಿಷ್ ಶಾಲೆಯ ವ್ರಜೇಶ್ ವೀಣಾಧರ್ ಶೆಟ್ಟಿ ಅವರು ಅಖಿಲ ಭಾರತ ಮಟ್ಟದಲ್ಲಿ 13ನೇ ರ‍್ಯಾಂಕ್ ಗಳಿಸಿದ್ದಾರೆ. ಅವರು ಸಿಇಟಿ ನ್ಯಾಚುರೋಪತಿ ಮತ್ತು ಯೋಗ ವಿಭಾಗದಲ್ಲಿ ಎರಡನೇ ಸ್ಥಾನ ಪಡೆದಿದ್ದರು.

ಶುಭಾ ಕೌಶಿಕ್ ಅವರು ಅಖಿಲ ಭಾರತ ಮಟ್ಟದ 17ನೇ ರ‍್ಯಾಂಕ್ ಪಡೆದಿದ್ದಾರೆ. ಅವರು ಬೆಂಗಳೂರಿನ ಶ್ರೀಚೈತನ್ಯ ಟೆಕ್ನೋ ಶಾಲೆಯ ವಿದ್ಯಾರ್ಥಿನಿ. ಸಿಇಟಿ ಪಶುವೈದ್ಯಕೀಯ ವಿಭಾಗದಲ್ಲಿ 3ನೇ ಸ್ಥಾನ ಪಡೆದಿದ್ದರು.



ರುಚಾ ಪಾವಶೆ



ಆರ್.ಕೃಷ್ಣ

ರಾಜ್ಯದ ಸಾಧಕರು

ಹೆಸರು	ಅಖಿಲ ಭಾರತ	ರಾಜ್ಯ
ಹೃಷಿಕೇಶ ನಾಗಭೂಷಣ ಗಂಗುಲೆ	03	01
ರುಚಾ ಪವಾಶೆ	04	02
ಆರ್.ಕೃಷ್ಣ	08	03
ವ್ರಜೇಶ್ ವೀಣಾಧರ ಶೆಟ್ಟಿ	13	04
ಶುಭಾ ಕೌಶಿಕ್	17	05
ಅಂಕುಶ ಗೌಡ	18	06
ಮುರಿಕಿ ಶ್ರೀ ಬರುಣಿ	23	07
ಆದಿತ್ಯ ಕಾಮತ್ ಅಮ್ಮೆಂಬಳ	28	08
ರೋಹಿತ್ ಆರ್ಜೆ	42	09

ಇಡಬ್ಲ್ಯುಎಸ್‌ಗೆ ಶೇ 10 ಮೀಸಲಾತಿ: 13ರಿಂದ ವಿಚಾರಣೆ ಆರಂಭ

ನವದೆಹಲಿ (ಪಿಟಿಐ): ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿ ನ್ಯಾಯನಿರ್ಣಯಕ್ಕಾಗಿ ಸುಪ್ರೀಂಕೋರ್ಟ್ ಗುರುವಾರ ಮೂರು ಪ್ರಮುಖ ಅಂಶಗಳನ್ನು ಗುರುತಿಸಿದೆ.



ಈ ಅರ್ಜಿಗಳ ವಿಚಾರಣೆಯನ್ನು ಸೆ.13ರಿಂದ ಆರಂಭಿಸಲಾಗುವುದು ಎಂದು ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠ ಹೇಳಿದೆ. ನ್ಯಾಯಮೂರ್ತಿಗಳಾದ ದಿನೇಶ ಮಾಹೇಶ್ವರಿ, ಎಸ್.ರವೀಂದ್ರ ಭಟ್, ಬೇಲಾ ಎಂ.ತ್ರಿವೇದಿ ಹಾಗೂ ಜೆ.ಬಿ. ಪಾರ್ದಿವಾಲಾ ಅವರು ಈ ಪೀಠದಲ್ಲಿದ್ದಾರೆ.

'ತೆಲಂಗಾಣ ಸರ್ಕಾರದಿಂದ ತಾರತಮ್ಯ'

ಹೈದರಾಬಾದ್ (ಪಿಟಿಐ): 'ಮಹಿಳೆ ಎಂಬ ಕಾರಣಕ್ಕೆ ರಾಜ್ಯ ಸರ್ಕಾರ ತಮ್ಮ ವಿರುದ್ಧ ತಾರತಮ್ಯ ಮಾಡುತ್ತಿದೆ' ಎಂದು ತೆಲಂಗಾಣ ರಾಜ್ಯಪಾಲೆ ತಮಿಳ್‌ಇಸೈ ಸೌಂದರರಾಜನ್ ಆರೋಪಿಸಿದ್ದಾರೆ.

ರಾಜ್ಯಪಾಲೆಯಾಗಿ ಅಧಿಕಾರಿ ವಹಿಸಿಕೊಂಡು ಸೆಪ್ಟೆಂಬರ್ 8ಕ್ಕೆ ಮೂರು ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಮಾಧ್ಯಮದವರೊಂದಿಗೆ ಸಂವಾದ ನಡೆಸಿದ ಅವರು, 'ಅಧಿಕಾರ ಸ್ವೀಕರಿಸಿದ ದಿನ ರಾಜ್ಯದ ಅಭಿವೃದ್ಧಿಗೆ ಬದ್ಧಳಾಗಿರಬೇಕೆಂದು ಭಾವಿಸಿದ್ದೆ.

ಆದರೆ ಆಗಿದ್ದೆ ಬೇರೆ. ಜನಪರ ಕೆಲಸಗಳನ್ನು ಮಾಡಬೇಕೆಂದುಕೊಂಡಾಗಲೆಲ್ಲಾ ರಾಜ್ಯಪಾಲೆಯಾದ ತಮಗೇ ಹಲವು ಅಡೆತಡೆಗಳು ಎದುರಾದವು' ಎಂದು ಹೇಳಿದ್ದಾರೆ.

ಕಂದಾಯ ಇಲಾಖೆಗೆ ಕಪಿಲ್ ಮೋಹನ್

ಬೆಂಗಳೂರು: ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಕಪಿಲ್ ಮೋಹನ್ ಅವರನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ಅಲ್ಲದೆ, ಅವರಿಗೆ ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆ, ಭೂಮಿ ಘಟಕ ಮತ್ತು ಕಾರವಾರದಲ್ಲಿರುವ ಕರ್ನಾಟಕ ಸಮುದ್ರಯಾನ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಂ.ಟಿ. ರೇಜು ಅವರನ್ನು ಆಹಾರ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಅವರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸ್ಥಳ ನಿರೀಕ್ಷಣೆಯಲ್ಲಿದ್ದ ಕೃಷ್ಣ ಬಾಜಪೇಯಿ ಅವರನ್ನು ಕಲಬುರಗಿ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರಾಗಿ ನಿಯೋಜಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಕಾರ್ಯದರ್ಶಿ ಹುದ್ದೆಯನ್ನೂ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ. ಸ್ಥಳ ನಿರೀಕ್ಷಣೆಯಲ್ಲಿದ್ದ ಆನಂದ್ ಪ್ರಕಾಶ್ ಮೀನಾ ಅವರನ್ನು ಕೆಕೆಆರ್‌ಡಿಬಿ ಉಪ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಕೆ.ಎನ್. ಅನುರಾಧಾ ಅವರಿಗೆ ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಪಶ್ಚಿಮಘಟ್ಟದ ಹೃದಯ ಸೀಳಿದ ಗಣಿಗಾರಿಕೆ

ಒಂದನೇ ಪುಟದಿಂದ

ಪಶ್ಚಿಮಘಟ್ಟದ ಕುರಿತು ಪ್ರೊ.ಮಾಧವಗಾಡ್ಗೀಳ್ ಮತ್ತು ಡಾ.ಕಸ್ತೂರಿರಂಗನ್ ಅವರು ಸಲ್ಲಿಸಿರುವ ವರದಿಗಳಲ್ಲಿ ಗಣಿಗಾರಿಕೆಯನ್ನು ಸಂಪೂರ್ಣ ನಿಲ್ಲಿಸಬೇಕು. ಇಲ್ಲವಾದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಹೇಳಿತ್ತು. ಆದರೆ, ಕರ್ನಾಟಕವೂ ಸೇರಿ ಪಶ್ಚಿಮಘಟ್ಟದ ವ್ಯಾಪ್ತಿಗೆ ಬರುವ ಎಲ್ಲ ರಾಜ್ಯಗಳೂ ಈ ವರದಿಯನ್ನು ತಿರಸ್ಕರಿಸಿವೆ.

ಎಲ್ಲಿ ಗಣಿಗಾರಿಕೆಯೋ, ಅಲ್ಲಿ ಭೂಕುಸಿತ

- ಉತ್ತರ ಕನ್ನಡ ಜಿಲ್ಲೆ ಭಟ್ಕಳದ ಮುಠ್ಠಳ್ಳಿಯಲ್ಲಿ ಇದೇ ಆಗಸ್ಟ್‌ನಲ್ಲಿ ಸಂಭವಿಸಿದ ಭೂಕುಸಿತದಿಂದ ನಾಲ್ವರು ಮೃತಪಟ್ಟರು. ಇದಕ್ಕೆ ಈ ಪ್ರದೇಶದಲ್ಲಿ ನಡೆಯುತ್ತಿದ್ದ ಕೆಂಪು ಕಲ್ಲು ಗಣಿಗಾರಿಕೆಯೇ ಕಾರಣ. ಯಲ್ಲಾಪುರ ತಾಲ್ಲೂಕು ಕಳಚೆ ಕಣಿವೆಯಲ್ಲಿ ಜುಲೈನಲ್ಲಿ ನಡೆದ ಭೂಕುಸಿತದ ತೀವ್ರತೆ ಕೊಡಗಿನ ಘಟನೆಗಳನ್ನು ಮೀರಿಸುವಂತಹದ್ದು. ಮನೆಗಳು, ತೋಟಗಳು ಸೇರಿ ಇಡೀ ಗ್ರಾಮವೇ ಮಣ್ಣಿನಡಿ ಸಿಲುಕಿತು. ಈ ಪ್ರದೇಶದಲ್ಲಿ ಮೂರು ದಶಕಗಳ ಹಿಂದೆ ಮೈಸೂರು ಮಿನರಲ್ಸ್ ಲಿಮಿಟೆಡ್(ಎಂಎಂಎಲ್) ನಡೆಸಿದ ಗಣಿಗಾರಿಕೆಯೇ ಕಾರಣ. 1975 ರಿಂದ 1997 ರವರೆಗೆ ಬೃಹತ್ ಮ್ಯಾಂಗನೀಸ್ ಗಣಿಗಾರಿಕೆಗೆ ಜನಾಂದೋಲನದಿಂದ ಕಡಿವಾಣ ಬಿದ್ದಿತ್ತು.
- ಇದೇ ಜೂನ್– ಜುಲೈನಲ್ಲಿ ಗೇರುಸೊಪ್ಪಾ ಬಳಿ ಭಾರಿ ಭೂಕುಸಿತ ಸಂಭವಿಸಿತು. ಶರಾವತಿ ಅಭಯಾರಣ್ಯ, ಗೇರುಸೊಪ್ಪಾ ಕಣಿವೆಯಲ್ಲಿ ಶರಾವತಿ ಟೇಲ್‌ರೇಸ್ ಜಲವಿದ್ಯುತ್ ಯೋಜನೆಗಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ದೀರ್ಘಕಾಲ ನಡೆದ ಕಲ್ಲು ಕ್ವಾರಿಗಳೇ ಇದಕ್ಕೆ ಕಾರಣ. ಇಲ್ಲಿ 1995 ರಿಂದ 2005 ರವರೆಗೆ ಕಲ್ಲು ಗಣಿಗಾರಿಕೆ ನಡೆಯಿತು. ಈ ಹಿಂದೆಯೂ ಗೇರುಸೊಪ್ಪಾ ಕಣಿವೆಯಲ್ಲಿ ಅರಣ್ಯಗಳ ಮಧ್ಯೆ ಎರಡು ಬಾರಿ ಭೂಕುಸಿತ ಆಗಿತ್ತು. ಅದು ಹೊರ ಜಗತ್ತಿನ ಗಮನಕ್ಕೆ ಬರಲಿಲ್ಲ.
- ಕಾರವಾರ– ಅಂಕೋಲಾ ಮಧ್ಯೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಕಲ್ಲು ತೆಗೆಯುತ್ತಿರುವ ಹಲವು ಕಡೆಗಳಲ್ಲಿ ಭೂಕುಸಿತ ಸಂಭವಿಸುತ್ತಲೇ ಇದೆ. 2009–10 ರಲ್ಲಿ ಕಾರವಾರ ಸಮೀಪದ ಕಡವಾಡ ಪ್ರದೇಶದಲ್ಲಿ ಗುಡ್ಡ ಕುಸಿತದಿಂದ 19 ಮಂದಿ ಸಾವನ್ನಪ್ಪಿದ್ದರು.
- ಯಲ್ಲಾಪುರದ ಅರೇಬೈಲು ಘಟ್ಟದಲ್ಲಿ ಈ ಮಳೆಗಾಲದಲ್ಲಿ ಸರಣಿ ಭೂಕುಸಿತವಾಗಿದ್ದು, ಇಲ್ಲಿ ಹಲವು ವರ್ಷಗಳಿಂದ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಕೊಡಸಳ್ಳಿ ಜಲವಿದ್ಯುತ್ ಯೋಜನೆಯ ಕದ್ರಾ ಅಣೆಕಟ್ಟೆ ಮೇಲ್ಭಾಗದಲ್ಲಿ ಸೂಳೆಗೇರಿ ಬಳಿ ಎರಡು ಅರಣ್ಯಗಳ ಮಧ್ಯೆ ಭೂಕುಸಿತವಾಗಿದೆ. ಯೋಜನಾ ಪ್ರದೇಶದ ಸಮೀಪದಲ್ಲೇ ಕಲ್ಲು ಗಣಿಗಾರಿಕೆ ನಡೆಯುತ್ತಿದೆ.
- ಹೊನ್ನಾವರ ಬಳಿ ಅಪ್ಸರಕೊಂಡ ಬೆಟ್ಟದ ಪ್ರದೇಶದಲ್ಲಿ ಆಗಸ್ಟ್‌ನಲ್ಲಿ ಭೂಮಿ ಬಿರುಕು ಬಿಟ್ಟಿದ್ದು, ಸ್ಥಳೀಯರಲ್ಲಿ ಆತಂಕವುಂಟು ಮಾಡಿದೆ. ಯಾವುದೇ ಸಂದರ್ಭದಲ್ಲಿ ಭೂಕುಸಿತ ಆಗುವ ಸಾಧ್ಯತೆ ಇರುವುದರಿಂದ ಪ್ರದೇಶ ತೆರವುಗೊಳಿಸುವಂತೆ ಸ್ಥಳೀಯರಿಗೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಈ ಪ್ರದೇಶದಲ್ಲಿ ಬಹಳ ಹಿಂದೆ ಮ್ಯಾಂಗನೀಸ್ ಗಣಿಗಾರಿಕೆ ನಡೆದಿತ್ತು.
- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಬೇದೂರಿನಲ್ಲಿ ಭೂಕುಸಿತದಿಂದ ನಾಲ್ಕು ಮನೆಗಳು ನಾಶವಾಗಿವೆ. ಕೊಡಚಾದ್ರಿ– ಅಂಬಾರಗುಡ್ಡದಲ್ಲಿ ಕಳೆದ 2– 3 ವರ್ಷಗಳಿಂದ ಭೂಕುಸಿತ ಆಗುತ್ತಿದ್ದು, ಜನವಸತಿ ಇಲ್ಲದ ಕಾರಣ ಮಾಹಿತಿ ಹೊರ ಬರಲಿಲ್ಲ. ಇಲ್ಲಿ 2004–05 ರಲ್ಲಿ ಮ್ಯಾಂಗನೀಸ್ ಗಣಿಗಾರಿಕೆ ಆರಂಭಿಸಲಾಗಿತ್ತು. 2009–10 ರಲ್ಲಿ ಅಂಬಾರಗುಡ್ಡವನ್ನು ಪಾರಂಪರಿಕ ಜೀವ ವೈವಿಧ್ಯ ತಾಣ ಎಂದು ಘೋಷಿಸಲಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲಿ ಭೂಕುಸಿತವಾಗಿದ್ದು, ಇದಕ್ಕೆ ಕೆಂಪು ಕಲ್ಲು ಗಣಿಗಾರಿಕೆ ನಡೆದಿರುವುದೇ ಕಾರಣ ಎಂದು ಪರಿಸರ ತಜ್ಞರು ಹೇಳಿದ್ದಾರೆ.

ಮನುಕುಲದ ನೆರವಿಗೆ 'ಕಪ್ಪೆಲೋಕ'ದ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಚಿತ್ರಕಲಾ ಪರಿಷತ್‌ನಲ್ಲಿ ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಜನ್ಮದಿನದ ಪ್ರಯುಕ್ತ ಗುರುವಾರ ಆರಂಭವಾದ ತೇಜಸ್ವಿ ಲೋಕ–10ರ ಮಾಲಿಕೆಯ 'ಕಪ್ಪೆಲೋಕ' ಮೊದಲ ದಿನವೇ ವಿದ್ಯಾರ್ಥಿಗಳು, ಸಾರ್ವಜನಿಕರನ್ನು ಸೂಜಿಗಲ್ಲಿನಂತೆ ಸೆಳೆಯಿತು.

ಪರಿಸರ ಕುರಿತು ಕುತೂಹಲ ಹೊಂದಿದ್ದ ತೇಜಸ್ವಿ, ತಮ್ಮ ಜೀವಿತದುದ್ದಕ್ಕೂ ತಾವು ಕಂಡ ಜೀವ ವೈವಿಧ್ಯವನ್ನು ಕ್ಯಾಮೆರಾ ಕಣ್ಣಿನ ಮೂಲಕ ಸೆರೆ ಹಿಡಿದಿದ್ದರು. ಅಂಥ ಚಿತ್ರಗಳ ಸರಣಿಯಲ್ಲಿ ಕಪ್ಪೆಗಳೂ ಪ್ರಾಶಸ್ತ್ಯ ಪಡೆದಿವೆ. ಅವರ ಆಶಯದಂತೆ ಜನರಲ್ಲಿ ಪರಿಸರ ಸಂವರ್ಧನೆಯ ಜವಾಬ್ದಾರಿಯನ್ನು ಜಾಗೃತವಾಗಿಸಲು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ ಪ್ರತಿ ವರ್ಷ 'ತೇಜಸ್ವಿ ಜೀವಲೋಕ' ಆಯೋಜಿಸುತ್ತಿದೆ.



ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಕರ್ನಾಟಕ ಚಿತ್ರಕಲಾ ಪರಿಷತ್ತು, ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ಗುರುವಾರ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿದ್ದ 'ತೇಜಸ್ವಿ ಜೀವಲೋಕ' ಸರಣಿಯ 'ಕಪ್ಪೆಲೋಕ' ಛಾಯಾ ಚಿತ್ರ, ಸಾಕ್ಷ್ಯಚಿತ್ರಗಳ ಪ್ರದರ್ಶನವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು– ಪ್ರಜಾವಾಣಿ ಚಿತ್ರ.

ಹಕ್ಕಿಲೋಕ, ಕೀಟಲೋಕ, ಜೇಡಲೋಕ, ಬಾವಲಿಲೋಕ, ಕುರಿಂಜಿಲೋಕ ಸರಣಿಗಳಲ್ಲಿ ಈ ಬಾರಿಯ ಕಪ್ಪೆಲೋಕ ವಿಶಿಷ್ಟವಾಗಿತ್ತು. ಈ ಪ್ರದರ್ಶನ ಸೆ.18ರ ವರೆಗೆ ಇರಲಿದೆ.

ಸಿನಿಮಾ ಪುರವಣಿ





ಬನಾರಸ್
ಝೈದ್ ಖಾನ್

ರಾಜಕೀಯ ಇಷ್ಟವಿಲ್ಲ

'ಬನಾರಸ್' ನಾಯಕನ ಬಿಂದಾಸ್ ಮಾತು

ಉದ್ಯಮದ ಜೊತೆ ನಟನೆಯನ್ನೇ ನೆಚ್ಚಿಕೊಂಡು ಮುಂದುವರಿದಿದ್ದಾರೆ ಶಾಸಕ ಜಮೀರ್ ಅಹಮದ್ ಖಾನ್ ಪುತ್ರ ಝೈದ್ ಖಾನ್. ಸಾಕಷ್ಟು ತರಬೇತಿ, ಸಿದ್ಧತೆ, ಭಾಷಾ ಕಲಿಕೆಯ ಬಳಿಕ ಚಂದನವನಕ್ಕೆ ಪ್ರವೇಶಿಸಿರುವ ಅವರ ಮೊದಲ ಚಿತ್ರ 'ಬನಾರಸ್' ಸಿದ್ಧವಾಗಿದೆ. ಐದು ಭಾಷೆಗಳಲ್ಲಿ ಮೂಡಿಬರಲಿರುವ 'ಬನಾರಸ್'ನ ನಾಯಕ ತಮ್ಮ ಮೊದಲ ಚಿತ್ರದ ಬಗ್ಗೆ ತೆರೆದುಕೊಂಡದ್ದು ಹೀಗೆ

ಶರತ್ ಹೆಗ್ಡೆ

• ಬೆಳ್ಳಿತೆರೆಗೆ ಪ್ರವೇಶಿಸುವ ಸಂದರ್ಭ ಹೇಗನ್ನಿಸುತ್ತಿದೆ?

ತುಂಬಾ ಖುಷಿ ಅನ್ನಿಸುತ್ತಿದೆ. ನಮ್ಮ ಭಾಷೆಯ ಚಿತ್ರದಲ್ಲಿ ಕಾಣಿಸಿಕೊಳ್ಳುವುದೆಂದರೆ ಸಹಜವಾದ ಖುಷಿ ಅಲ್ವಾ. ಅದಕ್ಕಾಗಿ ಸಿದ್ಧತೆ ಮಾಡಿಕೊಂಡದ್ದು ಸಾರ್ಥಕವೆನಿಸಿದೆ.

• ನಿಮ್ಮ ಸಿದ್ಧತೆ ಏನಿತ್ತು?

ಪಿ.ಯು. ಶಿಕ್ಷಣ ಮುಗಿದ ಬಳಿಕ ಮುಂಬೈಗೆ ತೆರಳಿದೆ. ಅನುಪಮ್ ಖೇರ್ ಅಕಾಡೆಮಿಯಲ್ಲಿ ನಟನೆಯ ತರಬೇತಿ ಪಡೆದೆ. ಆ ಬಳಿಕ ಬೆಂಗಳೂರಿಗೆ ಬಂದೆ. ಗೌತಿ ಭಟ್ ಅನ್ನುವ ಶಿಕ್ಷಕಿ ಬಳಿ ಸ್ಪಷ್ಟ ಕನ್ನಡದ ಶಿಕ್ಷಣ ಪಡೆದೆ. ಸುಮಾರು 6 ತಿಂಗಳು ಭಾಷಾ ಸ್ಪಷ್ಟತೆ ಬರಲು ಬೇಕಾಯಿತು. ಅದರ ಪರಿಣಾಮವೇ ಇಂದು ಸ್ಪಷ್ಟವಾಗಿ ಕನ್ನಡ ಮಾತನಾಡಬಲ್ಲವನಾಗಿದ್ದೇನೆ. ಈ ಸಿನಿಮಾಕ್ಕೆ ಆಯ್ಕೆಯಾಗಬೇಕಾದರೂ ಕೆಲಕಾಲ ಕಾಯಬೇಕಾಯಿತು. ಸುಖಾ ಸುಮ್ಮನೆ ಕಥೆಗಳನ್ನು ಒಪ್ಪಿಕೊಳ್ಳುವುದಿಲ್ಲ. ನನ್ನ ಸಾಮರ್ಥ್ಯ ಮತ್ತು ಇತಿಮಿತಿಗಳ ಅರಿವು ಸ್ಪಷ್ಟವಾಗಿದೆ. ಅದಕ್ಕೆ ತಕ್ಕಂತಿರುವ ಪಾತ್ರಗಳನ್ನು ಆಯ್ಕೆ ಮಾಡುತ್ತೇನೆ. ನಿರ್ದೇಶಕ ಜಯತೀರ್ಥ ಅವರೂ ಅಷ್ಟೇ. ನನ್ನನ್ನು ದೀರ್ಘ ಕಾಲ ಅಧ್ಯಯನ ನಡೆಸಿ ನನಗೆ ಸರಿಹೊಂದುವ ಪಾತ್ರ ಸೃಷ್ಟಿ ಮಾಡಿದ್ದಾರೆ. ತುಂಬಾ ಆತ್ಮೀಯವಾಗಿ ನಡೆಸಿಕೊಂಡಿದ್ದಾರೆ.

• ಉದ್ಯಮಿ, ರಾಜಕಾರಣಿಯ ಮಗನಿಗೆ ಸಿನಿಮಾ ಆಸಕ್ತಿ ಬಂದದ್ದು ಹೇಗೆ?

ಚಿಕ್ಕ ವಯಸ್ಸಿನಿಂದಲೂ ಸಿನಿಮಾ ಬಗ್ಗೆ ಕ್ರೇಜ್ ಇತ್ತು. ನನಗೆ ರಾಜಕಾರಣ ಏನೇನೂ ಇಷ್ಟವಿಲ್ಲ. ಅದರಲ್ಲಿ ನೆಮ್ಮದಿ ಇಲ್ಲ. ನಮ್ಮ ಕುಟುಂಬದಲ್ಲಿ ಇನ್ನು ಯಾರೂ ರಾಜಕಾರಣಿಯಾಗಿ ಮುಂದುವರಿಯಬಾರದು. ಒಂದು ವೇಳೆ ನಾನು ರಾಜಕಾರಣ ಪ್ರವೇಶಿಸಿದರೆ ಪ್ರತಿಯೊಂದಕ್ಕೂ ಅಪ್ಪನ ಜೊತೆ ಹೋಲಿಸಿ ನೋಡುವ ಸಾಧ್ಯತೆಯೂ ಇದೆ. ಹಾಗಾಗಿ ನಾನು ಅಪ್ಪನ ಉದ್ಯಮ ಮತ್ತು ನನ್ನ ಆಸಕ್ತಿ ಆಗಿರುವ ನಟನೆಯನ್ನೇ ಮುಂದುವರಿಸುತ್ತೇನೆ.

• ಅಪ್ಪನ ಮನವೊಲಿಸಿದ್ದು ಹೇಗೆ?

ಹೌದು ಅದೊಂದು ದೊಡ್ಡ ಸರ್ಕಸ್. ಒಂದು ಕುರುಕ್ಷೇತ್ರ ಯುದ್ಧದಂತೆ. ನಮ್ಮ ಅಪ್ಪ ಸ್ವಲ್ಪ ಮುಂಗೋಪಿ. ಎಲ್ಲಿ ರೇಗಾಡುತ್ತಾರೋ ಎಂಬ ಭಯ ಇತ್ತು. ಹಾಗಾಗಿ ನಟನೆ, ಸಿನಿಮಾ ಆಸೆಯನ್ನು 2014ರಿಂದಲೇ ಅದುಮಿಟ್ಟುಕೊಂಡಿದ್ದೆ. ನಮ್ಮ ನಿರ್ಮಾಪಕ ತಿಲಕ್‌ರಾಜ್ ಮತ್ತು ಅಪ್ಪ ತುಂಬಾ ಆತ್ಮೀಯರು. ಅವರ ಮೂಲಕ ಸೂಕ್ಷ್ಮವಾಗಿ ಹೇಳಿಸಿದೆ. ಅದಕ್ಕೂ ದೊಡ್ಡ ಜಗಳವೇ ಆಗಿ ಹೋಯಿತು. ಕೊನೆಗೂ ಒಲ್ಲದ ಮನಸ್ಸಿನಿಂದ ಒಪ್ಪಿದ ಅಪ್ಪ, ನಾನು ನಿನ್ನ ಜೊತೆ ಸಿನಿಮಾ ವಿಷಯದಲ್ಲಿ ಬೆಂಬಲವಾಗಿ ನಿಲ್ಲುವುದಿಲ್ಲ. ಹಣಕಾಸು, ಅಥವಾ ಯಾವುದೇ ನೆರವು ಸಿಗುವುದಿಲ್ಲ. ನಿನ್ನ ಸ್ವಪ್ರಯತ್ನದಿಂದ ಏನಾಗುತ್ತದೋ ಅದನ್ನು ಮಾಡು ಅಂದು ಬಿಟ್ಟರು. ನಟನೆ ಕಲಿತುಕೊಂಡು ಬರಲಿ. ಮತ್ತೆ ನೋಡೋಣ ಎಂದು ತಿಲಕ್‌ರಾಜ್ ಅವರಿಗೆ ಹೇಳಿದರು. ಅಲ್ಲಿಂದ ಇಲ್ಲಿವರೆಗೆ ಬಂದಿದ್ದೇನೆ ನೋಡಿ. ಅಪ್ಪ ಇನ್ನೂ ನಮ್ಮ ಸಿನಿಮಾದ ಪ್ರತಿ ನೋಡಿಯೇ ಇಲ್ಲ.

• ಹೊಸ ಪ್ರಾಜೆಕ್ಟ್‌ಗಳ ಬಗ್ಗೆ?

ಸದ್ಯ 'ಬನಾರಸ್' ಬಿಡುಗಡೆಯತ್ತ ಗಮನವಿದೆ. ಮುಂದಿನ ವರ್ಷ ಜನವರಿ– ಫೆಬ್ರುವರಿ ವೇಳೆಗೆ ಮತ್ತೆ ಎರಡು ಹೊಸ ಚಿತ್ರಗಳನ್ನು ಕೈಗೆತ್ತಿಕೊಳ್ಳುತ್ತೇನೆ. ಈ ಕ್ಷೇತ್ರದಲ್ಲೇ ಇನ್ನೊಂದಿಷ್ಟು ಕನಸುಗಳಿವೆ. ❖

ಸಿನಿಮಾತು ನೋಡಲು
ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜನಪ್ರಿಯತೆ, ಜನಪರತೆ ಎರಡೂ ಬೇಕು: ಜಯತೀರ್ಥ

ಕನ್ನಡದ ಕ್ರಿಯಾಶೀಲ ನಿರ್ದೇಶಕರಲ್ಲೊಬ್ಬರು ಜಯತೀರ್ಥ ಬಿ.ವಿ. ತಮ್ಮ ಚಿತ್ರಗಳಲ್ಲಿ ಕಥೆ, ಕಲಾತ್ಮಕತೆ, ತತ್ವಗಳನ್ನು ಒಟ್ಟಾಗಿ ಕಟ್ಟಿಕೊಡುವ ಸೃಜನಶೀಲತೆ ಅವರ ವಿಶೇಷ. ತಮ್ಮ ನಿರ್ದೇಶನದ ಫ್ರೇಮುಗಳನ್ನು ಅವರು ತೆರೆದಿಟ್ಟದ್ದು ಹೀಗೆ...



ಜಯತೀರ್ಥ

ಮೊದಲ ಚಿತ್ರ 'ಒಲವೇ ಮಂದಾರ' ಯಾವುದೇ ಅನುಭವ ಇಲ್ಲದೇ ತೋಚಿದಂತೆ ಮಾಡಿದ ಸಿನಿಮಾ. ನಿರೀಕ್ಷೆಗೂ ಮೀರಿ ಚೆನ್ನಾಗಿ ಮೂಡಿ ಬಂದಿತು. ಅದನ್ನು ನೋಡಿದರೆ ಒಮ್ಮೊಮ್ಮೆ ಅನುಭವ ಕೆಲಸಕ್ಕೆ ಬರುವುದಿಲ್ಲ ಅನಿಸುವುದುಂಟು. ಚಿತ್ರಗಳಲ್ಲಿ ಸೃಜನಶೀಲತೆ, ಸಂದೇಶ, ಒಂದು ಫಿಲಾಸಫಿ ಬೇಕು ಅನ್ನುವವನು ನಾನು.

ನಿಜ ಹೇಳಲಾ, ಪ್ರೇಕ್ಷಕನಿಗೆ ಸಂದೇಶ, ತತ್ವ ಏನೂ ಬೇಡ. ಅವನಿಗೆ ಬೇಕಾದದ್ದು ಮನೋರಂಜನೆ. ಹೀಗಿರುವಾಗ ನಾವು ಮನೋರಂಜನೆಯ ಒಳಗೆ ಒಂದಿಷ್ಟು ಸಂದೇಶವನ್ನು ಬುದ್ಧಿವಂತಿಕೆಯಿಂದ ಕಟ್ಟಿ ಕೊಡಬೇಕು. ಈಗಿನ 'ಜನಪ್ರಿಯ'ತೆಯ ಅಲೆಯಲ್ಲಿ ಜನಪರತೆಯನ್ನು ಮರೆಯಬಾರದು. ಅವೆರಡರ ಸಮ್ಮಿಶ್ರಣವೇ ಕ್ರಿಯಾಶೀಲ ಸಿನಿಮಾ.

ಹೊಸಬರನ್ನು ಹಾಕಿಕೊಂಡರೆ ತಾಜಾತನ ಇರುತ್ತದೆ. ನಾನು ಇಲ್ಲಿ ಹೀರೊಗಳನ್ನು ರೂಪಿಸುವುದಿಲ್ಲ. ಒಳ್ಳೆಯ ಕಲಾವಿದರನ್ನು ರೂಪಿಸುತ್ತೇನೆ ಅಷ್ಟೇ.

ಈಗ ಸಿದ್ಧವಾಗಿರುವ 'ಬನಾರಸ್' ಕಾವೇರಿಯಿಂದ ಗಂಗಾನದಿವರೆಗಿನ ಸಿನಿಮಾ. ಬನಾರಸ್‌ನಲ್ಲಿ ಮೂಡುವ ಪ್ರೀತಿಯು ನಶ್ವರತೆ, ಸಾವು, ವೈರಾಗ್ಯ ಇತ್ಯಾದಿಗಳ ಹಿನ್ನೆಲೆಯಲ್ಲೇ ಹೊಸ ಹುಟ್ಟುವಿಕೆ (ಪ್ರೀತಿ)ಯನ್ನು ಹೇಳುತ್ತಾ ಹೋಗುತ್ತದೆ. ಒಂದಿಷ್ಟು ಲಾಜಿಕ್, ವಿಜ್ಞಾನ, ಕುತೂಹಲ ಎಲ್ಲವನ್ನೂ ಕಟ್ಟಿಕೊಡಲು ಹೋಗಿದ್ದೇವೆ. ನಾಯಕ ಝೈದ್ ಖಾನ್‌ಗೆ ಬದ್ಧತೆ ಸ್ವಲ್ಪ ಹೆಚ್ಚೇ ಇದೆ. ಸಾಕಷ್ಟು ಸಿದ್ಧತೆಯೊಂದಿಗೆ ಬಂದಿದ್ದಾರೆ. ಅವರನ್ನು ಒಬ್ಬ ಕಲಾವಿದನನ್ನಾಗಿ ರೂಪಿಸುವುದೇ ನನ್ನ ಗುರಿ.

ಈಗ ಸೆಟ್ಟೇರಿರುವ 'ಕೈವ' 1983ರ ಕಾಲಘಟ್ಟದ ಒಂದು ಘಟನೆ. ಬೆಂಗಳೂರಿನಲ್ಲಿ ಗಂಗಾರಾಮ್ ಕಟ್ಟಡ ಕುಸಿದಿತ್ತಲ್ಲಾ. ಅಂಥ ದುರಂತದ ಮಧ್ಯೆಯೂ ಹುಟ್ಟಿದ ಪ್ರೇಮ. ಅದರ ಮೇಲೂ ದುರಂತಗಳು. ಅಪರಾಧ, ಪತ್ತೆದಾರಿ ಅಂಶಗಳನ್ನಿಟ್ಟುಕೊಂಡು ಕಥೆ ಹೆಣೆದಿದ್ದೇನೆ. ಮುಂದಿನದ್ದನ್ನು ಸಿನಿಮಾದಲ್ಲೇ ನೋಡಿ.

ಪೂರ್ಣ ಸಂದರ್ಶನ ಓದಲು: www.prajavani.net ನೋಡಿ ❖

ಶಾನುಭೋಗರ ಮಗಳಾಗಿ ರಾಗಿಣಿ ಪ್ರಜ್ವಲ್

ಅತಿ ಹೆಚ್ಚು ಕಾದಂಬರಿ ಆಧಾರಿತ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿರುವ ನಿರ್ದೇಶಕ ಕೋಡ್ಲು ರಾಮಕೃಷ್ಣ ಅವರು ಇದೀಗ ಮತ್ತೊಂದು ಕಾದಂಬರಿ ಆಧಾರಿತ ಸಿನಿಮಾ ನಿರ್ಮಾಣಕ್ಕೆ ಸಜ್ಜಾಗಿದ್ದಾರೆ.

ಭಾಗ್ಯ ಕೃಷ್ಣಮೂರ್ತಿ ಅವರ ಕಾದಂಬರಿ 'ಶಾನುಭೋಗರ ಮಗಳು' ಆಧಾರಿತ ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ಆರಂಭವಾಗಲಿದ್ದು, ಪ್ರಮುಖ ಪಾತ್ರದಲ್ಲಿ ನಟಿ ರಾಗಿಣಿ ಪ್ರಜ್ವಲ್ ನಟಿಸಲಿದ್ದಾರೆ. ಭುವನ್ ಫಿಲಂಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ಚಿತ್ರಕ್ಕೆ ಬಿ.ಎ.ಮಧು ಚಿತ್ರಕಥೆ ಹಾಗೂ ಸಂಭಾಷಣೆ ಬರೆಯುತ್ತಿದ್ದಾರೆ. ಚಿತ್ರಕ್ಕೆ ಜೈ ಆನಂದ್ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ ಹಾಗೂ ವಸಂತ್ ರಾವ್ ಕುಲಕರ್ಣಿ ಅವರ ಕಲಾ ನಿರ್ದೇಶನವಿರಲಿದೆ.

ಮೇಘಶ್ರೀ, ನಿರಂಜನ್ ಕುಮಾರ್, ರಮೇಶ್ ಭಟ್, ಟೆನ್ನಿಸ್ ಕೃಷ್ಣ, ಶಂಕರ್ ಅಶ್ವತ್ಥ್, ನೀನಾಸಂ ಅಶ್ವತ್ಥ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಈ ಚಿತ್ರದಲ್ಲಿ ಟಿಪ್ಪು ಸುಲ್ತಾನ್ ಪ್ರಮುಖ ಪಾತ್ರವಾಗಿದ್ದು, ಆ ಪಾತ್ರಕ್ಕಾಗಿ ಆಯ್ಕೆ ಕಾರ್ಯ ನಡೆಯುತ್ತಿದೆ. ಸೆಪ್ಟೆಂಬರ್ ಕೊನೆಯ ವಾರದಿಂದ ಮೈಸೂರು, ಶ್ರೀರಂಗಪಟ್ಟಣ, ಮೇಲುಕೋಟೆ ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ ಎಂದಿದೆ ಚಿತ್ರತಂಡ. ❖

'ಬ್ಯಾಚುಲರ್ ಪಾರ್ಟಿ' ಮಾಡಿದ ರಕ್ಷಿತ್ ಶೆಟ್ಟಿ!

ನಟ ರಕ್ಷಿತ್ ಶೆಟ್ಟಿ, ತಮ್ಮ ಪರಂವಃ ಸ್ಟುಡಿಯೋಸ್‌ನಡಿ ನಿರ್ಮಾಪಕರಾಗಿ ಸಾಲು ಸಾಲು ಚಿತ್ರನಿರ್ಮಾಣಕ್ಕೆ ಇಳಿದಿದ್ದಾರೆ. ಇತ್ತೀಚೆಗಷ್ಟೇ ಚಂದ್ರಜಿತ್ ಬೆಳ್ಳಿಯಪ್ಪ ನಿರ್ದೇಶನದ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಘೋಷಿಸಿದ್ದ ಪರಂವಃ, ಇದೀಗ 'ಬ್ಯಾಚುಲರ್ ಪಾರ್ಟಿ' ಮಾಡಲು ಸಜ್ಜಾಗಿದೆ.

ರಕ್ಷಿತ್, ಕೇವಲ ನಾಯಕರಾಗಿಯಷ್ಟೇ ಅಲ್ಲದೆ ನಿರ್ಮಾಪಕರಾಗಿಯೂ ಜನಪ್ರಿಯರಾಗುತ್ತಿದ್ದಾರೆ. ಪರಂವಃ ಸ್ಟುಡಿಯೋಸ್ ಮೂಲಕ ಯುವಪ್ರತಿಭೆಗಳಿಗೆ ಅವಕಾಶ ನೀಡುತ್ತಾ ಬಂದಿದ್ದಾರೆ ರಕ್ಷಿತ್. ಪರಂವಃದ ಹೊಸ ಚಿತ್ರಗಳಾದ 'ಬ್ಯಾಚುಲರ್ ಪಾರ್ಟಿ' ಹಾಗೂ 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರಗಳ ಮುಹೂರ್ತ ಸಮಾರಂಭ ಇತ್ತೀಚೆಗೆ ಧರ್ಮಗಿರಿ ಮಂಜುನಾಥಸ್ವಾಮಿ ದೇವಸ್ಥಾನದಲ್ಲಿ ನಡೆಯಿತು.

'ನಮ್ಮ 7 ಆಡ್ಸ್ ತಂಡದ ಸದಸ್ಯರು ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ ಎನ್ನುವುದು ಖುಷಿಯ ವಿಚಾರ. ಕಿರಣ್‌ರಾಜ್ ಬಳಿಕ ಇದೀಗ ಚಂದ್ರಜಿತ್ ಬೆಳ್ಳಿಯಪ್ಪ ಹಾಗೂ ಅಭಿಜಿತ್ ಮಹೇಶ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಅಭಿಜಿತ್ ಮಹೇಶ್ ನನಗೆ ಕಿರುಚಿತ್ರಗಳನ್ನು ಮಾಡುತ್ತಿರುವಾಗಲೇ ಪರಿಚಯ. ನಂತರದಲ್ಲಿ ಇವರು 'ಕಿರಿಕ್ ಪಾರ್ಟಿ', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು', 'ಅವನೇ ಶ್ರೀಮನ್ನಾರಾಯಣ' ಸಿನಿಮಾದಲ್ಲಿ ಕೆಲಸ ಮಾಡಿದ್ದರು. 'ಕಿರಿಕ್ ಪಾರ್ಟಿ' ಸಿನಿಮಾ ಕಾಲೇಜಿನ ವಾತಾವರಣದಲ್ಲಿ ನಡೆದಿತ್ತು, 'ಬ್ಯಾಚುಲರ್ ಪಾರ್ಟಿ' ಸಿನಿಮಾ ಬ್ಯಾಂಕಾಕ್‌ನಲ್ಲಿ ನಡೆಯಲಿದೆ. ಇದೊಂದು ಹಾಸ್ಯಪ್ರಧಾನ ಚಿತ್ರ. ಅಭಿಜಿತ್ ಮಹೇಶ್ ಸಂಭಾಷಣೆ ಸಂಪೂರ್ಣ ಹಾಸ್ಯದಿಂದ ಕೂಡಿರುತ್ತದೆ. ಪರಂವಃ ಸ್ಟುಡಿಯೋಸ್ ಬ್ಯಾನರ್‌ನಡಿ ರಿಷಬ್ ಶೆಟ್ಟಿ ಮೊದಲ ಬಾರಿ ನಟಿಸುತ್ತಿದ್ದಾರೆ' ಎಂದರು ರಕ್ಷಿತ್ ಶೆಟ್ಟಿ.



'ಸಂಬಂಧ ಮತ್ತು ಸ್ನೇಹವನ್ನು ಆಧರಿಸಿದ ಸ್ವಚ್ಛ ಹಾಸ್ಯದ ಸಿನಿಮಾ ಇದು. ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ. ತಾರಾಬಳಗದಲ್ಲಿ ಸಿರಿ ರವಿಕುಮಾರ್, ಜಯಲಕ್ಷ್ಮಿ, ಪ್ರಕಾಶ್ ತುಮ್ಮಿನಾಡ್ ಮುಂತಾದವರಿದ್ದಾರೆ' ಎಂದರು ಅಭಿಜಿತ್. ❖

ಸಿನಿ ಸಂಕ್ಷಿಪ್ತ

ದೇವರಾಗಿ ಬರ್ತಿದ್ದಾರೆ ಪುನೀತ್!

ನಟ, ಪವರ್‌ಸ್ಟಾರ್ ದಿವಂಗತ ಪುನೀತ್ ರಾಜ್‌ಕುಮಾರ್ ಅತಿಥಿ ಪಾತ್ರದಲ್ಲಿ ಅಭಿನಯಿಸಿದ ಸಿನಿಮಾ 'ಲಕ್ಕಿಮ್ಯಾನ್' ಶುಕ್ರವಾರ(ಸೆ.9) ತೆರೆಕಾಣುತ್ತಿದೆ.

ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಪುನೀತ್ ಅವರು ದೇವರಾಗಿ ವಿಶೇಷ ಪಾತ್ರದಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ತಮಿಳಿನ 'ಓ ಮೈ ಕಡವುಳೆ' ಸಿನಿಮಾ ಕಥೆಯ ಎಳೆಯನ್ನಿಟ್ಟುಕೊಂಡು, ಪ್ರಭುದೇವ ಸಹೋದರ ಎಸ್.ನಾಗೇಂದ್ರ ಪ್ರಸಾದ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ 'ಬಾರೋ ರಾಜ' ಎನ್ನುವ ಹಾಡೊಂದಕ್ಕೆ ಪುನೀತ್ ರಾಜ್‌ಕುಮಾರ್ ಹಾಗೂ ಭಾರತದ ಮೈಕಲ್ ಜಾಕ್ಸನ್ ಪ್ರಭುದೇವ ಹೆಜ್ಜೆ ಹಾಕಿದ್ದು, ಈಗಾಗಲೇ ಈ ಹಾಡು ಹಾಗೂ ಚಿತ್ರದ ಟ್ರೈಲರ್ ವೀಕ್ಷಕರ ಮೆಚ್ಚುಗೆ ಪಡೆದಿದೆ.



ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣಗೆ ಜೋಡಿಯಾಗಿ ಸಂಗೀತಾ ಶೃಂಗೇರಿ ಹಾಗೂ ರೋಷನಿ ಪ್ರಕಾಶ್ ಬಣ್ಣಹಚ್ಚಿದ್ದಾರೆ. ಫ್ಯಾಂಟಸಿ ಡ್ರಾಮಾ ಕಥಾಹಂದರದ ಈ ಚಿತ್ರವನ್ನು ಪಿ.ಆರ್. ಮೀನಾಕ್ಷಿ ಸುಂದರಂ ಹಾಗೂ ಪಿ.ಕಾಮರಾಜ್ ನಿರ್ಮಾಣ ಮಾಡಿದ್ದಾರೆ. ❖

ಒಟಿಟಿ

'69 ವ್ಯೂಸ್'; ಇಂದು ಪ್ರಸಾರ

ಯುವ ನಿರ್ದೇಶಕ ಹರಿಪ್ರಕಾಶ್ ಕಿರುಚಿತ್ರ ನಿರ್ಮಾಣದ ಪ್ರಥಮ ಹೆಜ್ಜೆಯಲ್ಲೇ ಯಶಸ್ಸು ಸಾಧಿಸಿದ್ದಾರೆ. ಅವರ ನಿರ್ದೇಶನದಲ್ಲಿ ಮೂಡಿಬಂದಿರುವ '69 ವ್ಯೂಸ್' ಎಂಬ ಕಿರುಚಿತ್ರ ಬಿಡುಗಡೆಗೂ ಮುನ್ನವೇ ಸಾಕಷ್ಟು ದಾಖಲೆಗಳನ್ನು ಬರೆದಿದೆ.

ದೇಶ-ವಿದೇಶಗಳಲ್ಲಿ ನಡೆದ ಹಲವಾರು ಕಿರುಚಿತ್ರೋತ್ಸವಗಳಲ್ಲಿ ಪಾಲ್ಗೊಂಡಿರುವ '69 ವ್ಯೂಸ್' ಈವರೆಗೂ ಇಪ್ಪತ್ತಕ್ಕೂ ಅಧಿಕ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಸಂಕಲನ, ಚಿತ್ರಕಥೆ, ನಿರ್ದೇಶನ ವಿಭಾಗ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಮಡಿಲಿಗೆ ಹಾಕಿಕೊಂಡಿದೆ. ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಪ್ರದರ್ಶನ ಕಂಡು ಮೆಚ್ಚುಗೆಗೆ ಪಾತ್ರವಾಗಿದೆ.

ಸೆಪ್ಟೆಂಬರ್ 9ರಿಂದ ಅಮೆಜಾನ್ ಪ್ರೈಮ್, ಟಾಟಾ ಪ್ಲೇ ಬಿಂಜ್, ಏರ್‌ಟೆಲ್ ಎಕ್ಸ್‌ಟ್ರೀಮ್ ಹಾಗೂ ನಮ್ಮ ಫ್ಲಿಕ್ಸ್ ಒಟಿಟಿ ಆ್ಯಪ್ ಮೂಲಕ ಈ ಚಿತ್ರ ಬಿಡುಗಡೆಯಾಗಲಿದೆ.

ಸ್ವಾಮಿ ಮೈಸೂರು ಛಾಯಾಗ್ರಹಣ, ಪುಷ್ಕರ್ ಗಿರಿಗೌಡ ಸಂಕಲನ, ಆನಂದ್ ರಾಜಾ ವಿಕ್ರಮ್ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಸಸ್ಪೆನ್ಸ್-ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಕಿರುಚಿತ್ರ 26 ನಿಮಿಷಗಳ ಅವಧಿಯದ್ದು. ದೃಶ್ಯಗಳಲ್ಲಿ ಸಿನಿಮಾ ಗುಣಮಟ್ಟವನ್ನು ಕಾಯ್ದುಕೊಂಡಿದೆ. ನೀರಿನೊಳಗೂ ಶೂಟಿಂಗ್ ಮಾಡಲಾಗಿದೆ.



ಪ್ರಿಯಾಂಕಾ ಕೆ. ನಿರ್ಮಿಸಿರುವ ಈ ಕಿರುಚಿತ್ರದಲ್ಲಿ ರಂಗಭೂಮಿ ಕಲಾವಿದರಾದ ಶಶಾಂಕ್ ಶರ್ಮಾ, ರೋವನ್ ಪೂಜಾರಿ, ನಳಿನ್ ಅರಕಲ್ ತಾರಾಗಣದಲ್ಲಿದ್ದಾರೆ. ❖

'ಆಗೋದೆಲ್ಲಾ ಒಳ್ಳೇದಕ್ಕೆ' ಇದೇ ಜೀವನ ಸೂತ್ರ

ಬದುಕಿನಲ್ಲಿ ಆಕಸ್ಮಿಕ ಘಟನೆಗಳು ನಡೆಯುವುದೆಲ್ಲಾ ಒಳ್ಳೆಯದಕ್ಕೇ ಆಗಿರುತ್ತದೆಯೇ? ಹೌದೆನ್ನುತ್ತಾರೆ ನಿರ್ದೇಶಕ ಆರೋನ್ ಕಾರ್ತಿಕ್ ವೆಂಕಟೇಶ್. ಅವರ ನಿರ್ದೇಶನದ ಹೊಸ ಚಿತ್ರದ ಹೆಸರು 'ಆಗೋದೆಲ್ಲಾ ಒಳ್ಳೇದಕ್ಕೆ'. ಚಿತ್ರ ಇತ್ತೀಚೆಗೆ ಮುಹೂರ್ತ ನೆರವೇರಿಸಿಕೊಂಡಿದೆ.

'ಆಕಸ್ಮಿಕ ಘಟನೆಗಳೇ ಸಂದೇಶ ಕೊಡುತ್ತವೆ. ಏನೇ ಆದರೂ ಆ ಸಮಯದಲ್ಲಿ ಕೆಟ್ಟದ್ದು ಎಂಬಂತೆ ಕಾಣಿಸಬಹುದು. ಕೊನೆಗೆ ನೋಡಿದರೆ, ಆಗೋದೆಲ್ಲಾ ಒಳ್ಳೇದಕ್ಕೆ ಅನಿಸುತ್ತದೆ. ಅಂತಿಮವಾಗಿ ಒಳ್ಳೆಯದಕ್ಕೆ ಆಯ್ತಲ್ಲಾ ಎಂದು ನೆಮ್ಮದಿ ಸಿಗುತ್ತದೆ. ಕಾಣದ ಕೈಗಳು ಒಳ್ಳೆಯದನ್ನೇ ನಡೆಸುತ್ತಾ ಬಂದಿರುತ್ತವೆ. ಏನೋ ಆದರೂ ಒಳ್ಳೆಯದಕ್ಕೆ ಎಂದು ಭಾವಿಸಿದರೆ ಜೀವನ ಸುಂದರ ಎಂಬ ಸೂತ್ರದ ಮೇಲೆ ಈ ಚಿತ್ರ ಇದೆ. ಪ್ರೀತಿ-ಭಯೋತ್ಪಾದನೆ-ಸರ್ಕಾರ ಮೂರು ವಿಷಯಗಳ ಸುತ್ತ ಚಿತ್ರವು ಆ್ಯಕ್ಷನ್ ಥ್ರಿಲ್ಲರ್ ರೂಪದಲ್ಲಿ ಸಾಗುತ್ತದೆ' ಎಂದರು ಆರೋನ್.

ಆರೋನ್ ಅವರು 'ದರ್ಪಣ' ಮತ್ತು 'ಪರಿಶುದ್ಧಂ' ಚಿತ್ರಗಳನ್ನು ನಿರ್ದೇಶಿಸಿದವರು. ಸೀಗೆಹಳ್ಳಿಯ ಎ.ಎಸ್.ಲೋಹಿತ್ ಅವರು ಬಿನಿಶಾ ಕ್ರಿಯೇಶನ್ಸ್ ಅಡಿಯಲ್ಲಿ ಈ ಚಿತ್ರ ನಿರ್ಮಿಸುತ್ತಿದ್ದಾರೆ.

ತಾರಾಗಣದಲ್ಲಿ ಎಂ.ಡಿ.ಕೌಶಿಕ್, ಯತಿರಾಜ್, ಸಂದೀಪ್‌ಮಲಾನಿ, ದುಬೈ ರಫೀಕ್, ಮಠ ಕೊಪ್ಪಳ, ಪಾವನಿರಾಜು, ಭಾರ್ಗವ್, ಅರ್ಚನಾ, ಕಿರಣ್, ಆಮನ್, ತೇಜಸ್ವಿನಿ, ಜೀವ, ಸೈಯದ್‌ಜೋಹಾನ್, ಮಾಸ್ಟರ್ ಸುಮಿತ್, ಸುಹೈಲ್ ಮುಂತಾದವರು ನಟಿಸುತ್ತಿದ್ದಾರೆ. ಬೆಂಗಳೂರು, ಕಾರವಾರ ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಛಾಯಾಗ್ರಹಣ ಸಂಗಮೇಶ್, ಸಂಕಲನ ಆಯೂರ್ ಸ್ವಾಮಿ, ಸಾಹಸ ಜಾನಿಮಾಸ್ಟರ್ ಅವರದ್ದು. ❖



ಆಗೋದೆಲ್ಲಾ ಒಳ್ಳೇದಕ್ಕೆ
ಭಾರ್ಗವ್ ಪಾವನಿರಾಜು

ಹಿಜಾಬ್ ನಿಷೇಧ ಆದೇಶ: ಮೇಲ್ಮನವಿಗಳ ವಿಚಾರಣೆ ಮುಂದುವರಿಸಿದ ಸುಪ್ರೀಂ ಕೋರ್ಟ್

ಟರ್ಬನ್–ಹಿಜಾಬ್‌ಗೆ ಹೋಲಿಕೆ ಸಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೀದಿಯಲ್ಲಿ ಹಿಜಾಬ್ ಧರಿಸುವುದು ಯಾರಿಗೂ ತೊಂದರೆ ಮಾಡದೆ ಇರಬಹುದು. ಆದರೆ, ಶಾಲೆಗಳಲ್ಲಿ ಹಿಜಾಬ್ ಧರಿಸುವುದರಿಂದ ಸಾರ್ವಜನಿಕ ನಿಯಮಗಳ ಕುರಿತು ಪ್ರಶ್ನೆ ಹುಟ್ಟು ಹಾಕಬಹುದು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

ನಂತರ ಸುಪ್ರೀಂಕೋರ್ಟ್, 'ಸಿಖ್ ಧರ್ಮದವರ ಟರ್ಬನ್ ಹಾಗೂ ಹಿಜಾಬ್‌ಗೆ ಹೋಲಿಕೆ ಮಾಡುವುದು ಸರಿಯಲ್ಲ. ಟರ್ಬನ್ ಧರಿಸುವ ಪದ್ಧತಿ ಭಾರತೀಯ ಸಂಸ್ಕೃತಿಯಲ್ಲಿ ಬೆರೆತು ಹೋಗಿದ್ದು, ಅದರ ಸಿಂಧುತ್ವವನ್ನು ಸುಪ್ರೀಂಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ಕೂಡ ಅಂಗೀಕರಿಸಿದೆ' ಎಂದಿತು.



ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಗುರುವಾರ ಮುಂದುವರಿಸಿದ ನ್ಯಾಯ ಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ, ಹಿಜಾಬ್ ನಿಷೇಧವನ್ನು ಎತ್ತಿ ಹಿಡಿದ ಕರ್ನಾಟಕ ಹೈಕೋರ್ಟ್‌ನ ಮಾರ್ಚ್ 15ರ ಆದೇಶವು ಇಸ್ಲಾಂ ಧರ್ಮ ನಿಂದನೆಯ ಉದ್ದೇಶವನ್ನು ಹೊಂದಿದೆ ಎಂಬ ವಾದವನ್ನು ಒಪ್ಪಿಕೊಳ್ಳಲು ನಿರಾಕರಿಸಿತು.

ಅರ್ಜಿದಾರರ ಪರವಾಗಿ ಹಾಜರಾದ ಹಿರಿಯ ವಕೀಲ ನಿಜಾಮುದ್ದೀನ್ ಪಾಷಾ, 'ತಲೆಕೂದಲು ಬೆಳೆಸುವುದು ಮತ್ತು ಟರ್ಬನ್ ಧರಿಸುವುದು ಸಿಖ್ ಧರ್ಮದ ಐದು ನಂಬಿಕೆಗಳಲ್ಲಿ ಒಂದು. ಖುರಾನ್‌ನಲ್ಲಿ ಅಲ್ಲಾಹ್ ಹೇಳಿರುವ ಮಾತುಗಳನ್ನು ಪಾಲಿಸುವುದು ಕೂಡಾ ಇಸ್ಲಾಂ ಧರ್ಮದ ಐದು ನಂಬಿಕೆಗಳಲ್ಲಿ ಒಂದಾಗಿದೆ' ಎಂದರು.

ಸಮವಸ್ತ್ರದ್ದೇ ಬಣ್ಣದ ಹಿಜಾಬ್ ಧರಿಸುವುದರಿಂದ ಶಿಸ್ತಿನ ಉಲ್ಲಂಘನೆ ಆಗುವುದಿಲ್ಲ ಎಂದೂ ಅವರು ವಾದಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, ಸಿಖ್ ಧರ್ಮದ ಐದು ನಿಯಮಗಳ ಪಾಲನೆ ಕಡ್ಡಾಯವಾಗಿದ್ದು ಐವರು ಸದಸ್ಯರ ಪೀಠ ಕೂಡಾ ಸಿಖ್ಖರಿಗೆ ಟರ್ಬನ್ ಮತ್ತು ಕಿರ್ಪನ್ ಧರಿಸುವುದು ಕಡ್ಡಾಯ ಎಂದು ತೀರ್ಪು ನೀಡಿದೆ. ಆದ್ದರಿಂದ ಈ ಪ್ರ-ಕರಣವನ್ನು ಅದರೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದಿತು.

ಆಗ ಪಾಷಾ, ಇಸ್ಲಾಂ ಧರ್ಮ 1400 ವರ್ಷಗಳಷ್ಟು ಹಳೆಯದ್ದು. ಅಂದಿನಿಂದ ಹಿಜಾಬ್ ಜಾರಿಯಲ್ಲಿದೆ. ಈಗ ಹೈಕೋರ್ಟ್ ಹಿಜಾಬ್ ಧರಿಸುವ ಕುರಿತು ತನ್ನಲ್ಲೇ ವ್ಯಾಖ್ಯಾನ ನೀಡಿ ಧರ್ಮ ನಿಂದನೆ ಮಾಡಿದೆ ಎಂದರು.

ಆಗ ನ್ಯಾಯಪೀಠ, ವಾದ ತನ್ನ ವ್ಯಾಪ್ತಿ ಮೀರಿ ಹೋಗುವುದು ಬೇಡ ಎಂದು ಎಚ್ಚರಿಸಿತು.

ಹಿಜಾಬ್ ಧರಿಸುವ ಹಕ್ಕು, ಸಂವಿಧಾನದ 29(1) ಪರಿಚ್ಛೇದದ ಅಡಿಯಲ್ಲಿ ಅಲ್ಪಸಂಖ್ಯಾತರಿಗೆ ಅವರ ಸಂಸ್ಕೃತಿಯನ್ನು ಕಾಪಾಡುವ ಹಕ್ಕು ನೀಡುತ್ತದೆ. ಆದರೆ, ಈಗ ಶೈಕ್ಷಣಿಕ ಸಂಸ್ಥೆಗಳಿಗೆ ಹಿಜಾಬ್ ಧರಿಸಿದವರಿಗೆ ಪ್ರವೇಶ ನಿರಾಕರಿಸುವುದು 29ನೇ ಪರಿಚ್ಛೇದದ ಉಲ್ಲಂಘನೆಯಾಗಿದೆ ಎಂದು ಪಾಷಾ ವಾದಿಸಿದರು.

ಹಿರಿಯ ವಕೀಲ ದೇವದತ್ ಕಾಮತ್ ಕೂಡ ಇದೇ ವಾದವನ್ನು ಪ್ರತಿಪಾದಿಸಿದರು. 'ಮುಸ್ಲಿಂ ವಿದ್ಯಾ-ರ್ಥಿನಿಯರು ಹಿಜಾಬ್ ಧರಿಸಿದರೆ ಇತರ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸುತ್ತಾರೆ ಎಂಬುದು ಕರ್ನಾಟಕ ಸರ್ಕಾರದ ವಾದ. ಕೇಸರಿ ಶಾಲು ಧರಿಸುವುದು ಧಾರ್ಮಿಕ ನಂಬಿಕೆಯಲ್ಲ. ಇದು ಕೇವಲ ಧರ್ಮವನ್ನು ಪ್ರದರ್ಶಿಸುವ ಸಂಕೇತವಾಗಿದೆ. ನೀವು ಇದನ್ನು ಧರಿಸಿದರೆ, ನಾವು ಇದನ್ನು ಧರಿಸುತ್ತೇವೆ ಎಂಬುದು ವಿತಂಡ ವಾದ' ಎಂದು ಕಾಮತ್ ಹೇಳಿದರು.

ತೃತೀಯ ಲಿಂಗಿಗಳಿಗೆ ಉದ್ಯೋಗ: ನೀತಿ ರೂಪಿಸಲು 'ಸುಪ್ರೀಂ' ನಿರ್ದೇಶನ

ನವದೆಹಲಿ (ಪಿಟಿಐ): ತೃತೀಯಲಿಂಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸೂಕ್ತ ನೀತಿ ರೂಪಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರಕ್ಕೆ ನಿರ್ದೇಶನ ನೀಡಿದೆ.

2014 ರಲ್ಲಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಗಾದ ತೃತೀಯ ಲಿಂಗಿಯೊಬ್ಬರಿಗೆ ಅಂದಿನ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ಉದ್ಯೋಗ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಮಧ್ಯಂತರ ಆದೇಶ ಹೊರಡಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಪೀಠವು, ಕೇಂದ್ರವು ರಾಷ್ಟ್ರೀಯ ಮಂಡಳಿಯೊಂದಿಗೆ ಸಮಾ ಲೋಚಿಸಿ, ಉದ್ಯೋಗ ಹುಡುಕುತ್ತಿರುವ ತೃತೀಯ ಲಿಂಗಿಗಳಿಗೆ ಅವಕಾಶ ಒದಗಿಸುವ ನಿಟ್ಟಿನಲ್ಲಿ ಸೂಕ್ತ ನೀತಿ ರೂಪಿಸಬೇಕು ಎಂದು ಅಭಿಪ್ರಾಯಪಟ್ಟಿದೆ.



ಜನಪದ ನೃತ್ಯ....

ಜೈಪುರಕ್ಕೆ ಭೇಟಿ ನೀಡಿದ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರಿಗೆ ಕಲಾ ತಂಡದವರು ಜನಪದ ನೃತ್ಯದ ಮೂಲಕ ಗುರುವಾರ ವಿಮಾನ ನಿಲ್ದಾಣದಲ್ಲಿ ಸ್ವಾಗತ ಕೋರಿದರು –ಪಿಟಿಐ ಚಿತ್ರ

ಬಿಜೆಪಿ ಮಣಿಸಲು ಒಗ್ಗಟ್ಟು: ಮಮತಾ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: 'ಮುಂಬರುವ (2024) ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಎಲ್ಲ ವಿರೋಧ ಪಕ್ಷಗಳು ಒಗ್ಗೂಡಲಿವೆ. ಈಗ ಆಟ ಶುರುವಾಗಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಗುರುವಾರ ಇಲ್ಲಿ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2023ರಲ್ಲಿ ಪಂಚಾಯಿತಿ ಚುನಾವಣೆ ಶಾಂತಿಯುತವಾಗಿ ಮುಗಿದ ನಂತರ ಬಿಜೆಪಿ ನಾಯಕತ್ವಕ್ಕೆ ರಾಜಕೀಯ ಎಂದರೆ ಏನು? ಎನ್ನುವುದು ಅರ್ಥವಾ-ಗುತ್ತದೆ ಎಂದು ಹೇಳಿದರು.

'ನಾವು ಎಲ್ಲರೂ ಒಟ್ಟಾಗಿ ಇದ್ದೇವೆ. ನಿತೀಶ್ ಕುಮಾರ್, ಅಖಿಲೇಶ್ ಯಾದವ್, ಹೇಮಂತ್ ಸೊರೇನ್ ಮತ್ತು ಉಳಿದ ಸ್ನೇಹಿತರು ಇದೇ ಮಾತು ಹೇಳಿದ್ದಾರೆ. ಎಲ್ಲ ಪಕ್ಷಗಳೂ ಒಂದಾಗಲಿವೆ. ಐದು ರಾಜ್ಯಗಳಲ್ಲೇ ಬಿಜೆಪಿ 100 ಸ್ಥಾನಗಳನ್ನು ಕಳೆದುಕೊಳ್ಳ-ಲಿದೆ. ಆದರೆ, ಬಿಜೆಪಿಯವರು 300ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಮತ್ತೆ ಸರ್ಕಾರ ರಚಿಸುತ್ತೀವಿ ಎನ್ನುತ್ತಿದ್ದಾರೆ. ಇದು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ತನ್ನ ದುರಹಂಕಾರ ಮತ್ತು ಜನರ ಕೋಪಕ್ಕೆ ತುತ್ತಾಗಿರುವ ಬಿಜೆಪಿಯ ಲೆಕ್ಕಾಚಾರ ದಿಕ್ಕುತಪ್ಪಲಿದೆ. ಜಾರ್ಖಂಡ್ ಶಾಸಕರನ್ನು ಹಣದ ಸಮೇತ ಇತ್ತೀಚೆಗೆ ನಮ್ಮ ಪೊಲೀಸರು ಬಂಧಿಸಿ, ಶಾಸಕರ ಕುದುರೆ ವ್ಯಾಪಾರ ತಪ್ಪಿಸಿದರು. ಇದರಿಂದ ಹೇಮಂತ್ ಸೊರೇನ್ ನೇತೃತ್ವದ ಸರ್ಕಾರ ಪತನ ತಡೆಯಲು ಸಾಧ್ಯವಾಯಿತು ಎಂದು ಹೇಳಿದರು.

ಹಸೀನಾ ಭೇಟಿ ವೇಳೆ ಆಹ್ವಾನಿಸದ ಕೇಂದ್ರ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರ ಭಾರತ ಭೇಟಿ ವೇಳೆ ಕೇಂದ್ರ ಸರ್ಕಾರ ತಮಗೆ ಆಹ್ವಾನ ನೀಡಿಲ್ಲವೆಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಶೇಖ್ ಹಸೀನಾ ಅವರೊಂದಿಗೆ ನಾನು ಉತ್ತಮ ಸಂಬಂಧ ಹೊಂದಿರುವೆ. ಅವರ ಭೇಟಿಯ ಭಾಗವಾಗಲು ಕೇಂದ್ರ ಸರ್ಕಾರ ನನಗೆ ಆಹ್ವಾನಿಸಲಿಲ್ಲ. ಹಸೀನಾ ಅವರನ್ನು ನಾನು ಭೇಟಿಯಾದರೆ ಕೇಂದ್ರ ಸರ್ಕಾರಕ್ಕೆ ತಳಮಳ ಏಕೆ? ಎಂದು ತೃಣಮೂಲ ಕಾಂಗ್ರೆಸ್‌ನ ವಿಶೇಷ ಅಧಿವೇಶನ ಉದ್ದೇಶಿಸಿ ಮಾತನಾಡುತ್ತಾ ಮಮತಾ ಬ್ಯಾನರ್ಜಿ ಪ್ರಶ್ನಿಸಿದರು.

ಮಮತಾ ಟೀಕೆ ಅಲ್ಲಗಳೆದ ಅಧಿಕಾರಿಗಳು: ಮತ್ತೊಂದು ದೇಶದ ಮುಖ್ಯಸ್ಥರ ಭೇಟಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳನ್ನು ಕೇಂದ್ರ ಸರ್ಕಾರ ಆಹ್ವಾನಿಸುವುದಿಲ್ಲ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಶೇಖ್ ಹಸೀನಾ ಅವರ ಪ್ರವಾಸದ ಭಾಗವಾಗಲು ಆಹ್ವಾನ ನೀಡದಿರುವು-ದಕ್ಕೆ ಮಮತಾ ಅವರ ಟೀಕೆಗಳನ್ನು ಅಧಿಕಾರಿಗಳು ತಳ್ಳಿಹಾಕಿದ್ದಾರೆ.

'2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬಾಂಗ್ಲಾದೇಶ ಪ್ರವಾಸಕ್ಕೆ ಆಹ್ವಾನಿಸಿದ್ದರು. ಏಕೆಂದರೆ, ಅಲ್ಲಿ ಎರಡೂ ದೇಶಗಳ ನಡುವೆ ಬಸ್ ಸೇವೆಗೆ ಚಾಲನೆ ನೀಡಬೇಕಿತ್ತು' ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

ಕ್ಯೂಆರ್‌ಎಸ್‌ಎಎಂ ಕ್ಷಿಪಣಿ ವ್ಯವಸ್ಥೆ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಬಾಲೇಶ್ವರ, ಒಡಿಶಾ (ಪಿಟಿಐ): ನೆಲದಿಂದ ಆಗಸಕ್ಕೆ ಕ್ಷಿಪ್ರವಾಗಿ ಚಿಮ್ಮಿ ಗುರಿಯನ್ನು ನಾಶ ಮಾಡಬಲ್ಲ ಕ್ಷಿಪಣಿ ವ್ಯವಸ್ಥೆಯ (ಕ್ಯೂಆರ್‌ಎಸ್‌ಎಎಂ) ಪರೀಕ್ಷಾರ್ಥ ಪ್ರಯೋಗ ಸಮೀಪದ ಚಾಂದಿಪುರ ಸಮೀಪವಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಗುರುವಾರ ಯಶಸ್ವಿಯಾಯಿತು.

ಒಟ್ಟು ಆರು ಪರೀಕ್ಷೆಗಳನ್ನು ನೆರ-ವೇರಿಸಲಾಗಿದೆ. ವಾಯುಪ್ರದೇಶದ ಮೂಲಕ ಎದುರಾಗಬಹುದಾದ ವಿವಿಧ ಸ್ವರೂಪದ ಅಪಾಯಕಾರಿ ಗುರಿಗಳನ್ನು ಕರಾವಾರುಕ್ಕಾಗಿ ಹೊಡೆದುರುಳಿಸುವ ಈ ಕ್ಷಿಪಣಿ ವ್ಯವಸ್ಥೆಯ ಸಾಮರ್ಥ್ಯವ-ನ್ನು ಮೌಲ್ಯಮಾಪನ ಮಾಡಲಾಯಿತು ಎಂದು ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ತಿಳಿಸಿದೆ.



ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನೆರವೇರಿತು –ಪಿಟಿಐ ಚಿತ್ರ

'ಈ ಪರೀಕ್ಷೆ ವೇಳೆ, ಕ್ಷಿಪಣಿ ವ್ಯವಸ್ಥೆಯು ಎಲ್ಲ ನಿರ್ದೇಶಿತ ಗುರಿಗಳನ್ನು ನಿಖರವಾಗಿ ತಲುಪಿತು ಈ ಕ್ಷಿಪಣಿ ವ್ಯವಸ್ಥೆಯ ಕಾರ್ಯಸಾಧನೆಯನ್ನು ಟೆಲಿಮೆಟ್ರಿ, ರಾಡಾರ್ ಹಾಗೂ ಎಲೆಕ್ಟ್ರೊ ಆಪ್ಟಿಕಲ್ ಟ್ರ್ಯಾಕಿಂಗ್ ಸಿಸ್ಟಮ್‌ನಂತಹ ವಿವಿಧ ಸಾಧನ/ತಂತ್ರಾಂಶಗಳನ್ನು ಬಳಸಿ ಖಚಿತಪಡಿಸಿಕೊಳ್ಳಲಾಯಿತು' ಎಂದು ಡಿಆರ್‌ಡಿಒ ತಿಳಿಸಿದೆ.

'ಈ ಕ್ಷಿಪಣಿ ವ್ಯವಸ್ಥೆಯು ಈಗ ಸೇನೆಗೆ ಸೇರ್ಪಡೆ ಮಾಡಲು ಸಿದ್ಧವಾಗಿದೆ' ಎಂದೂ ಸಂಸ್ಥೆ ತಿಳಿಸಿದೆ.

'ಎಂ–777' ಹೊವಿಟ್ಜರ್‌ಗಳ ನಿಯೋಜನೆ

ನಾಮ್‌ಸಾಯಿ, ಅರುಣಾಚಲಪ್ರ-ದೇಶ (ಪಿಟಿಐ): ರಾಜ್ಯಕ್ಕೆ ಹೊಂದಿಕೊಂಡಿರುವ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿಯ ಪರ್ವತ-ಪ್ರದೇಶಗಳಲ್ಲಿರುವ ಗಡಿಠಾಣೆಗಳಲ್ಲಿ ಗಮನಾರ್ಹ ಸಂಖ್ಯೆಯ 'ಎಂ–777' ಹೊವಿಟ್ಜರ್‌ಗಳನ್ನು ನಿಯೋಜಿಸಲಾಗಿದೆ ಎಂದು ಸೇನಾಧಿಕಾರಿಗಳು ಗುರುವಾರ ಹೇಳಿದ್ದಾರೆ.

'ಈ ಹೊವಿಟ್ಜರ್‌ಗಳ ತೂಕ ಬಹಳ ಕಡಿಮೆ ಇದ್ದು, ಅವುಗಳನ್ನು ಸುಲಭವಾಗಿ ಸಾಗಿಸಬಹುದು. ಚಿನೂಕ್ ಹೆಲಿಕಾಪ್ಟರ್‌ಗಳನ್ನು ಬಳಸಿ 'ಎಂ–777' ಹೊವಿಟ್ಜರ್‌ಗಳನ್ನು ಕ್ಷಿಪ್ರವಾಗಿ ಸಾಗಿಸಬ-ಹುದಾಗಿದೆ' ಎಂದಿದ್ದಾರೆ.

ಭಾರವಾದ ಶಸ್ತ್ರಾಸ್ತ್ರಗಳನ್ನು ಪರ್ವತ ಪ್ರದೇಶಗಳಲ್ಲಿನ ಗಡಿಠಾಣೆಗಳಿಗೆ ಸಾಗಿಸುವುದು ಸವಾಲಿನ ಕೆಲಸವೇ ಆಗಿತ್ತು. ಈಗ ಹೊವಿಟ್ಜರ್‌ಗಳ ನಿಯೋಜನೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಂಡಂತಾಗಿದೆ ಎಂದೂ ಹೇಳಿದ್ದಾರೆ.

ಉದ್ಧವ್ ಅವಧಿಯಲ್ಲಿ ನಡೆದ ಕಾರ್ಯ: ಬಿಜೆಪಿ ಆರೋಪ

ಯಾಕೂಬ್ ಮೆಮನ್ ಸಮಾಧಿ ಸೌಂದರೀಕರಣ: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಂಬೈ: ಉಗ್ರ ಯಾಕೂಬ್ ಮೆಮನ್‌ನ ಸಮಾಧಿ ಸ್ಥಳವನ್ನು ಸುಂದರಗೊಳಿಸಲಾಗಿದ್ದು, ಅದನ್ನು ಸ್ಮಾರಕ-ವನ್ನಾಗಿ ಪರಿವರ್ತಿಸುವ ಪ್ರಯತ್ನವೂ ನಡೆದಿದೆ ಎಂದು ಆಡಳಿತಾರೂಢ ಬಿಜೆಪಿ ಆರೋಪಿಸಿದೆ.

ಉದ್ಧವ್ ಠಾಕ್ರೆ ಮುಖ್ಯಮಂತ್ರಿ-ಯಾಗಿದ್ದ ಅವಧಿಯಲ್ಲಿ ಈ ಕಾರ್ಯ ನಡೆದಿದೆ ಎಂದು ಬಿಜೆಪಿ ಮುಖಂಡರು ಹೇಳಿರುವುದು ರಾಜಕೀಯ ನಾಯಕರ ನಡುವಣ ವಾಕ್ಸಮರಕ್ಕೆ ಕಾರಣವಾಗಿದೆ.

ಗೃಹಸಚಿವರೂ ಆಗಿರುವ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತನಿಖೆ ನಡೆಸುವಂತೆ ಗುರುವಾರ ಆದೇಶಿಸಿದ್ದಾರೆ. ಬಿಜೆಪಿ ಆರೋಪದ ಬೆನ್ನಲ್ಲೇ ಮುಂಬೈ ಪೊಲೀಸರು ಯಾಕೂಬ್ ಸಮಾಧಿ ಸ್ಥಳದ ಸುತ್ತ ಅಳವಡಿಸಲಾಗಿದ್ದ ಎಲ್‌ಇಡಿ ದೀಪಗಳನ್ನು ತೆರವುಗೊಳಿಸಿದ್ದಾರೆ.

'ಮಹಾ ವಿಕಾಸ ಅಘಾಡಿ ಸರ್ಕಾರದ ಅವಧಿಯಲ್ಲಿ ಉಗ್ರನ ಸಮಾಧಿಯನ್ನು ಸ್ಮಾರಕವನ್ನಾಗಿ ಪರಿವರ್ತಿಸುವ ಪ್ರಯತ್ನ ನಡೆದಿದೆ. ಈ ವಿಚಾರ ಆಡಳಿತದ-ಲ್ಲಿದ್ದ ಸರ್ಕಾರದ ಗಮನಕ್ಕೆ ಬಾರದೆ ಇರುವುದು ವಿಪರ್ಯಾಸ. ಈ ಕುರಿತು ಹಿಂದಿನ ಸರ್ಕಾರ ವಿವರಣೆ ನೀಡಬೇಕು' ಎಂದು ಬಿಜೆಪಿ ಆಗ್ರಹಿಸಿದೆ.

'ರಾಜ್ಯ ಗುಪ್ತಚರ ಇಲಾಖೆ, ಮುಂಬೈ ಪೊಲೀಸ್ ಅಥವಾ ಇತರೆ ಯಾರಿಂದಲಾದರೂ ಲೋಪ ಆಗಿದೆಯೇ ಎಂಬುದರ ಕುರಿತು ತನಿಖೆ ನಡೆಸುವಂತೆ ಗೃಹ ಸಚಿವರು ಆದೇಶಿಸಿದ್ದಾರೆ' ಎಂದು ಸಂಸ್ಕೃತಿ ಸಚಿವ ಸುಧೀರ್ ಮುಂಗಟಿವಾರ್ ಹೇಳಿದ್ದಾರೆ.

'ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಉಗ್ರರಾದ ಅಫ್ಜಲ್ ಗುರು ಹಾಗೂ ಅಜ್ಮಲ್ ಕಸಬ್‌ರನ್ನು ಗಲ್ಲಿಗೇರಿಸಲಾಗಿತ್ತು. ಇಬ್ಬರ ಮೃತ-ದೇಹಗಳನ್ನೂ ರಹಸ್ಯ ಸ್ಥಳಗಳಲ್ಲಿ ಹೂಳಲಾಗಿತ್ತು' ಎಂದು ಮಹಾರಾಷ್ಟ್ರ ಕಾಂಗ್ರೆಸ್‌ನ ವಕ್ತಾರ ಅತುಲ್ ಲೋಂಢೆ ತಿಳಿಸಿದ್ದಾರೆ.

1993ರಲ್ಲಿ ಮುಂಬೈನಲ್ಲಿ ಸರಣಿ ಬಾಂಬ್ ಸ್ಫೋಟ ನಡೆಸಲಾಗಿತ್ತು. ಇದರ ಸಂಚುಕೋರ ಯಾಕೂಬ್‌ನನ್ನು 2015ರಲ್ಲಿ ನಾಗ್ಪುರ ಕೇಂದ್ರ ಕಾರಾ ಗೃಹದಲ್ಲಿ ಗಲ್ಲಿಗೇರಿಸಲಾಗಿತ್ತು. ಮೃತ ದೇಹವನ್ನು ದಕ್ಷಿಣ ಮುಂಬೈನಲ್ಲಿರುವ ಬಡಾ ಖಬರಸ್ತಾನ್‌ನಲ್ಲಿ ಹೂಳಲಾಗಿತ್ತು. ಅಲ್ಲಿ ಈಗ ಮಾರ್ಬಲ್‌ಗಳನ್ನು ಅಳವಡಿ-ಸುತ್ತಿರುವುದಾಗಿಯೂ ಬಿಜೆಪಿ ದೂರಿದೆ.

> **ಉದ್ಧವ್ ಅವಧಿಯಲ್ಲೇ ಸಮಾಧಿಯನ್ನು ಸ್ಮಾರಕವನ್ನಾಗಿ ಪರಿವರ್ತಿಸುವ ಪ್ರಯತ್ನ ನಡೆದಿದೆ. ಇದು ಅವರ ದೇಶಭಕ್ತಿಯೇ? ಮುಂಬೈ ಬಗೆಗೆ ಹೊಂದಿರುವ ಒಲವು ಇದೇನಾ?**
> **ರಾಮ್ ಕದಂ,** ಬಿಜೆಪಿ ವಕ್ತಾರ

> **ಯಾಕೂಬ್‌ನನ್ನು ಗಲ್ಲಿಗೇರಿಸಿದ್ದಾಗ ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳಿದ್ದವು. ಫಡಣವೀಸ್ ಮುಖ್ಯಮಂತ್ರಿಯಾಗಿದ್ದರು.**
> **ಮನೀಷ್ ಖಯಂದೆ,** ಶಿವಸೇನಾ ವಕ್ತಾರ

'ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿ ಭಾರತ: ಸಾಮಾನ್ಯ ಸಾಧನೆಯಲ್ಲ'

ಸೂರತ್ (ಪಿಟಿಐ): 'ಭಾರತವು ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿರುವುದು ಸಾಮಾನ್ಯ ಸಾಧನೆಯಲ್ಲ. ಪ್ರತಿಯೊಬ್ಬ ಭಾರತೀಯನೂ ಇದರಿಂದ ಹೆಮ್ಮೆ ಪಡುವಂತಾಗಿದೆ. ಈ ಉತ್ಸುಕತೆಯನ್ನು ನಾವು ಕಾಪಾಡಿಕೊಂಡು ಸಾಗಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತ್‌ನ ಸೂರತ್ ನಗರದ ಒಲಪಾಡ್ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿದ್ದ ವೈದ್ಯಕೀಯ ಶಿಬಿರವನ್ನು ಉದ್ದೇಶಿಸಿ ಗುರುವಾರ ಆನ್‌ಲೈನ್ ಮೂಲಕ ಅವರು ಮಾತನಾಡಿದರು. ಇದೇ ವೇಳೆ ವಿವಿಧ ಯೋಜನೆಗಳ ಫಲಾನುಭವಿಗಳ ಜೊತೆ ಸಂವಾದ ನಡೆಸಿದರು.

'ನೈಸರ್ಗಿಕ ಕೃಷಿಗೆ ಎಲ್ಲರೂ ಒತ್ತು ನೀಡಬೇಕು. ಕಡಿಮೆ ಖರ್ಚಿನಲ್ಲಿ ಉತ್ತಮ ಫಸಲು ತೆಗೆಯಲು ಇದು ಸಹಕಾರಿ' ಎಂದು ರೈತರಿಗೆ ಕಿವಿಮಾತು ಹೇಳಿದರು.

3 ಉಗ್ರರ ಬಂಧನ

ಚಂಡೀಗಡ: ಉಗ್ರರ ಜಾಲ ಭೇದಿಸಲಾಗಿದ್ದು, ಕುರುಕ್ಷೇತ್ರದ ಸುಧಾರಿತ ಸ್ಫೋಟಕ ಸಾಧನ(ಐಇಡಿ) ಪ್ರಕರಣದ ಪ್ರಮುಖ ಆರೋಪಿ ಸೇರಿದಂತೆ ಮೂವರನ್ನು ಬಂಧಿಸಿರುವುದಾಗಿ ಪಂಜಾಬ್ ಪೊಲೀಸರು ಹೇಳಿದ್ದಾರೆ.

ಬಂಧಿತರಿಂದ 1.5 ಕೆ.ಜಿ ಯಷ್ಟು ಆರ್‌ಡಿಎಕ್ಸ್ ಇದ್ದ ಸುಧಾರಿತ ಸ್ಫೋಟಕ ಸಾಧನ(ಐಇಡಿ), ಎರಡು ಪಿಸ್ತೂಲ್, 8 ಜೀವಂತ ಕಾಂಟ್ರಿಡ್ಜ್ ಮತ್ತು ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ವಿರಳ ಕಾಯಿಲೆ: ಸಚಿವರಿಗೆ ಪತ್ರ

ಬೆಂಗಳೂರು: ವಿರಳ ಕಾಯಿಲೆಯಿಂದ ಬಳಲುತ್ತಿರುವವರ ಚಿಕಿತ್ಸೆಗೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಸಚಿವಾಲಯದ ನಿರ್ದೇಶನವಿದ್ದರೂ, ದೇಶದ ಎಂಟೂ ಉತ್ಕೃಷ್ಟತಾ ಕೇಂದ್ರಗಳು (ಸಿಒಇಎಸ್) ಈ ಸಂಬಂಧ ಅನುದಾನ ಕೋರಿ ಪ್ರಸ್ತಾವ ಸಲ್ಲಿಸಿಲ್ಲ ಎಂದು ರೇರ್ ಡಿಸೀಸಸ್ ಇಂಡಿಯಾ ಫೌಂಡೇಷನ್ (ಆರ್‌ಡಿಐಎಫ್) ಹೇಳಿದೆ. ಈ ಸಂಬಂಧ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಪತ್ರ ಬರೆದಿದೆ.

'ಎಲ್ಲಾ ಸ್ವರೂಪದ ವಿರಳ ಮತ್ತು ಅತಿವಿರಳ ಕಾಯಿಲೆಯಿಂದ ಬಳಲು-ತ್ತಿರುವವರ ಚಿಕಿತ್ಸೆಗೆ ಗರಿಷ್ಠ ₹50 ಲಕ್ಷದವರೆಗೆ ನೆರವು ನೀಡಲು ಆರೋಗ್ಯ ಸಚಿವಾಲಯವು ಮಾರ್ಗಸೂಚಿಯ-ನ್ನು ರೂಪಿಸಿದೆ. ಈ ಮಾರ್ಗಸೂಚಿ ಜಾರಿಗೆ ಬಂದು ನಾಲ್ಕು ತಿಂಗಳಾಗಿವೆ. ಆದರೆ, ಈ ಸ್ವರೂಪದ ಚಿಕಿತ್ಸೆಗೆ ಅಗತ್ಯವಿರುವ ಅನುದಾನವೆಷ್ಟು ಎಂಬುದನ್ನು ಅಂದಾಜಿಸುವ ಕಾರ್ಯವನ್ನೂ ಸಿಒಇಎಸ್‌ಗಳು ಆರಂಭಿಸಿಲ್ಲ' ಎಂದು ಪತ್ರದಲ್ಲಿ ವಿವರಿಸಲಾಗಿದೆ.

'ಚಿಕಿತ್ಸೆಗೆ ವಿಪರೀತದ ಹಣ ಅಗತ್ಯವಿರುವ ಕಾರಣ, ರೋಗಿಗಳು ಸರ್ಕಾರದ ಅನುದಾನಕ್ಕೆ ಕಾಯದೆ ಬೇರೆ ವಿಧಿ ಇಲ್ಲ. ಆರ್ಥಿಕ ನೆರವು ಲಭ್ಯವಾಗದೇ ಇರುವ ಕಾರಣ ಹಲವು ರೋಗಿಗಳು ಈಗಾಗಲೇ ಮೃತಪಟ್ಟಿದ್ದಾರೆ. ಈಚೆಗಷ್ಟೇ ತಮಿಳು-ನಾಡಿನಲ್ಲಿ 8 ವರ್ಷದ ಮಗು ಚಿಕಿತ್ಸೆ ಸಿಗದೆ ಮೃತಪಟ್ಟಿದೆ. ಹೀಗಾಗಿ ತಾವು ಇತ್ತ ತಕ್ಷಣವೇ ಗಮನಹರಿಸಬೇಕು' ಎಂದು ಪತ್ರದಲ್ಲಿ ಕೋರಲಾಗಿದೆ.

ಶ್ರೀಲಂಕಾ: 17 ಸಚಿವರ ಪ್ರಮಾಣ ವಚನ

ಕೊಲಂಬೊ (ಪಿಟಿಐ) : ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಶ್ರೀಲಂಕಾದಲ್ಲಿ ಸ್ಥಿರ ಸರ್ಕಾರ ನೀಡುವ ನಿಟ್ಟಿನಲ್ಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದಾರೆ.

ಮಾಜಿ ಅಧ್ಯಕ್ಷರಾದ ಗೊಟಬಯ ರಾಜಪಕ್ಸ ಸಂಬಂಧಿ ಸೇರಿದಂತೆ 17 ಮಂದಿಯನ್ನು ರಾಜ್ಯ ಸಚಿವರಾಗಿ ನೇಮಕ ಮಾಡಲಾಗಿದೆ.



ಸುಭಾಷಿತ

ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತ ನಾಶಪಡಿಸು.

-ಸ್ವಾಮಿ ವಿವೇಕಾನಂದ

ಅಪಘಾತದಲ್ಲಿ ಮಿಸ್ತ್ರಿ ದುರ್ಮರಣ ಕಲಿಯಬೇಕಾದ ಪಾಠ ಏನು?

ದೇಶದ ಅತಿದೊಡ್ಡ ಉದ್ಯಮ ಸಮೂಹಗಳಲ್ಲಿ ಒಂದಾಗಿರುವ 'ಟಾಟಾ ಸನ್ಸ್'ನ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅವರ ದುರ್ಮರಣವು ದೇಶದಲ್ಲಿ ಕಾರು ಪ್ರಯಾಣಿಕರ ಸುರಕ್ಷತೆಯ ವಿಚಾರವಾಗಿ ನಿಯಮಗಳು ಸರಿಯಾಗಿ ಇಲ್ಲದಿರುವುದರತ್ತ ಗಮನವನ್ನು ಮತ್ತೆ ಸೆಳೆದಿದೆ. ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮಿಸ್ತ್ರಿ ಮತ್ತು ಅವರ ಸ್ನೇಹಿತ ಜಹಾಂಗೀರ್ ಪಾಂಡೋಲೆ ಅವರು ಮೃತಪಟ್ಟಿದ್ದಾರೆ. ಮಿಸ್ತ್ರಿ ಹಾಗೂ ಪಾಂಡೋಲೆ ಅವರು ಐಷಾರಾಮಿ ಕಾರೊಂದರ ಹಿಂಬದಿಯ ಆಸನದಲ್ಲಿ ಕುಳಿತಿದ್ದರು. ಸೀಟ್ ಬೆಲ್ಟ್ ಧರಿಸದೇ ಪ್ರಯಾಣ ಮಾಡುತ್ತಿದ್ದ ಸಂದರ್ಭದಲ್ಲಿ ಅಪಘಾತ ಸಂಭವಿಸಿದೆ. ಕಾರು ಚಲಾಯಿಸುತ್ತಿದ್ದ ಅನಾಹಿತಾ ಪಾಂಡೋಲೆ ಮತ್ತು ಚಾಲಕರ ಪಕ್ಕದ ಆಸನದಲ್ಲಿದ್ದವರು ಸೀಟ್ ಬೆಲ್ಟ್ ಧರಿಸಿದ್ದರು. ಬದುಕುಳಿದಿರುವ ಅವರಿಬ್ಬರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವರದಿಗಳು ಹೇಳಿವೆ. ರಸ್ತೆ ಅಪಘಾತಗಳು ಸಂಭವಿಸಿದಾಗ ಸೀಟ್ ಬೆಲ್ಟ್ ಧರಿಸುವುದರ ಅಗತ್ಯದ ಕುರಿತು ಚರ್ಚೆಯಾಗುತ್ತದೆ. ನಂತರ ಅದನ್ನು ಮರೆತುಬಿಡಲಾಗುತ್ತದೆ. ಸೀಟ್ ಬೆಲ್ಟ್ ಧರಿಸುವುದನ್ನು ಬಹಳಷ್ಟು ಜನ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿ ಪ್ರಕಾರ, ಅಪಘಾತದ ಸಂದರ್ಭದಲ್ಲಿ ಮಿಸ್ತ್ರಿ ಅವರ ತಲೆಗೆ ಗಂಭೀರ ಪೆಟ್ಟಾಗಿತ್ತು. ಮಿಸ್ತ್ರಿ ಹಾಗೂ ಅವರ ಸ್ನೇಹಿತ ಸೀಟ್ ಬೆಲ್ಟ್ ಧರಿಸಿದ್ದರೆ ಜೀವ ಉಳಿಯುತ್ತಿತ್ತು ಎಂಬ ವಾದ ಇದೆ.



ಸೀಟ್ ಬೆಲ್ಟ್ ಹಾಗೂ ಏರ್ ಬ್ಯಾಗ್‌ಗಳು ಪ್ರಯಾಣಿಕ ವಾಹನಗಳಲ್ಲಿ ತೀರಾ ಅಗತ್ಯ. ಇವು ಪ್ರಯಾಣಿಕರನ್ನು ರಕ್ಷಿಸುವ ಕೆಲಸ ಮಾಡುತ್ತವೆ

ಮೋಟಾರು ವಾಹನಗಳ ಕಾಯ್ದೆಯ ಅಡಿಯಲ್ಲಿ, ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ. ಆದರೆ, ಈ ನಿಯಮವನ್ನು ಉಲ್ಲಂಘಿಸುವುದು ಬಹಳ ಸಹಜ ಎಂಬಂತಾಗಿದೆ. ಪ್ರಯಾಣಿಕ ವಾಹನಗಳ ಹಿಂಬದಿಯ ಆಸನಗಳಲ್ಲಿ ಕುಳಿತುಕೊಳ್ಳುವವರ ಪೈಕಿ ಶೇಕಡ 7ರಷ್ಟು ಮಂದಿ ಮಾತ್ರ ಸೀಟ್ ಬೆಲ್ಟ್ ಧರಿಸುತ್ತಾರೆ, ಶೇ 27ರಷ್ಟು ಜನರಿಗೆ ಮಾತ್ರ ಸೀಟ್ ಬೆಲ್ಟ್ ಕಡ್ಡಾಯ ಎಂಬ ನಿಯಮದ ಅರಿವಿದೆ ಎಂಬುದನ್ನು ಸಮೀಕ್ಷೆಯೊಂದು ತೋರಿಸಿಕೊಟ್ಟಿದೆ. ಮುಂದಿನ ಸಾಲಿನ ಆಸನಗಳಲ್ಲಿ ಕುಳಿತಿರುವವರು ಸೀಟ್ ಬೆಲ್ಟ್ ಧರಿಸದಿದ್ದರೆ, ಎಚ್ಚರಿಕೆಯ ಸಂದೇಶ ನೀಡುವ ವ್ಯವಸ್ಥೆಯು ಹಲವು ವಾಹನಗಳಲ್ಲಿ ಇದೆ. ಇದರಿಂದಾಗಿ ಆ ಆಸನಗಳಲ್ಲಿ ಕುಳಿತವರು ಸೀಟ್ ಬೆಲ್ಟ್ ಧರಿಸುವ ಮನಸ್ಸು ಮಾಡಬಹುದು. ಸೀಟ್ ಬೆಲ್ಟ್ ಹಾಗೂ ಏರ್ ಬ್ಯಾಗ್‌ಗಳು ಪ್ರಯಾಣಿಕ ವಾಹನಗಳಲ್ಲಿ ತೀರಾ ಅಗತ್ಯವಾದವು. ಇವೆರಡೂ ಒಟ್ಟಾಗಿ ಪ್ರಯಾಣಿಕರನ್ನು ರಕ್ಷಿಸುವ ಕೆಲಸ ಮಾಡುತ್ತವೆ. ವಾಹನವು ಅಪಘಾತಕ್ಕೆ ಈಡಾದ ಸಂದರ್ಭದಲ್ಲಿ ಪ್ರಯಾಣಿಕರು ಆಸನದಿಂದ ಎಗರಿ ಬೀಳುವುದನ್ನು ಸೀಟ್ ಬೆಲ್ಟ್ ತಡೆಯುತ್ತದೆ. ಪ್ರಯಾಣಿಕರ ದೇಹವು ಕಾರಿನೊಳಗಿನ ಗಟ್ಟಿ ವಸ್ತುಗಳಿಗೆ ಬಡಿಯುವುದರಿಂದ ಏರ್ ಬ್ಯಾಗ್ ರಕ್ಷಣೆ ನೀಡುತ್ತದೆ. ಹಿಂದಿನ ಆಸನಗಳಲ್ಲಿ ಸೀಟ್ ಬೆಲ್ಟ್ ಧರಿಸದೆ ಕುಳಿತಿರುವವರು, ವಾಹನವು ಎದುರಿನ ಇತರ ವಸ್ತುವಿಗೆ ಗುದ್ದಿದಾಗ ಮುಂದಿನ ಆಸನಕ್ಕೆ ಡಿಕ್ಕಿ ಹೊಡೆಯುತ್ತಾರೆ. ಮಿಸ್ತ್ರಿ ಅವರ ಪ್ರಕರಣದಲ್ಲಿಯೂ ಈ ರೀತಿ ಆಗಿರಬಹುದು.

ಕಾರುಗಳಲ್ಲಿ ಆರು ಏರ್‌ಬ್ಯಾಗ್ ಇರುವುದನ್ನು ಕಡ್ಡಾಯ ಮಾಡಬಾರದು ಎಂದು ಕೆಲವು ವಾಹನ ತಯಾರಿಕಾ ಕಂಪನಿಗಳು ಹೇಳಿದ್ದವು. ಇದನ್ನು ಕಡ್ಡಾಯ ಮಾಡಿದರೆ ವಾಹನ ತಯಾರಿಕಾ ವೆಚ್ಚ ಹೆಚ್ಚಾಗುತ್ತದೆ, ಆಗ ಮಾರಾಟವಾಗುವ ಕಾರುಗಳಿಗೆ ಬೇಡಿಕೆ ಕಡಿಮೆಯಾಗಬಹುದು ಎಂಬುದು ಅವುಗಳ ಆತಂಕವಾಗಿರಬಹುದು. ಆದರೆ, ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ನೋಡಿದಾಗ, ಆರು ಏರ್ ಬ್ಯಾಗ್‌ಗಳು ಇರುವುದು ಉತ್ತಮ ಎಂಬುದರಲ್ಲಿ ಎರಡನೆಯ ಮಾತು ಇರುವುದಿಲ್ಲ. ಪ್ರಯಾಣಿಕ ವಾಹನಗಳಲ್ಲಿ ಟೈರು, ಆಸನಗಳು ಇರುವುದು ಎಷ್ಟು ಮುಖ್ಯವೋ ಸುರಕ್ಷತೆಗೆ ಅಗತ್ಯವಿರುವ ಸೌಲಭ್ಯಗಳು ಇರುವುದೂ ಅಷ್ಟೇ ಮುಖ್ಯ. ಸುರಕ್ಷತೆಗೆ ಅಗತ್ಯವಿರುವ ಕ್ರಮಗಳನ್ನು ಕಾನೂನಿನ ಮೂಲಕ ಜಾರಿಗೆ ತರಬೇಕು. ದೇಶದಲ್ಲಿ ಈಗಾಗಲೇ ಇರುವ ರಸ್ತೆ ಸುರಕ್ಷತಾ ನಿಯಮಗಳ ಜಾರಿಯು ತೃಪ್ತಿಕರ ಪ್ರಮಾಣದಲ್ಲಿ ಇಲ್ಲ. ರಸ್ತೆ ಅಪಘಾತಗಳಲ್ಲಿ ಜನ ಜೀವ ಕಳೆದುಕೊಳ್ಳುವುದಕ್ಕೆ ಇದೂ ಒಂದು ಕಾರಣ. ರಸ್ತೆ ಅಪಘಾತಗಳ ಸಂಖ್ಯೆ ಹಾಗೂ ಸಾವಿನ ಪ್ರಮಾಣವು ಭಾರತದಲ್ಲಿಯೇ ಅತಿಹೆಚ್ಚು. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಮಾಹಿತಿ ಪ್ರಕಾರ, 2021ರಲ್ಲಿ ರಸ್ತೆ ಅಪಘಾತಗಳಲ್ಲಿ 1.50 ಲಕ್ಷಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. 2014ರ ನಂತರದಲ್ಲಿ ರಸ್ತೆ ಅಪಘಾತಗಳಲ್ಲಿ ಇಷ್ಟೊಂದು ಜನ ಸಾವನ್ನಪ್ಪಿರುವುದು 2021ರಲ್ಲಿಯೇ. ಸಂಚಾರ ನಿಯಮಗಳ ಪಾಲನೆ ಕಡಿಮೆ ಪ್ರಮಾಣದಲ್ಲಿರುವುದು, ನಿಯಮಗಳ ಅನುಷ್ಠಾನ ತೃಪ್ತಿಕರ ಆಗಿಲ್ಲದಿರುವುದು ಮಾತ್ರವಲ್ಲದೆ ರಸ್ತೆ ಅಪಘಾತಗಳಿಗೆ ಇನ್ನೂ ಹಲವು ಕಾರಣಗಳಿವೆ. ರಸ್ತೆಗಳ ವಿನ್ಯಾಸ ವೈಜ್ಞಾನಿಕವಾಗಿ ಇಲ್ಲದಿರುವುದು, ನಿರ್ವಹಣೆ ಸರಿಯಾಗಿಲ್ಲದಿರುವುದು, ಅತಿಯಾದ ವೇಗದಲ್ಲಿ ವಾಹನ ಚಾಲನೆ ಮಾಡುವುದು ಮತ್ತು ವಾಹನಗಳ ಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಆಗದಿರುವುದು ಕೂಡ ಅಪಘಾತಗಳಿಗೆ ಕಾರಣ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕು. ವಾಹನಗಳಲ್ಲಿ ಸುರಕ್ಷತಾ ಕ್ರಮಗಳ ಅಳವಡಿಕೆ ಹೆಚ್ಚಿನ ಆದ್ಯತೆ ಪಡೆದುಕೊಳ್ಳಬೇಕು.

ಅಭಿವೃದ್ಧಿ ಎನ್ನುವುದು ವಾಸ್ತವದಲ್ಲಿ ಪಕ್ಕಾ ಆರ್ಥಿಕ ವ್ಯವಹಾರ, ಪರ್ಸೆಂಟೇಜುಗಳ ಲೆಕ್ಕಾಚಾರ

ಅನುದಾನ ಅಭಿವೃದ್ಧಿಯ ಅಳತೆಗೋಲಲ್ಲ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಈ ಬಾರಿಯ ಸುರಿಯುತ್ತಿರುವ ಮಳೆ, ಹರಿಯುತ್ತಿರುವ ಹೊಳೆಹಳ್ಳಗಳು, ತುಳುಕುತ್ತಿರುವ ಕೆರೆಕಟ್ಟೆಗಳು ಎಂದಿನಂತೆ ಸಂತಸ-ಸಮೃದ್ಧಿಯ ಸಂಕೇತಗಳಾಗಿ ಉಳಿದಿಲ್ಲ. ನೆಲನೆಚ್ಚಿ ಬದುಕುವ ರೈತಾಪಿ ಜನರ ಬದುಕನ್ನು ಅತಂತ್ರದಲ್ಲಿ ತೇಲಿಸುತ್ತಿವೆ. ನಗರಗಳ ಬದುಕು ಕೂಡ ಬಚಾವಾಗಿಲ್ಲ. ಬೆಂಗಳೂರಿನ ಕೆಲವು ಪ್ರದೇಶಗಳ ಜನಜೀವನ ಪೂರ್ತಿ ಅಸ್ತವ್ಯಸ್ತವಾಗಿದೆ. ಶ್ರೀಮಂತರು ಹೆಚ್ಚಿಗೆ ವಾಸಿಸುವ ಐಷಾರಾಮಿ ಬಡಾವಣೆಗಳ ಬಂಗಲೆಗಳೂ ಬಯಲಲ್ಲಿ ಹರಡಿಕೊಂಡ ಬಡವರ ಗುಡಿಸಲುಗಳೂ ಅನಾಹುತದಲ್ಲಿ ಸಮಾನತೆ ಕಂಡುಕೊಂಡಿವೆ.

ಜೀವ ಮತ್ತು ಜೀವನವನ್ನು ಅಂಗೈಯಲ್ಲಿ ಹಿಡಿದುಕೊಂಡು ಒದ್ದಾಡುತ್ತಿರುವ ಸಂತ್ರಸ್ತ ಜನಸಮುದಾಯ ಒಂದೆಡೆಯಾದರೆ, ಸಾವು, ನೋವು, ಸಂಕಟ... ಸಕಲವನ್ನೂ ಚಮತ್ಕಾರದ ತೋರ್ಪಡಿಕೆಗೆ ಸಾಮಗ್ರಿಯಾಗಿಸಿಕೊಳ್ಳುವ ಟ್ರೋಲಿಗರ ಪಡೆ ಇನ್ನೊಂದೆಡೆ. ತಮಾಷೆಯ ಲೇಪನದೊಂದಿಗೆ ಎದುರಿಗಿರುವ ಕಟುವಾಸ್ತವ, ವ್ಯವಸ್ಥೆಯ ಲೋಪಗಳನ್ನು ಕಾಣಿಸುವ ಪ್ರಯತ್ನಗಳೂ ಮತ್ತೊಂದೆಡೆ ನಡೆಯುತ್ತಿವೆ. ಇವುಗಳ ಜೊತೆಗೆ ರಾಜಕೀಯ 'ಪಕ್ಷ'ಪಾತಿಗಳ ಕಣ್ಣಿಗೆ ಅವರವರ ಆಯ್ಕೆಯ ಬಣ್ಣದ ಕನ್ನಡಕ, ತಮ್ಮ ತಮ್ಮ ಮೂಗಿನ ನೇರಕ್ಕೇ ವಿದ್ಯಮಾನಗಳ ಗ್ರಹಿಕೆ.

ಈ ಮಧ್ಯೆ 'ಇಡೀ ಬೆಂಗಳೂರು ಮುಳುಗಿಹೋಗಿಲ್ಲ, ಹಾಗೆ ಬಿಂಬಿಸುವ ಅಗತ್ಯವಿಲ್ಲ' ಎಂದು ಸಮಜಾಯಿಷಿ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 'ಮಳೆ ನಮ್ಮನ್ನು ಕೇಳಿ ಬರುತ್ತದೆಯೇ' ಎಂದು ತರ್ಕಬದ್ಧವಾಗಿಯೇ ಪ್ರಶ್ನಿಸಿದ್ದಾರೆ. ಆದರೆ ಆಡಳಿತ ನಡೆಸುವವರು ನಗರದ ಬೆಳವಣಿಗೆಯನ್ನು ಯೋಜನಾಬದ್ಧವಾಗಿ ರೂಪಿಸುವಾಗ ಮಳೆನೀರಿನ ಹರಿವು ಹೇಗಿರುತ್ತದೆ ಎಂಬುದನ್ನು ಅರಿಯಬೇಕಿದ್ದುದನ್ನು ಬುದ್ಧಿವಂತ ಬೊಮ್ಮಾಯಿಯವರು ಮರೆಯುತ್ತಾರೆ!

'ಕಾಂಗ್ರೆಸ್ ದುರಾಡಳಿತ ಬೆಂಗಳೂರು ದುಃಸ್ಥಿತಿಗೆ ಕಾರಣ' ಎಂಬ ಮತ್ತೊಂದು ಶೋಧನಾತ್ಮಕ ಹೇಳಿಕೆ ನೀಡುವ ಮೂಲಕ ಮುಖ್ಯಮಂತ್ರಿಯವರು ತಮ್ಮದೇ ಒಕ್ಕೂಟ ಸರ್ಕಾರದ ಪ್ರಮುಖರು ದೇಶದ ಪ್ರತಿಯೊಂದು ಬಿಕ್ಕಟ್ಟನ್ನೂ ನೆಹರೂ ಯುಗದ ಹೆಗಲಿಗೇರಿಸುವ ಪರಿಪಾಟವನ್ನು ಯಥಾವತ್ ಪಾಲಿಸಿ ಸೈ ಎನ್ನಿಸಿದ್ದಾರೆ. ಬೊಮ್ಮಾಯಿಯವರ ಈ ಧೋರಣೆ ಅವರು ತಮ್ಮ ಪೂರ್ವಾಶ್ರಮವಾದ ಜನತಾ ಪರಿವಾರದ ಹಂಗು ಮತ್ತು ಹ್ಯಾಂಗೋವರ್‌ನಿಂದ ಪೂರ್ತಿ ಕಳಚಿಕೊಂಡು ನೈಜ ಬಿಜೆಪಿ ನಾಗರಿಕನಾಗಿ ಹೊರಹೊಮ್ಮಬೇಕೆಂಬ ಕಸರತ್ತಿನ ಭಾಗದಂತಿದೆ.

ಬೊಮ್ಮಾಯಿಯವರ ಆರೋಪಗಳಿಗೆ ಪ್ರತಿಕ್ರಿಯಿಸಿರುವ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ, ಏನು ಮಾಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ. 'ಅತಿಯಾದ ಮಳೆಹಾನಿಗೆ ಒಳಗಾಗಿರುವ ಬೆಂಗಳೂರಿನ ಮಹದೇವಪುರ, ಬೊಮ್ಮನಹಳ್ಳಿ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿರುವವರು ಯಾವ ಪಕ್ಷದ ಶಾಸಕರು?' ಎಂಬ ಸಿದ್ದರಾಮಯ್ಯನವರ ಪ್ರಶ್ನೆಯಲ್ಲಿ ಅಕ್ಷರಶಃ 'ಅರ್ಥ'ವಿದೆ. ಏಕೆಂದರೆ ಕ್ಷೇತ್ರದ ಅಭಿವೃದ್ಧಿ, ನಾಗರಿಕ ಸೌಲಭ್ಯಗಳ ಪ್ರಗತಿ, ಸ್ಥಳೀಯ ಸಮಸ್ಯೆಗಳ ಪರಿಹಾರ ಎಲ್ಲವೂ ಆ ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರದಿಂದ ಲಭಿಸುವ ಹಣಕಾಸಿನ ಮೇಲೆ ಅವಲಂಬಿತ. ಹಾಗೆಯೇ ಬಿಡುಗಡೆಯಾಗುವ ಮೊತ್ತವು ಆ ಕ್ಷೇತ್ರ ಪ್ರತಿನಿಧಿಸುವ ಶಾಸಕರ ಚೌಕಾಸಿ ಸಾಮರ್ಥ್ಯ, ಪಕ್ಷದಲ್ಲಿನ ಪ್ರಭಾವ, ಕೆಲವು ಬಾರಿ ಬೆದರಿಕೆ ತಂತ್ರ ಇತ್ಯಾದಿ ಹಲವಾರು ಅಂಶಗಳನ್ನು ಅವಲಂಬಿಸಿರುತ್ತದೆ.

ಮಂತ್ರಿಗಿರಿ, ನಿಗಮ- ಮಂಡಳಿಗಳಿಗೆ ಅತೀವ ಪ್ರಯತ್ನ ಮಾಡಿ ವಿಫಲರಾದವರನ್ನು ಅಂತಿಮವಾಗಿ ಸಮಾಧಾನಪಡಿಸಲು ಅವರ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಆಮಿಷ ಒಡ್ಡುವುದನ್ನು ಗಮನಿಸುತ್ತೇವೆ. ಅಧಿಕಾರಕ್ಕೆ ಆಸೆಪಟ್ಟ ಶಾಸಕರು ಕ್ಷೇತ್ರದ ಅಭಿವೃದ್ಧಿಗಾಗಿ ರಾಜಿಯಾಗುವುದು ಹೊರನೋಟಕ್ಕೆ ಅವರ ದೊಡ್ಡತನ ಮತ್ತು ಜನಪರ ಕಾಳಜಿಯಂತೆ ತೋರಿ ಗೌರವ ಭಾವನೆ ಮೂಡಿಸುವುದು ಸಹಜ. ಆದರೆ ವಾಸ್ತವದಲ್ಲಿ ಅಭಿವೃದ್ಧಿ ಎನ್ನುವುದು ಪಕ್ಕಾ ಆರ್ಥಿಕ ವ್ಯವಹಾರ, ಪರ್ಸೆಂಟೇಜುಗಳ ಲೆಕ್ಕಾಚಾರ.

ಆಯವ್ಯಯ ಅಂಗೀಕಾರದ ನಂತರ ಹಣ ಬಿಡುಗಡೆಯ ಪರ್ವ. ಅದೂ ಹಲವು ಹಂತಗಳಲ್ಲಿ, ಅನೇಕಾನೇಕ ಅಂಶಗಳನ್ನು ಪರಿಗಣಿಸಿ, ತೂಗಿ, ಅಳೆದು, ಕಳೆದು ಬಿಡುಗಡೆಯಾಗುವಂತಹದು. ಅಧಿಕಾರಸ್ಥರ ಭಾಷಣಗಳಲ್ಲಿ, ಹೇಳಿಕೆಗಳಲ್ಲಿ ಕಾರ್ಯಗತವಾದ ಅಭಿವೃದ್ಧಿಯ ವಿವರಗಳು ಕಾಣಿಸಿಕೊಳ್ಳುವುದು ವಿರಳ. ಅವರ ಬಾಯಿಯಲ್ಲಿ ಹೊರಡುವುದು ಬಿಡುಗಡೆಯಾದ ಹಣದ ಅಂಕಿಅಂಶಗಳೇ. ಇತ್ತೀಚೆಗೆ ಮಂಗಳೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ₹ 3,800 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಿದರು. ಇದೀಗ ಬೆಂಗಳೂರಿನ ಮಳೆಹಾನಿ ಪರಿಹಾರ ಕಾರ್ಯಗಳಿಗೆ ₹ 1,800 ಕೋಟಿ ಬಿಡುಗಡೆ ಮಾಡಿರುವುದಾಗಿ ಬಸವರಾಜ ಬೊಮ್ಮಾಯಿ ಹೇಳಿಕೊಂಡಿದ್ದಾರೆ.


ಹೀಗೆ ಬಿಡುಗಡೆಯಾಗುವ ಹಣಕಾಸಿಗೆ ಸರ್ಕಾರದ ನೀತಿನಿಯಮಗಳ ಪ್ರಕಾರ ಪಕ್ಕಾ ಲೆಕ್ಕಾಚಾರವಿರುತ್ತದೆ, ಹೊಣೆಗಾರಿಕೆ ಇರುತ್ತದೆ, ಉತ್ತರದಾಯಿಗಳೂ ಇರುತ್ತಾರೆ. ಪುಟಗಟ್ಟಲೇ ಬಿಲ್ಲುಗಳು, ರಶೀದಿಗಳು, ಕಡತಗಳು ಸೃಷ್ಟಿಯಾಗುತ್ತವೆ. ದಾಖಲೆಗಳಲ್ಲಿ ಎಲ್ಲವೂ ಸಾಚಾ. ಆದರೂ ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪ ಬಹಿರಂಗವಾಗಿಯೇ ಕೇಳಿಬರುತ್ತದೆ. ಇದು ವ್ಯವಸ್ಥೆ ಅಳವಡಿಸಿಕೊಂಡಿರುವ ಜಾದೂ ತಂತ್ರ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರ 40 ಪರ್ಸೆಂಟ್ ಕಮಿಷನ್ ಆರೋಪ ಮತ್ತು ಅವರು ಪ್ರಧಾನಿಗೆ ನೀಡಿದ ದೂರು ಇದ್ದಲ್ಲಿಯೇ ಇವೆ.

ಸರ್ಕಾರ ಬಿಡುಗಡೆ ಮಾಡುವ ಹಣದ ಮೊತ್ತದಿಂದ ಅಭಿವೃದ್ಧಿಯನ್ನು ಅಳೆಯುವ ಚಾಲ್ತಿ ಪರಿಪಾಟದಲ್ಲೇ ದೋಷವಿದೆ ಎಂದೆನ್ನಿಸುತ್ತದೆ. ಹಣ ಬಿಡುಗಡೆ ಮಾಡುವುದು ನಿರ್ದಿಷ್ಟ ಯೋಜನೆಗೆ, ಕಾರ್ಯಕ್ರಮಕ್ಕೆ, ಖಚಿತ ಉದ್ದೇಶಕ್ಕೆ. ಆರಂಭದಲ್ಲಿ ಯೋಜನೆಯ ಮೊತ್ತ ಘೋಷಿಸುವುದನ್ನು ಸಹಿಸಬಹುದು. ಆದರೆ ಯೋಜನೆ ಕಾರ್ಯಗತವಾದ ನಂತರವೂ ಖರ್ಚು ಮಾಡಿದ ಒಟ್ಟು ಮೊತ್ತವೇ ಅಭಿವೃದ್ಧಿಯ ಮಾನದಂಡ ಆಗುವುದು ಅನುಮಾನಾಸ್ಪದ ಆಗಿ ಕಾಣುತ್ತದೆ.

ಕೆಲವು ಇಲಾಖೆಗಳಲ್ಲಿ ಕಾಮಗಾರಿ ಕಾರ್ಯಗತವಾದಾಗ ಹಣ ಬಿಡುಗಡೆಗೂ ಮುನ್ನ ತಜ್ಞರ ಆಮೂಲಾಗ್ರ ಪರಿಶೀಲನೆ, ಪರಿವೀಕ್ಷಣೆ, ಅನುಮೋದನೆಯಂತಹ ಕಟ್ಟುನಿಟ್ಟು ಕ್ರಮಗಳು ಉಂಟು. ಆದರೆ ಹೀಗೆ ಪರಿಶೀಲನೆಗೆ ಅಳವಡಿಸಿಕೊಂಡ ವಿಧಾನಗಳು ಮತ್ತಷ್ಟು ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವುದು ವಿಪರ್ಯಾಸಕರ. ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಭೇಟಿಯಾಗಿದ್ದ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು, ಲಂಚದ ಪ್ರಮಾಣ ಶೇ 40ರಿಂದ ಶೇ 50ಕ್ಕೆ ಏರಿಕೆಯಾಗಿದೆ ಎಂದು ಆರೋಪಿಸಿದರು. ಅವರ ಪ್ರಕಾರ, ಪರ್ಸೆಂಟೇಜ್ ಪ್ರಮಾಣ ಹೆಚ್ಚಾಗಲು ಕಾಮಗಾರಿ ಪರಿವೀಕ್ಷಿಸುವ ಅಧಿಕಾರಿಗಳ ಸಂಖ್ಯೆಯ ಹೆಚ್ಚಳವೇ ಕಾರಣ. ಅಂದರೆ ಕಾಮಗಾರಿಯ ಗುಣಮಟ್ಟ, ಗುತ್ತಿಗೆ ಷರತ್ತುಗಳ ಪಾಲನೆ ಇತ್ಯಾದಿಗಳನ್ನು ವಿವಿಧ ಹಂತಗಳಲ್ಲಿ ಪರೀಕ್ಷಿಸುವ ವ್ಯವಸ್ಥೆ ವಿಸ್ತಾರವಾದರೆ, ಅವರ ಪರಿಭಾಷೆಯಲ್ಲಿ ಲಂಚದ ಟೇಬಲ್ಲುಗಳ ಸಂಖ್ಯೆ ಹೆಚ್ಚಾಗುತ್ತದೆ! ಟೇಬಲ್ಲುಗಳ ಸಂಖ್ಯೆ ಕಡಿಮೆ ಮಾಡಿ ಎಂಬುದೇ ಗುತ್ತಿಗೆದಾರರ ಬೇಡಿಕೆಯಾಗಿದೆ.

ಸರ್ಕಾರದ ಪ್ರಮುಖ ಇಲಾಖೆಗಳ ಮೇಲೆ ಇಷ್ಟೊಂದು ಭ್ರಷ್ಟಾಚಾರದ ಆರೋಪಗಳು ವ್ಯಾಪಕವಾಗಿ ಕೇಳಿಬಂದ ಮೇಲೂ ಅಧಿಕಾರದಲ್ಲಿರುವವರು ನ್ಯಾಯಸಮ್ಮತ ತನಿಖೆಗೆ ಒಳಪಡದೆ, 'ಲೋಕಾಯುಕ್ತಕ್ಕೆ ದೂರು ನೀಡಲಿ, ದಾಖಲೆ ಬಿಡುಗಡೆ ಮಾಡಲಿ' ಎಂದು ಹಾರಿಕೆ ಮಾತನಾಡುತ್ತಾ ಜಾರಿಕೊಂಡರೆ ಹೇಗೆ?

ಬೊಮ್ಮಾಯಿ ಅವರು ಅಧಿಕಾರ ವಹಿಸಿಕೊಂಡಾಗ 'ಶಿಗ್ಗಾವಿ ಮಾದರಿ' ಅಭಿವೃದ್ಧಿ ಆಶಿಸಿದ್ದವರಿಗೆ ಬೇರೊಂದು ಮಾದರಿ ಪರಿಚಯಿಸಿದ್ದಾರೆ!



ಚುರುಮುರಿ



ತೇಲೋದಕ್ಕೆ ತರಬೇತಿ!

• ಬಿ.ಎನ್. ಮಲ್ಲೇಶ್

ಬೆಳಬೆಳಿಗ್ಗೆ ಮನೆಯ ಕಾಲಿಂಗ್ ಬೆಲ್ ಸದ್ದಾಯಿತು. ಬಾಗಿಲು ತೆರೆದರೆ ಗುಡ್ಡೆ! ಜೊತೆಗಿಬ್ಬರು ಚೇಲಾಗಳು. 'ಏನೋ ಗುಡ್ಡೆ ಬೆಳಬೆಳಿಗ್ಗೆ ಸವಾರಿ? ಏನದು ಕೈಯಲ್ಲಿ...' ಎಂದೆ.

'ಇದಾ... ಅಪ್ಲಿಕೇಶನ್ ಫಾರ್ಮು, ನಮ್ ಬಡಾವಣೆ ಜನರಿಗೆಲ್ಲ ವಾಟರ್ ಸೇಫ್ಟಿ ಟ್ರೇನಿಂಗ್ ಕೊಡ್ತಾ ಇದೀವಿ...' ಎಂದ ಗುಡ್ಡೆ.

'ಓ... ದುಡ್ಡೆತ್ತಕೆ ಹೊಸ ಸ್ಕೀಮಾ? ಏನೇನ್ ಟ್ರೇನಿಂಗ್ ಕೊಡ್ತೀರಪ್ಪ?'

'ಮಳೆ ನೀರಲ್ಲಿ ಹೆಂಗೆ ತೇಲಬೇಕು, ಹಾವು, ಚೇಳುಗಳಿಂದ ಹೇಗೆ ತಪ್ಪಿಸ್ಕಾಬೇಕು, ಒಂದು ಮ್ಯಾನ್‌ಹೋಲ್‌ಗೆ ಬಿದ್ರೆ ಇನ್ನೊಂದು ಮ್ಯಾನ್‌ಹೋಲ್‌ನಲ್ಲಿ ಹೆಂಗೆ ಏಳಬೇಕು, ರೋಡಲ್ಲೂ ಹೆಂಗೆ ಬೋಟ್ ನಡೆಸಬೇಕು ಅಂತೆಲ್ಲ ಟ್ರೇನಿಂಗ್ ಕೊಡ್ತೀವಿ'.

'ಬೋಟೂ ಇಲ್ಲ, ಈಜೂ ಬರಲ್ಲ ಅಂಥೋರಿಗೆ ಏನು ಮಾಡ್ತೀರಲೆ?'

'ಹೆದರಬೇಡಿ, ಧೈರ್ಯವಾಗಿ ಕೈ ಕಾಲು ಆಡಿಸಿ, ಯಾವುದಾದ್ರೂ ದಡ ಸೇರ್ಕಂತೀರಿ ಅಂತ ಧೈರ್ಯ ತುಂಬೋ ಕೆಲ್ಸ ಮಾಡ್ತೀವಿ...'

'ನಿನ್ತಲೆ, ಅದಕ್ಕಿಂತ ಒಂದು ಹೆಲಿಕಾಪ್ಟರ್ ಬಾಡಿಗೆಗೆ ತಗಂಡು ಮಳೇಲಿ ಸಿಕ್ಕಾಕಂಡೋರ್ನ ಏರ್‌ಲಿಫ್ಟ್ ಮಾಡು, ಒಳ್ಳೆ ರೊಕ್ಕಾಗ್ತವು...'

'ಲೇ ತೆಪರ, ಮಳೇಲಿ ಹೆಲಿಕಾಪ್ಟರ್ ಎಲ್ಲಿ ಹಾರ್ತಾವಲೆ, ಜಲ್ದಿ ರೊಕ್ಕ ತೆಗಿ. ನಿಂದು ಪಮ್ಮಕ್ಕಂದು ಸೇರಿ ಸಾವಿರ ರೂಪಾಯಿ... ಎಲ್ಲಿ ಪಮ್ಮಕ್ಕ?' ಗುಡ್ಡೆ ಕೇಳಿದ.

'ಬರ್ತಾ ಇದೀನಿ, ಕಾಫಿ ತರ್ತಾ ಇದೀನಿ...' ಎನ್ನುತ್ತಾ ಅಡುಗೆ ಮನೆಯಿಂದ ಹೊರಬಂದ ಪಮ್ಮಿ 'ಅಲ್ಲಪ್ಪ ಗುಡ್ಡೆ, ಈ ಮಳೆ ಪ್ರವಾಹದಿಂದ ಬಚಾವಾಗೋಕೆ ಸ್ವಿಮ್ಮಿಂಗ್ ಸೂಟು, ಜಾಕೆಟ್ಟು ಆ ತರದೋವು ಏನಾದ್ರು ಕೊಟ್ರೆ ಯೂಸ್ ಆಗುತ್ತಪ್ಪ...' ಎಂದಳು.

'ಬರೋ ದಿನದಲ್ಲಿ ಅದೆಲ್ಲ ಕೊಡ್ತೀವಿ ಪಮ್ಮಕ್ಕ, ಮಳೇಲಿ ಸಿಕ್ಕಾಕೊಂಡೋರು, ಚರಂಡಿಗೆ ಬಿದ್ದೋರು ಎಲ್ಲದಾರೆ ಅನ್ನದನ್ನ ಪತ್ತೆ ಹಚ್ಚಾಕೆ ಎಲ್ರಿಗೂ ಒಂದೊಂದ್ ಮಿಶಿನ್ ಫಿಕ್ಸ್ ಮಾಡ್ತೀವಿ...'

'ಹೌದಾ? ವಂಡರ್‌ಫುಲ್... ಹಂಗೇ ನೀರಲ್ಲಿದ್ರೂ ಬಾರಲ್ಲಿದ್ರೂ ಸೀದಾ ಮನೇಗೇ ತೇಲ್ಕಂಡು ಬರೋ ತರ ಯಾವುದಾದ್ರು ಆಟಮೆಟಿಕ್ ಮಿಶಿನ್ ಇದ್ರೆ ತಂದುಕೊಡಪ್ಪ...' ಎಂದಳು ತೆಪರೇಸಿ ಕಡೆ ನೋಡುತ್ತ. ತೆಪರೇಸಿ ಪಿಟಿಕ್ಕನ್ನಲಿಲ್ಲ.

ದಿನದ ಟ್ವೀಟ್

ಮೋಸದ ತಂತ್ರ



ಭಾರತದ ಜಿಡಿಪಿಯು ಬ್ರಿಟನ್ನಿನ ಜಿಡಿಪಿಯನ್ನು ಹಿಂದಿಕ್ಕಿ, ವಿಶ್ವದ ಐದನೆಯ ಅತಿದೊಡ್ಡ ಆರ್ಥಿಕ ಶಕ್ತಿಯಾಗಿದೆ ಎಂಬುದರ ಸುತ್ತಲಿನ ಭಾರಿ ಪ್ರಚಾರವು, ತಲಾವಾರು ಆದಾಯದ ಲೆಕ್ಕದಲ್ಲಿ ಭಾರತವು ಜಾಗತಿಕವಾಗಿ 142ನೆಯ ಸ್ಥಾನದಲ್ಲಿದೆ ಎಂಬ ವಾಸ್ತವದಿಂದ ಗಮನವನ್ನು ಬೇರೆಡೆ ಸೆಳೆಯುವ ಮೋಸದ ತಂತ್ರ.

ಥಾಮಸ್ ಐಸಾಕ್, ಸಿಪಿಎಂ ಕೇಂದ್ರ ಮಂಡಳಿಯ ಸದಸ್ಯ

ಕಿಡಿನುಡಿ



ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಂಜೆ 7 ಗಂಟೆಗೆ ಉದ್ಘಾಟಿಸಲಿದ್ದಾರೆ, ನೀವು ಸಂಜೆ 6 ಗಂಟೆಗೆ ಮೊದಲೇ ಹಾಜರಿರಬೇಕು ಎಂದು ಅಧೀನ ಕಾರ್ಯದರ್ಶಿಯೊಬ್ಬರು ನನಗೆ ಪತ್ರ ಬರೆದಿದ್ದಾರೆ. ಚುನಾಯಿತ ಮುಖ್ಯಮಂತ್ರಿಯೊಬ್ಬರಿಗೆ ಪತ್ರ ಬರೆಯುವ ರೀತಿಯೇ ಇದು? ನಾನು ಜೀತದಾಳು ಅಂದುಕೊಂಡಿದ್ದೀರಾ?

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 9-9-1997

• **ಬೆಳಗಾವಿ ಜಿಲ್ಲೆ ವಿಭಜನೆ ಇಲ್ಲ: ಪಟೇಲ್**

ಬೆಂಗಳೂರು, ಸೆ. 8– 'ಮಹಾಜನ್ ವರದಿ ಇತ್ಯರ್ಥ ಆಗುವವರೆಗೆ ಬೆಳಗಾವಿ ವಿಭಜನೆ ಮಾಡುವ ಸುದ್ದಿಯನ್ನು ಎತ್ತುವುದಿಲ್ಲ. ಬೆಳಗಾವಿ ವಿಭಜನೆ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಜಿಲ್ಲೆಗಳನ್ನು ಮರು ವಿಂಗಡಣೆ ಮಾಡಬೇಕು ಎಂಬುದು ಒಳ್ಳೆಯ ಆಡಳಿತ ಕೊಡಬೇಕು ಎನ್ನುವ ಉದ್ದೇಶದಿಂದ ಕೈಗೊಂಡ ತೀರ್ಮಾನ. ಆದರೆ, ಕನ್ನಡ ಶಕ್ತಿ ಕೇಂದ್ರದ ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್ ಮತ್ತು ಇತರೆ ಕನ್ನಡಪರ ಸಂಘಟನೆಗಳ ಸದಸ್ಯರು ಬೆಳಗಾವಿ ವಿಭಜನೆ ಬಗ್ಗೆ ಅವಸರದ ಕ್ರಮ ತೆಗೆದುಕೊಳ್ಳಬೇಡಿ ಎಂದು ಸೂಚಿಸಿದರು ಎಂದು ಹೇಳಿದರು.

• **ಅಣ್ವಸ್ತ್ರ ತಯಾರಿಕೆಗೆ ಸಿದ್ಧ: ಗುಜ್ರಾಲ್**

ನವದೆಹಲಿ, ಸೆ. 8 (ಯುಎನ್ಐ)– 'ಭಾರತ ಅಣ್ವಸ್ತ್ರಗಳನ್ನು ತಯಾರಿಸಬಹುದು ಹಾಗೂ ಯಾವುದೇ ಸನ್ನಿವೇಶವನ್ನು ಎದುರಿಸಲು ಅಣ್ವಸ್ತ್ರ ಬಳಕೆಯ ಸಾಧ್ಯತೆಯನ್ನು ಕಾಯ್ದಿರಿಸಿಕೊಳ್ಳುವುದು' ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಇಲ್ಲಿ ಘೋಷಿಸಿದರು.

ಇಂದಿನಿಂದ ಆರಂಭವಾಗಿರುವ 'ನಿರಂತರ ಅಭಿವೃದ್ಧಿಗೆ ಪರಮಾಣು ಶಕ್ತಿ' ಎಂಬ ಎರಡು ದಿನಗಳ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ, ಭಾರತವು ಶಾಂತಿ ಒಪ್ಪಂದಕ್ಕೆ ಬದ್ಧವಾಗಿದ್ದರೂ ಅಣ್ವಸ್ತ್ರ ತಂತ್ರಜ್ಞಾನ ಅಭಿವೃದ್ಧಿಯಿಂದ ಭಾರತವನ್ನು ತಡೆಯಲು ಪ್ರಯತ್ನಿಸುತ್ತಿರುವ ವಿದೇಶಿ ಶಕ್ತಿಗಳನ್ನು ತೀವ್ರವಾಗಿ ಟೀಕಿಸಿದರು.

50 ವರ್ಷಗಳ ಹಿಂದೆ

ಶನಿವಾರ, 9-9-1972

• **ಬಂಡೀಪುರ ಅರಣ್ಯದಲ್ಲಿ ಹುಲಿ ಸಂತತಿ ರಕ್ಷಣೆಗೆ ವಿಶೇಷ ಯೋಜನೆ**

ನವದೆಹಲಿ, ಸೆ. 8– ಭಾರತದಲ್ಲಿ ಹುಲಿಗಳ ಸಂತತಿಯನ್ನು ರಕ್ಷಿಸುವ ಸಲುವಾಗಿ ಬರುವ ವರ್ಷ ಏಪ್ರಿಲ್‌ನಿಂದ ಐದು ಕೋಟಿ ಎಂಬತ್ತು ಲಕ್ಷ ಮೊತ್ತದ ಯೋಜನೆಯೊಂದನ್ನು ಕೈಗೊಳ್ಳಲಾಗುವುದು.

ಈ ಯೋಜನೆಯನ್ವಯ ಹುಲಿ ಸಂತಾನ ಅಭಿವೃದ್ಧಿ ಕಾರ್ಯಕ್ಕಾಗಿ, ಮೈಸೂರು ರಾಜ್ಯದಲ್ಲಿರುವ ಬಂಡೀಪುರ ಅಭಯಾರಣ್ಯವನ್ನು ಆಯ್ಕೆ ಮಾಡಲಾಗಿದೆ. ವಿವಿಧ ರಾಜ್ಯಗಳಿಗೆ ಸೇರಿದ ಇನ್ನೂ ಏಳು ಅಭಯಾರಣ್ಯಗಳಲ್ಲಿ ಹುಲಿ ಸಂತಾನ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಕಳೆದ ಶತಮಾನದಲ್ಲಿ ಭಾರತದ ಅರಣ್ಯಗಳಲ್ಲಿ ಸುಮಾರು ನಲವತ್ತು ಸಾವಿರ ಹುಲಿಗಳಿದ್ದವು. ಆದರೆ, ಇದು ಇತ್ತೀಚಿನ ಹುಲಿ ಗಣತಿ ಪ್ರಕಾರ 1,827ಕ್ಕೆ ಕುಸಿದಿದೆ. ಹುಲಿ ರಕ್ಷಣೆ ಯೋಜನೆ ಕೈಗೊಳ್ಳಲು ಇದೇ ಕಾರಣ.

• **ಬಿಹಾರದ ಅನೇಕ ಕಡೆ ಗಲಭೆ: ಸೇನೆ ನೆರವಿಗೆ ಕರೆ**

ಪಟ್ನಾ, ಸೆ. 8– ಬಿಹಾರದ ವಿದ್ಯಾರ್ಥಿ ಚಳವಳಿಯ ನಾಲ್ಕನೆಯ ದಿನವಾದ ಇಂದು ಹಿಂಸಾತ್ಮಕ ಗಲಭೆಗಳು ರಾಜ್ಯದ ಇತರ ಭಾಗಗಳಿಗೂ ಹಬ್ಬದಂತೆ ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಒಂದು ಬೆಟಾಲಿಯನ್ ಸೇನೆಯ ನೆರವಿಗೆ ಸರ್ಕಾರ ಕೋರಿಕೆ ಸಲ್ಲಿಸಿದೆ.

15 ಬೆಟಾಲಿಯನ್ ಗಡಿ ಭದ್ರತಾ ಪಡೆಯನ್ನೂ ಜೊತೆಗೆ ಒಡಿಶಾ, ಉತ್ತರ ಪ್ರದೇಶದಿಂದ 2 ಬೆಟಾಲಿಯನ್ ಮೀಸಲು ಪೊಲೀಸರ ಪಡೆಯನ್ನೂ ಎರವಲು ನೀಡುವಂತೆ ಬಿಹಾರ ಸರ್ಕಾರ ಕೇಳಿದೆ.

ಸಂಗತ

ಜೋಳ: ಉಳಿಯಲಿ ಸಂಸ್ಕೃತಿ

ಪೌಷ್ಟಿಕ ಹಾಗೂ ಸಮತೋಲಿತ ಆಹಾರಧಾನ್ಯವಾದ ಜೋಳ ಬೆಳೆಯುವುದಕ್ಕೆ ಸರ್ಕಾರ ಹೆಚ್ಚಿನ ಉತ್ತೇಜನ ನೀಡಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

'ಜೋಳ ತಿಂದವ ತೋಳ' ಎನ್ನುವ ಜನಪದ ಮಾತು ಉತ್ತರ ಕರ್ನಾಟಕ ಭಾಗದಲ್ಲಿ ತುಂಬ ಪ್ರಸಿದ್ಧ. ಜೋಳ ಶಕ್ತಿಶಾಲಿ, ಉತ್ತಮ ಪೌಷ್ಟಿಕ ಆಹಾರ ಎಂಬುದನ್ನು ಈ ನುಡಿ ಖಚಿತಪಡಿಸುತ್ತದೆ. ನೋವಿನ ಸಂಗತಿಯೆಂದರೆ, ರೈತರು ಜೋಳ ಬೆಳೆಯುವುದನ್ನು ನಿಲ್ಲಿಸುತ್ತಿದ್ದಾರೆ. ಸೂಕ್ತ ಬೆಲೆ ಸಿಗುವುದಿಲ್ಲ ಎನ್ನುವುದು ಇದಕ್ಕೆ ಮುಖ್ಯ ಕಾರಣ. ಅದಕ್ಕೆ ಬದಲಾಗಿ ಹೆಚ್ಚು ಆದಾಯ ತರುವ ಬೆಳೆ ಬೆಳೆಯತೊಡಗಿದ್ದಾರೆ.

ಪಡಿತರ ವ್ಯವಸ್ಥೆಯಡಿ ಸ್ಥಳೀಯ ಪೌಷ್ಟಿಕ ಆಹಾರಧಾನ್ಯ ವಿತರಿಸುವ ಉದ್ದೇಶದಿಂದ ಉತ್ತರ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಪಡಿತರ ಚೀಟಿದಾರರಿಗೆ ಅಕ್ಕಿಯೊಂದಿಗೆ ಜೋಳವನ್ನೂ ಹಂಚಿಕೆ ಮಾಡುವ ಮಹತ್ವದ ಕಾರ್ಯವನ್ನು ಸರ್ಕಾರ ಈ ವರ್ಷ ಜೂನ್ ತಿಂಗಳಲ್ಲಿ ಆರಂಭಿಸಿತ್ತು. ಇದಕ್ಕೆ ಬಹುದೊಡ್ಡ ಸ್ವಾಗತ ವ್ಯಕ್ತವಾಗಿತ್ತು. ಅಂತ್ಯೋದಯ ಚೀಟಿದಾರರಿಗೆ 15 ಕೆ.ಜಿ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ 2 ಕೆ.ಜಿ ಜೋಳ ವಿತರಣೆಯನ್ನು ಮಾಡಲಾಯಿತು. ಆದರೆ ಈ ಯೋಜನೆ ಎರಡೇ ತಿಂಗಳಲ್ಲಿ ಸ್ಥಗಿತವಾಗಿ, ಜೋಳ ದೊರಕದಂತಾಗಿದೆ.

ಮಾರುಕಟ್ಟೆಯಲ್ಲಿ ಸಾಕಷ್ಟು ಜೋಳ ಸಿಗುತ್ತಿಲ್ಲ, ಈ ಕಾರಣಕ್ಕೆ ಪಡಿತರದಲ್ಲಿ ಜೋಳ ಹಂಚಿಕೆಯನ್ನು ಆಗಸ್ಟ್ ತಿಂಗಳಿಂದಲೇ ಸ್ಥಗಿತಗೊಳಿಸಲಾಗಿದೆ ಎಂದು ಸರ್ಕಾರ ಪ್ರಕಟಣೆ ನೀಡಿದೆ.

ಜೋಳ ಮಳೆಯನ್ನು ಅವಲಂಬಿಸಿ ಬೆಳೆಯುವ ಸುಲಭ ಬೆಳೆ. ರಸಗೊಬ್ಬರ, ಕೀಟನಾಶಕದ ಅವಶ್ಯಕತೆ ಇಲ್ಲ. ಬೂದಿಗೊಬ್ಬರ, ಸಗಣಿ ಗೊಬ್ಬರ ಹಾಕಿದರೆ ಚೆನ್ನಾಗಿ ಬೆಳೆಯುತ್ತದೆ. ಇದು ನಾಲ್ಕು ತಿಂಗಳ ಅವಧಿಯ ಬೆಳೆ. ನೀಟಾಗಿ ಐದರಿಂದ ಐದೂವರೆ ಅಡಿ ಎತ್ತರ ಬೆಳೆಯುವ ಜೋಳದ ಪೈರು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.


ಜೋಳ ಅನೇಕ ಪೋಷಕಾಂಶಗಳನ್ನು ಒಳಗೊಂಡಿರುವ, ರೋಗನಿರೋಧಕ ಶಕ್ತಿಯನ್ನು ಯಥೇಚ್ಛವಾಗಿ ಹೊಂದಿರುವ ಸಮತೋಲಿತ ಆಹಾರವಾಗಿದೆ. ಪ್ರೋಟೀನ್, ವಿಟಮಿನ್ ಮತ್ತು ಕಾರ್ಬೊಹೈಡ್ರೇಟ್‌ಗಳನ್ನು ಮನುಷ್ಯ ದೇಹಕ್ಕೆ ಬೇಕಾಗುವ ಪ್ರಮಾಣದಲ್ಲಿ ಜೋಳ ಹೊಂದಿರುವುದು ಸಂಶೋಧನೆಗಳಿಂದ ಸ್ಪಷ್ಟವಾಗಿದೆ. ನಾರಿನ ಅಂಶ ಹೆಚ್ಚಾಗಿದ್ದು ನಿಧಾನವಾಗಿ ಜೀರ್ಣವಾಗುವುದರಿಂದ ಹೃದ್ರೋಗಿಗಳಿಗೆ ಉತ್ತಮ ಆಹಾರವಾಗಿದೆ. ಅಕ್ಕಿ ಹಾಗೂ ಗೋಧಿಗಿಂತ 4-5 ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕ ಮತ್ತು ಜೀವಸತ್ವಗಳನ್ನು ಜೋಳ ಹೊಂದಿದೆ.

ಎರಡು ದಶಕಗಳ ಹಿಂದಿನವರೆಗೆ ಜೋಳ, ಉತ್ತರ ಕರ್ನಾಟಕ ಭಾಗದ ಮುಖ್ಯ ಆಹಾರವಾಗಿತ್ತು. ಎಲ್ಲರ ಮನೆಗಳಲ್ಲಿ ರೊಟ್ಟಿ ಊಟದ ಸಂಭ್ರಮ ಇರುತ್ತಿತ್ತು. ಈಗ ಜೋಳ ಕಡಿಮೆಯಾಗಿ ಗೋಧಿ ಹಾಗೂ ಅಕ್ಕಿಯನ್ನು ಜನ ಹೆಚ್ಚಾಗಿ ಬಳಸುತ್ತಿದ್ದಾರೆ.

ಕಾದಂಬರಿಕಾರ ಬಸವರಾಜ ಕಟ್ಟೀಮನಿ ಅವರ 'ಜೋಳದ ಬೆಳೆಯ ನಡುವೆ' ಕಾದಂಬರಿ ಪ್ರಸಿದ್ಧವಾಗಿದೆ. ಸೊಗಸಾಗಿ ಬೆಳೆದು ನಿಂತ ಹಸಿರು ಜೋಳದ ಪೈರಿನ ನಡುವೆ ಯುವ ರೈತರು, ಮಕ್ಕಳು ನಲಿಯುತ್ತಿದ್ದ ಸಂಗತಿಯನ್ನು ತುಂಬ ರಮ್ಯವಾಗಿ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಜೋಳ ಈ ಭಾಗದ ಕಲೆ, ಸಂಸ್ಕೃತಿಯ ಭಾಗವೂ ಆಗಿತ್ತು ಎಂಬುದನ್ನು ಕಾದಂಬರಿ ಅರ್ಥಪೂರ್ಣವಾಗಿ ಹೇಳುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಅಧಿಕಾರಿಗಳು ಉತ್ತರ ಕರ್ನಾಟಕ ಹಾಗೂ ಸೊಲ್ಲಾಪುರ ಭಾಗದಲ್ಲಿ ಜೋಳ ಬೆಳೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು ಎಂಬುದು ಗಮನಿಸಬೇಕಾದ ಸಂಗತಿ. ಕಡಿಮೆ ಮಳೆ, ಬರ ಪ್ರದೇಶದಲ್ಲಿ ಜನರನ್ನು ಜೋಳದ ಬೆಳೆ ಮಾತ್ರ ಸಲಹಬಲ್ಲದು ಎಂಬುದನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದರು.

ವಿಜಯಪುರ, ಬಳ್ಳಾರಿ ಜಿಲ್ಲೆಯ ಹಗರಿ ಹಾಗೂ ಸೊಲ್ಲಾಪುರದಲ್ಲಿ ಜೋಳದ ಕೃಷಿ ಸಂಶೋಧನಾ ಕೇಂದ್ರಗಳನ್ನು ಬ್ರಿಟಿಷರು ಆರಂಭಿಸಿದ್ದರು. ಜೋಳದ ಬೆಳೆಗೆ ಕಂದಾಯ ಇಲಾಖೆಯ ಮೂಲಕ ಸಾಲ ಕೊಡುವ ವ್ಯವಸ್ಥೆಯನ್ನೂ ಮಾಡಿದ್ದರು. ತೀವ್ರ ಬರ, ರೋಗರುಜಿನಗಳ ಹಾವಳಿ ಇದ್ದ ಕಠಿಣ ದಿನಗಳಲ್ಲಿ ಉತ್ತರ ಕರ್ನಾಟಕದ ಜನರನ್ನು ಕಾಪಾಡಿದ್ದು ಜೋಳ.



ಒಂದು ಎಕರೆಯಲ್ಲಿ 5 ಕ್ವಿಂಟಲ್ ಜೋಳ ಬೆಳೆಯಬಹುದು. ಇದರಿಂದ ಬರುವ ಆದಾಯ ಸುಮಾರು ₹ 15 ಸಾವಿರ. ಆದರೆ, ಒಂದು ಎಕರೆ ಜೋಳದ ಕೃಷಿಗೆ ₹ 15 ಸಾವಿರಕ್ಕಿಂತಲೂ ಹೆಚ್ಚು ಖರ್ಚು ಬರುತ್ತದೆ ಎನ್ನುತ್ತಾರೆ ರೈತರು. ಹೀಗಾಗಿ ರೈತರು ಜೋಳ ಬೆಳೆಯುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಕೆಲವು ಕೃಷಿಕರು ತಮ್ಮ ಕುಟುಂಬಕ್ಕೆ ಬೇಕಾಗುವಷ್ಟು ಮಾತ್ರ ಜೋಳ ಬೆಳೆಯುತ್ತಿದ್ದಾರೆ.

ಸರ್ಕಾರ ರಾಗಿಗೆ ಕ್ವಿಂಟಲ್‌ಗೆ ₹ 3,578 ಬೆಂಬಲ ಬೆಲೆ ನಿಗದಿ ಮಾಡಿದೆ. ಆದರೆ ಜೋಳಕ್ಕೆ ಕೇವಲ ₹ 2,970 ನಿಗದಿ ಮಾಡಿದೆ. ಈ ತಾರತಮ್ಯ ನಿವಾರಣೆಗೆ ರೈತರು ಸತತ ಆಗ್ರಹ ಮಾಡಿದರೂ ಪ್ರಯೋಜನವಾಗಿಲ್ಲ. ಜೋಳಕ್ಕೆ ಲಾಭದಾಯಕ ಬೆಲೆ ನಿಗದಿ ಮಾಡಬೇಕು. ಜೋಳ ಬೆಳೆಯುವುದಕ್ಕೂ ಸಾಲ ಕೊಡುವ ಹಾಗೂ ಸಹಾಯಧನ ನೀಡುವ ಯೋಜನೆಗಳು ಜಾರಿಯಾಗಬೇಕು.

ಉತ್ತರ ಕರ್ನಾಟಕದ ಜನ ತಲೆತಲಾಂತರಗಳಿಂದ ಜೋಳದ ಊಟ ಮಾಡುತ್ತ ಬೆಳೆದಿದ್ದಾರೆ. ಜೋಳ ಈ ಭಾಗದ ಜನರ ಆರೋಗ್ಯಕ್ಕೆ ಪೂರಕ ಆಹಾರವಾಗಿದೆ. ಜೋಳದ ಊಟದ ಸಂಸ್ಕೃತಿ ಉಳಿಸಿಕೊಳ್ಳುವುದು ಬಹಳ ಅವಶ್ಯ.

ವಾಚಕರ ವಾಣಿ

ಪ್ರಯಾಣಿಕರ ಗೋಳು ಕೇಳುವವರಾರು?

ಪಾವಗಡದಲ್ಲಿ ಇತ್ತೀಚೆಗೆ ಖಾಸಗಿ ಬಸ್‌ವೊಂದು ಅಪಘಾತಕ್ಕೀಡಾಯಿತು. ಮೊನ್ನೆ ಮೊನ್ನೆ ಶಿರಾದ ಕಳ್ಳಂಬೆಳ್ಳ ಬಳಿ ಕ್ರೂಸರ್ ಅಪಘಾತಕ್ಕೆ ಒಳಗಾಯಿತು. ಎರಡೂ ಸಂದರ್ಭಗಳಲ್ಲಿ ಕೆಲವರು ಪ್ರಾಣ ಕಳೆದುಕೊಂಡರು. ಈ ಅಪಘಾತಗಳಿಗೆ ಆಸನದ ಸಾಮರ್ಥ್ಯಕ್ಕಿಂತ ಮಿತಿಮೀರಿ ಜನರನ್ನು ತುಂಬಿಸಿಕೊಂಡಿದ್ದೇ ಕಾರಣ ಎಂದು ಸಾರಿಗೆ ಇಲಾಖೆ ಸಮಜಾಯಿಷಿ ನೀಡಿತು. ಹಾಗಿದ್ದರೆ ಹೀಗೆ ಆಸನದ ಮಿತಿ ಇರುವುದು ಖಾಸಗಿ ವಾಹನಗಳಿಗೆ ಮಾತ್ರವೇ? ಸರ್ಕಾರಿ ವಾಹನಗಳಿಗೆ ಇಲ್ಲವೇ?

ಬೆಂಗಳೂರಿನಿಂದ ಪಾವಗಡಕ್ಕೆ ಹೋಗುವ ಬಸ್ಸುಗಳನ್ನು ಸಾರಿಗೆ ಇಲಾಖೆಯವರು ಒಮ್ಮೆ ನೋಡಲಿ. ತುಮಕೂರಿನಿಂದ ದೊಡ್ಡಬಳ್ಳಾಪುರಕ್ಕೆ ದಿನನಿತ್ಯ ಪ್ರಯಾಣಿಸುವವರ ಗೋಳಂತೂ ಹೇಳತೀರದು. ಮೂರು ಬಸ್ಸಿನ ಪ್ರಯಾಣಿಕರನ್ನು ಒಂದೇ ಬಸ್ಸಿನಲ್ಲಿ ತುಂಬಿರುತ್ತಾರೆ. ಸೀಮಿತ ಸಂಖ್ಯೆಯಲ್ಲಿ ಬಸ್ಸುಗಳು ಇರುತ್ತವೆ. ಏಕೆ ಹೀಗೆ ಎಂದು ತುಮಕೂರು ಬಸ್ ಘಟಕದವರನ್ನು ಕೇಳಿದರೆ, ತಮಗೆ ಗೊತ್ತಿಲ್ಲ, ದೊಡ್ಡಬಳ್ಳಾಪುರ ಘಟಕದವರನ್ನು ಕೇಳಿ ಎನ್ನುತ್ತಾರೆ. ದೊಡ್ಡಬಳ್ಳಾಪುರ ಘಟಕದ ಸಿಬ್ಬಂದಿಯಿಂದ 'ಯಾರಿಗಾದರೂ ಹೇಳ್ಕೋ ಹೋಗು, ಏನಾದರೂ ಮಾಡ್ಕೋ ಹೋಗು' ಎಂಬಂಥ ಉತ್ತರ ಬರುತ್ತದೆ. ಇನ್ನು ಚಾಲಕ, ನಿರ್ವಾಹಕರಿಂದಲೂ ಇದೇ ಬಗೆಯ ಉತ್ತರ ದೊರೆಯುತ್ತದೆ. ಹಾಗಿದ್ದರೆ ಪ್ರಯಾಣಿಕರು ಯಾವ ಕಾರಣಕ್ಕೆ, ಎಷ್ಟು ಸಮಯ ಹೀಗೆ ತೊಂದರೆ ಅನುಭವಿಸಬೇಕು? ಪಾವಗಡ ಮತ್ತು ಕಳ್ಳಂಬೆಳ್ಳದಂತಹ ದುರಂತ ಮರುಕಳಿಸಬಾರದೆಂದರೆ ದೊಡ್ಡಬಳ್ಳಾಪುರ-ತುಮಕೂರು ಮಾರ್ಗದಲ್ಲಿ ಬಸ್‌ಗಳ ಸೇವೆಯನ್ನು ಹೆಚ್ಚಿಸಬೇಕು.

ಶಾಂತಕುಮಾರಿ ಕೆ., ತುಮಕೂರು

ನೈತಿಕ ಹಕ್ಕು ಬರಬೇಕೆಂದರೆ...

ಉತ್ತರಪ್ರದೇಶದಲ್ಲಿ ಒಬ್ಬ ದಲಿತ ಬಾಲಕನನ್ನು ಶಿಕ್ಷಕ ಅಮಾನವೀಯವಾಗಿ ಹಿಂಸಿಸಿದ್ದು ವರದಿಯಾಗಿದೆ (ಪ್ರ.ವಾ., ಸೆ. 8). ಇಂತಹ ಪ್ರಕರಣಗಳು ಆಗಾಗ್ಗೆ ನಡೆಯುತ್ತಿದ್ದರೂ ಇದರ ಬಗ್ಗೆ ಯಾರೂ ಗಂಭೀರವಾಗಿ ಚಿಂತನೆ ನಡೆಸಿದಂತೆ ಕಾಣುತ್ತಿಲ್ಲ. ಇದಕ್ಕೆ ಕಾರಣರಾದ ಆರೋಪಿಗಳಿಗೆ ಶಿಕ್ಷೆ ಆಗುತ್ತಿದೆಯೋ ಅಥವಾ ಅವರು ಬಚಾವಾಗಿ ಹೊರಬರುತ್ತಿದ್ದಾರೋ ಎಂಬ ಸತ್ಯ ಎಲ್ಲೂ ಬಹಿರಂಗವಾಗುತ್ತಿಲ್ಲ. ಹೀಗಾಗಿ ದಲಿತರ ಸುರಕ್ಷತೆಯ ಪ್ರಶ್ನೆ ಮುನ್ನೆಲೆಗೆ ಬರುವುದು ಸಹಜ. ಮತಾಂತರವನ್ನು ವಿರೋಧಿಸುತ್ತಿರುವ ನಾವು, ಹಿಂದೂ ಧರ್ಮದಲ್ಲಿ ದಲಿತರಿಗೆ ರಕ್ಷಣೆ ಕೊಡಬೇಕಾದ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮತಾಂತರವನ್ನು ವಿರೋಧಿಸುವ ನೈತಿಕ ಹಕ್ಕು ನಮಗೆ ಬರುವುದು ಹೇಗೆ ಸಾಧ್ಯ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಪಟಾಕಿಗೆ ನಿಷೇಧ: ಇತರ ರಾಜ್ಯಗಳಲ್ಲೂ ಜಾರಿಯಾಗಲಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ 2023ರ ಜನವರಿ 1ರವರೆಗೆ ಪಟಾಕಿಗಳ ಉತ್ಪಾದನೆ, ದಾಸ್ತಾನು ಹಾಗೂ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿರುವ ವರದಿ (ಪ್ರ.ವಾ., ಸೆ. 8) ಓದಿ ಸಂತಸವಾಯಿತು. ಈ ನಿರ್ಧಾರದಿಂದ ಜನರ ಜೀವವನ್ನು ಕಾಪಾಡಬಹುದೆಂದು ಅಲ್ಲಿನ ಪರಿಸರ ಸಚಿವರು ಅಭಿಪ್ರಾಯಪಟ್ಟಿದ್ದಾರೆ. ಇದು ಅಕ್ಷರಶಃ ಸತ್ಯ ಹಾಗೂ ಅವರ ಈ ನಿರ್ಧಾರವನ್ನು ಇತರ ಎಲ್ಲಾ ರಾಜ್ಯಗಳು ಚಾಚೂ ತಪ್ಪದೆ ಅನುಸರಿಸಿದಲ್ಲಿ ದೇಶದಲ್ಲಿನ ವಾಯುಮಾಲಿನ್ಯದ ಪ್ರಮಾಣದಲ್ಲಿ ಬಹಳಷ್ಟನ್ನು ಕಡಿಮೆ ಮಾಡಬಹುದಾಗಿದೆ. ಪಟಾಕಿಗಳ ಸಿಡಿಯುವಿಕೆ ಕೆಲವರಿಗೆ ಆನಂದವನ್ನು ಉಂಟುಮಾಡಬಹುದು. ವೃದ್ಧರಿಗೆ, ನವಜಾತ ಶಿಶು ಹಾಗೂ ಬಾಣಂತಿಯರಿಗೆ, ಶ್ವಾಸಕೋಶ ಸಂಬಂಧಿ ಕಾಯಿಲೆ ಇರುವವರಿಗೆ ಹಾಗೂ ನಮಗಿಂತಲೂ ಹತ್ತಾರು ಪಟ್ಟು ಹೆಚ್ಚಿನ ಶ್ರವಣಸಾಮರ್ಥ್ಯವಿರುವ ಪ್ರಾಣಿ-ಪಕ್ಷಿಗಳಿಗೆ ಆಗುವ ನೋವು, ಕಿರಿಕಿರಿಗೆ ಯಾರು ಜವಾಬ್ದಾರಿ?

ಜನಸಾಮಾನ್ಯರಾದ ನಾವು ಮಾಲಿನ್ಯರಹಿತ ಚಟುವಟಿಕೆ- ಆಚರಣೆಗಳನ್ನು ಕೈಗೊಳ್ಳುವ ಗೋಜಿಗೇ ಹೋಗದೆ ಮಾಲಿನ್ಯದ ಮಹಾಸಾಲಕ್ಕೆ ತಲಾ ಇನ್ನಷ್ಟು ಮತ್ತಷ್ಟು ಸಾಲವನ್ನು ಸೇರಿಸಿ ಏರಿಸಿಕೊಂಡು ಹೋಗುತ್ತಿದ್ದೇವೆ. ಪ್ರಕೃತಿಯು ಸುಮ್ಮನಿರದೇ ನಿಧಾನವಾಗಿ ಸಾಲ ವಸೂಲಾತಿಗೆ ಇಳಿಯುತ್ತಿದೆ. ಹಲವು ಸಂಘಸಂಸ್ಥೆಗಳು ಜಾಗೃತಿ ಮೂಡಿಸುವ ಕೆಲಸಗಳನ್ನು ಮಾಡುತ್ತಿದ್ದರೂ ಜನ ನಿರೀಕ್ಷಿತ ಮಟ್ಟದಲ್ಲಿ ಸ್ಪಂದಿಸುತ್ತಿಲ್ಲ. ಆದ್ದರಿಂದ ನಮ್ಮ ಸ್ವೇಚ್ಛೆಗೆ ಕಡಿವಾಣ ಹಾಕಲು ದೆಹಲಿಯ ಪರಿಸರ ಸಚಿವರು ತೆಗೆದುಕೊಂಡ ನಿರ್ಧಾರವನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬೇಕಿದೆ. ಕಾರ್ಮಿಕರಿಗೆ ಸೂಕ್ತ ಪರಿಹಾರೋಪಾಯ ಒದಗಿಸುವುದನ್ನು ವ್ಯವಸ್ಥೆ ಮರೆಯಬಾರದು.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಆ ಸಾಂಸ್ಕೃತಿಕ ಮೆರುಗು ಎಲ್ಲಿ?

ಹಿಂದೆ, ಗಣೇಶನ ಹಬ್ಬ ಎಂದರೆ ಊರಿನ ಸಮಸ್ತರಿಗೂ ಸಂಭ್ರಮ. ಅವರವರ ಸಾಮರ್ಥ್ಯ ಅನುಸಾರ ಮೂರು ದಿನ, ಐದು ದಿನ, ಏಳು ದಿನ ಗಣೇಶನನ್ನು ಕೂರಿಸಿ ಪ್ರತಿದಿನ ರಾತ್ರಿ ಹರಿಕಥೆ, ಭಜನೆ, ಕೋಲಾಟ, ಗೀತಗಾಯನ ಹೀಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಜೊತೆಗೆ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಗಂಡಸರಿಗೆ ಭಾರ ಎತ್ತುವ ಸ್ಪರ್ಧೆ ನಡೆಸುತ್ತಿದ್ದರು. ಧ್ವನಿವರ್ಧಕದಲ್ಲಿ ಎಲ್ಲರೂ ಕೇಳುವಂತಹ ಹಾಡುಗಳು, ಕಥೆಗಳು ಕೇಳಿಬರುತ್ತಿದ್ದವು. ಊರಿನಲ್ಲಿ ಸಾಂಸ್ಕೃತಿಕ ವಾತಾವರಣ ಇರುತ್ತಿತ್ತು. ಗಣೇಶನನ್ನು ವಿಸರ್ಜಿಸುವ ದಿನ ಊರೆಲ್ಲಾ ಮೆರವಣಿಗೆ ಮಾಡಿ ಶಾಂತ ರೀತಿಯಲ್ಲಿ ಗಣೇಶನನ್ನು ವಿಸರ್ಜಿಸುತ್ತಿದ್ದರು.

ಆದರೆ ಈಗ ಎಲ್ಲವೂ ಬದಲಾಗಿದೆ. ಒಂದಷ್ಟು ಪಡ್ಡೆ ಹುಡುಗರು ಸೇರಿಕೊಂಡು ಬೀದಿಗೊಂದು ಕೇರಿಗೊಂದು ಗಣೇಶನನ್ನು ಕೂರಿಸುತ್ತಾರೆ. ಕರ್ಕಶವಾದ ಯಾವುದೋ ಹಾಡನ್ನು ಹಾಕಿಕೊಂಡು ಮನಬಂದಂತೆ ಕುಣಿಯುತ್ತಾರೆ. ಕುಡಿದು ಅಸಭ್ಯವಾಗಿ ವರ್ತಿಸುತ್ತಾರೆ. ಯಾರಾದರೂ ಹಿರಿಯರು ತಿಳಿವಳಿಕೆ ಹೇಳಲು ಹೋದರೆ ಅವರಿಗೆ ತಿರುಗಿ ಬೀಳುತ್ತಾರೆ. ಸಾಂಸ್ಕೃತಿಕ- ಸಾತ್ವಿಕ ಚಟುವಟಿಕೆಗಳಿಗೆ ಇಲ್ಲಿ ಅವಕಾಶವಿಲ್ಲ. ಇವನ್ನೆಲ್ಲ ಗಮನಿಸಿದಾಗ ನಮ್ಮ ಯುವಪೀಳಿಗೆ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಎದುರಾಗುತ್ತದೆ.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆತ್ಮಹತ್ಯೆ ಪರಿಹಾರವಲ್ಲ ಅದುವೇ ಸಮಸ್ಯೆ

ಪ್ರಜಾವಾಣಿ ವಾರ್ತೆ

ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಾಹಿತಿ ಪ್ರಕಾರ ಪ್ರತಿ ವರ್ಷ ಏಳು ಲಕ್ಷಕ್ಕೂ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಂಡು ತಮ್ಮ ಜೀವನ ಕೊನೆಗೊಳಿಸುತ್ತಿದ್ದಾರೆ. ಇದರ 20 ಪಟ್ಟಿಗೂ ಹೆಚ್ಚು ಮಂದಿ ಆತ್ಮಹತ್ಯೆಗೆ ಪ್ರಯತ್ನ ಮಾಡುತ್ತಾರೆ. ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಜನರು ಆತ್ಮಹತ್ಯೆ ಕುರಿತು ಯೋಚಿಸುತ್ತಿರುತ್ತಾರೆ. ತೀವ್ರ ವೇದನೆ ಅಥವಾ ಸಮಸ್ಯೆಗಳಿಂದ ಬಳಲುತ್ತಿರುವ ಲಕ್ಷಾಂತರ ಮಂದಿಯಲ್ಲಿ ಆತ್ಮಹತ್ಯಾ ಮನೋಭಾವ ಇರುತ್ತದೆ. ಇದು ಗಂಭೀರವಾದ ಮಾನಸಿಕ ಆರೋಗ್ಯ ಸಮಸ್ಯೆ.

ಪ್ರತಿಯೊಂದು ಆತ್ಮಹತ್ಯೆಯನ್ನು ಕೂಡ ಸಾರ್ವಜನಿಕ ಆರೋಗ್ಯ ಸಮಸ್ಯೆ ಎಂದು ಪರಿಗಣಿಸಲಾಗುತ್ತದೆ. ಪ್ರತಿಯೊಂದು ಆತ್ಮಹತ್ಯೆಯೂ ಆ ವ್ಯಕ್ತಿಯ ಸುತ್ತಲೂ ಇರುವವರಲ್ಲಿ ಗಾಢ ಪರಿಣಾಮವನ್ನು ಉಂಟು ಮಾಡುತ್ತದೆ. ಜನರಲ್ಲಿ ಜಾಗೃತಿ ಮೂಡಿಸಿ, ಅವರು ಮಾಹಿತಿಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾದರೆ ಆತ್ಮಹತ್ಯೆ ಪ್ರಮಾಣವನ್ನು ಗಣನೀಯವಾಗಿ ಕಡಿತ ಮಾಡಬಹುದು ಎಂಬ ವಿಶ್ವಾಸವನ್ನು ಡಬ್ಲ್ಯುಎಚ್‌ಒ ಹೊಂದಿದೆ. ಈ ಉದ್ದೇಶದಿಂದಲೇ ವಿಶ್ವ ಆತ್ಮಹತ್ಯೆ ತಡೆ ದಿನವನ್ನು ಹಮ್ಮಿಕೊಳ್ಳಲು 2003ರಲ್ಲಿ ನಿರ್ಧರಿಸಲಾಯಿತು. ಡಬ್ಲ್ಯುಎಚ್‌ಒ ಮತ್ತು ಅಂತರರಾಷ್ಟ್ರೀಯ ಆತ್ಮಹತ್ಯೆ ತಡೆ ಸಂಸ್ಥೆಯ ಸಹಯೋಗದಲ್ಲಿ ಈ ದಿನ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತದೆ.



ಸೆಪ್ಟೆಂಬರ್ 10
ವಿಶ್ವ ಆತ್ಮಹತ್ಯೆ ತಡೆ ದಿನ


ಪ್ರತಿ ವರ್ಷ ಸೆಪ್ಟೆಂಬರ್ 10ರಂದು ಆತ್ಮಹತ್ಯೆ ತಡೆ ದಿನ ಎಂದು ಘೋಷಿಸಲಾಗಿದೆ. ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳೆಲ್ಲವೂ ಜತೆಯಾಗಿ ಆತ್ಮಹತ್ಯೆಯನ್ನು ತಡೆಯಲು ಸಾಧ್ಯ ಎಂಬ ಏಕೈಕ ಧ್ಯೇಯದಿಂದ ಕೆಲಸ ಮಾಡುತ್ತವೆ. 'ಕ್ರಿಯೆಯ ಮೂಲಕ ಭರವಸೆ ಮೂಡಿಸಿ' ಎಂಬುದು 2021ರಿಂದ 2023ರವರೆಗಿನ ಧ್ಯೇಯವಾಕ್ಯವಾಗಿದೆ. ಆತ್ಮಹತ್ಯೆಗೆ ಪರ್ಯಾಯವಿದೆ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುವುದು, ಅವರಲ್ಲಿ ಆತ್ಮವಿಶ್ವಾಸ ಹಾಗೂ ಅರಿವಿನ ಬೆಳಕು ಮೂಡುವಂತೆ ಮಾಡುವುದು ಈ ಧ್ಯೇಯವಾಕ್ಯದ ಅರ್ಥವಾಗಿದೆ.

ಭೂಗೋಳಕ್ಕೆ ಸೈಕಲ್ ಸುತ್ತು: ಅಂತರರಾಷ್ಟ್ರೀಯ ಆತ್ಮಹತ್ಯೆ ತಡೆ ಸಂಸ್ಥೆಯು ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ 'ಭೂಗೋಳಕ್ಕೆ ಸೈಕಲ್ ಸುತ್ತು' ಎಂಬ ಅಭಿಯಾನವನ್ನೂ ನಡೆಸುತ್ತಿದೆ. ಸತತ ಒಂಬತ್ತನೇ ವರ್ಷಕ್ಕೆ ಇದು ಕಾಲಿಟ್ಟಿದೆ. ವಿಶ್ವ ಆತ್ಮಹತ್ಯೆ ತಡೆ ದಿನಂದು ಆರಂಭವಾಗಿ ವಿಶ್ವ ಮಾನಸಿಕ ಆರೋಗ್ಯ ದಿನದಂದು (ಅಕ್ಟೋಬರ್ 10) ಇದು ಸಮಾರೋಪಗೊಳ್ಳುತ್ತದೆ. ಜಗತ್ತಿನ ವಿವಿಧ ಭಾಗಗಳಲ್ಲಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಇದರಲ್ಲಿ ಭಾಗಿಯಾಗಿದ್ದಾರೆ, ಜಾಗೃತಿ ಮೂಡಿಸಿದ್ದಾರೆ.

ಭಾರತದ ಚಿತ್ರಣ: ಜಗತ್ತಿನ ಒಟ್ಟು ಆತ್ಮಹತ್ಯೆಗಳ ಪೈಕಿ ಶೇ 77ರಷ್ಟು ಮಧ್ಯಮ ಮತ್ತು ಕೆಳ ಆದಾಯದ ದೇಶಗಳಲ್ಲಿ ಸಂಭವಿಸುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) ಅಪಘಾತ ಮತ್ತು ಆತ್ಮಹತ್ಯೆಯಿಂದ ಸಾವು ವರದಿಯ ಪ್ರಕಾರ 2021ರಲ್ಲಿ ಭಾರತದಲ್ಲಿ 1.64 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ಲಕ್ಷ ಜನರಲ್ಲಿ 12 ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಲೆಕ್ಕಾಚಾರ ಹಾಕಲಾಗಿದೆ.


ಭಾರತದಲ್ಲಿ ವಾಸ್ತವದಲ್ಲಿ ಇನ್ನೂ ಹೆಚ್ಚು ಆತ್ಮಹತ್ಯೆಗಳು ನಡೆಯುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ. ಎಫ್‌ಐಆರ್ ದಾಖಲಾದ ಆತ್ಮಹತ್ಯೆ ಪ್ರಕರಣಗಳು ಮಾತ್ರ ಎನ್‌ಸಿಆರ್‌ಬಿ ವರದಿಯಲ್ಲಿ ಉಲ್ಲೇಖವಾಗುತ್ತವೆ. ಕುಟುಂಬದ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಬಹಿರಂಗವಾದರೆ, ಆ ಕುಟುಂಬದ ಹೆಣ್ಣು ಮತ್ತು ಗಂಡು ಮಕ್ಕಳ ಮದುವೆ ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಆತ್ಮಹತ್ಯೆಯನ್ನು ಬಹಿರಂಗಪಡಿಸದೇ ಇರಲು ಜನರು ಬಯಸುತ್ತಾರೆ. 2017ರವರೆಗೆ, ಆತ್ಮಹತ್ಯೆ ಪ್ರಯತ್ನವು ಶಿಕ್ಷಾರ್ಹ ಅಪರಾಧವಾಗಿತ್ತು. ಆತ್ಮಹತ್ಯೆಯು ಕಾನೂನು ಸಮಸ್ಯೆಗಳನ್ನು ಉಂಟು ಮಾಡಬಹುದು ಎಂಬ ಭಾವನೆಯೂ ಜನರಲ್ಲಿ ಇದೆ. ಈ ಎಲ್ಲ ಕಾರಣಗಳಿಂದ ಆತ್ಮಹತ್ಯೆ ಪ್ರಯತ್ನ ಮತ್ತು ಆತ್ಮಹತ್ಯೆಯನ್ನು ಮುಚ್ಚಿಡುವ ಸಾಧ್ಯತೆಗಳೇ ಹೆಚ್ಚು. ಜಾಗತಿಕ ಅನಾರೋಗ್ಯ ಹೊರೆ ವರದಿಯ ಪ್ರಕಾರ, ಭಾರತದಲ್ಲಿ ಶೇ 63ರಷ್ಟು ಆತ್ಮಹತ್ಯೆಗಳಷ್ಟೇ ದಾಖಲಾಗುತ್ತವೆ.

ಮಹಾರಾಷ್ಟ್ರ ಮೊದಲು, ಐದನೇ ಸ್ಥಾನದಲ್ಲಿ ಕರ್ನಾಟಕ



- ಅತಿಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾದ ರಾಜ್ಯಗಳಲ್ಲಿ ಮಹಾರಾಷ್ಟ್ರ ಮೊದಲ ಸಾಲಿನಲ್ಲಿದೆ. 2021ರಲ್ಲಿ ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳಲ್ಲಿ ಶೇ 13ರಷ್ಟು ಪ್ರಕರಣಗಳು ಮಹಾರಾಷ್ಟ್ರ ಒಂದರಲ್ಲೇ ವರದಿಯಾಗಿವೆ
- ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕವು ಅತಿಹೆಚ್ಚು ಆತ್ಮಹತ್ಯೆ ವರದಿಯಾದ ಮೊದಲ ಐದು ರಾಜ್ಯಗಳೆನಿಸಿವೆ
- ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳಲ್ಲಿ ಈ ಐದೂ ರಾಜ್ಯಗಳ ಪಾಲು ಶೇ 51ರಷ್ಟಿದೆ. ಉಳಿದೆಲ್ಲಾ ರಾಜ್ಯಗಳಲ್ಲಿ ಶೇ 49ರಷ್ಟು ಆತ್ಮಹತ್ಯೆಗಳು ವರದಿಯಾಗಿವೆ
- ಒಟ್ಟು ಆತ್ಮಹತ್ಯೆಗಳಲ್ಲಿ ಕರ್ನಾಟಕದಲ್ಲಿ ವರದಿಯಾದ ಪ್ರಕರಣಗಳ ಪ್ರಮಾಣ ಶೇ 8.15ರಷ್ಟು
- ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿ ಅತಿಕಡಿಮೆ (11) ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ

ದೇಶದಲ್ಲಿ ಆತ್ಮಹತ್ಯೆ ಹೆಚ್ಚಳದ ಕಳವಳ



ದೇಶದಾದ್ಯಂತ 2021ರಲ್ಲಿ 1.64 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2020ಕ್ಕೆ ಹೋಲಿಸಿದರೆ, ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆಯಲ್ಲಿ ಶೇ 7.2ರಷ್ಟು ಏರಿಕೆಯಾಗಿದೆ. ಆದರೆ 2017ಕ್ಕೆ ಹೋಲಿಸಿದರೆ 2021ರಲ್ಲಿ ಪ್ರಮಾಣವು ಶೇ 27.13ರಷ್ಟು ಏರಿಕೆಯಾಗಿದೆ. ಆತ್ಮಹತ್ಯೆ ತಡೆಗೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳು ಪರಿಣಾಮಕಾರಿಯಲ್ಲ ಎಂಬುದನ್ನು ಈ ಏರಿಕೆಯು ಸೂಚಿಸುತ್ತದೆ.

2017ರಲ್ಲಿ 1.29 ಲಕ್ಷ ಜನರು ಆತ್ಮಹತ್ಯೆಗೆ ಶರಣಾಗಿದ್ದರು. ಆನಂತರದಲ್ಲಿ ಪ್ರತಿ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯು 5,000ದಷ್ಟು ಏರಿಕೆ ಕಾಣುತ್ತಿತ್ತು. ಆದರೆ ಕೋವಿಡ್ ಸಾಂಕ್ರಾಮಿಕವು ತಲೆದೋರಿದ (2020) ವರ್ಷದಲ್ಲಿ ಆತ್ಮಹತ್ಯೆಗಳ ಸಂಖ್ಯೆ 15,000ದಷ್ಟು ಏರಿಕೆಯಾಗಿದೆ. ಇದು ಈವರೆಗೆ ವರ್ಷವೊಂದರಲ್ಲಿ ಆಗಿರುವ ಗರಿಷ್ಠ ಏರಿಕೆಯಾಗಿದೆ. 2021ರಲ್ಲಿ ಆತ್ಮಹತ್ಯೆಯ ಸಂಖ್ಯೆ ಏರುಗತಿಯಲ್ಲೇ ಇದೆ. 2020ಕ್ಕೆ ಹೋಲಿಸಿದರೆ 2021ರಲ್ಲಿ 10,000ದಷ್ಟು ಹೆಚ್ಚು ಜನರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕೋವಿಡ್ ಸಾಂಕ್ರಾಮಿಕ ಮತ್ತು ಅದರ ತಡೆಗೆ ಹೇರಲಾದ ಲಾಕ್‌ಡೌನ್ ಹಾಗೂ ಆತ್ಮಹತ್ಯೆಯ ಏರಿಕೆಗೂ ನೇರ ಸಂಬಂಧ ಇದೆ ಎಂದು ವಿಶ್ಲೇಷಿಸಲಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ದುಡಿಮೆಯ ಮೂಲವನ್ನು ಕಳೆದುಕೊಂಡವರಲ್ಲಿ ದಿನಗೂಲಿ ನೌಕರರ ಸಂಖ್ಯೆಯೇ ಹೆಚ್ಚು. 2020 ಮತ್ತು 2021ರಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ದಿನಗೂಲಿ ನೌಕರರ ಪ್ರಮಾಣವು ಶೇ 25.6ರಷ್ಟಿದೆ.

ಆತ್ಮಹತ್ಯೆ ದರದಲ್ಲಿ ಏರಿಕೆ: 2017ರಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಯಲ್ಲಿ 9.9ರಷ್ಟು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಆದರೆ 2021ರಲ್ಲಿ ಈ ಸಂಖ್ಯೆ 12ಕ್ಕೆ ಏರಿದೆ. ದೇಶದ ಪ್ರತಿ 1 ಲಕ್ಷ ಜನರಲ್ಲಿ 12 ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ಈ ಸಂಖ್ಯೆ ಕಡಿಮೆ ಇದೆ. ಕೆಲವು ರಾಜ್ಯಗಳಲ್ಲಿ ಈ ಸಂಖ್ಯೆ ಹೆಚ್ಚು ಇದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದ ಪ್ರತಿ ಒಂದು ಲಕ್ಷ ಜನರಲ್ಲಿ 39.7ರಷ್ಟು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ದೇಶದಲ್ಲೇ ಗರಿಷ್ಠ ಆತ್ಮಹತ್ಯೆ ದರವಾಗಿದೆ. ಬಿಹಾರದಲ್ಲಿ ಆತ್ಮಹತ್ಯೆ ದರವು ಅತ್ಯಂತ ಕಡಿಮೆ ಇದೆ. ಅಲ್ಲಿ ಪ್ರತಿ 1 ಲಕ್ಷ ಜನರಲ್ಲಿ 0.7ರಷ್ಟು ಜನರು ಆತ್ಮಹತ್ಯೆಗೆ ಶರಣಾಗಿದ್ದಾರೆ.

'ಆತ್ಮಹತ್ಯೆ ತಡೆ ಸಾಧ್ಯ'

ಭಾರತದಲ್ಲಿ ಅಷ್ಟೇ ಅಲ್ಲದೇ ಇಡೀ ಪ್ರಪಂಚದಾದ್ಯಂತ ಆತ್ಮಹತ್ಯೆಯಿಂದ ಬದುಕು ಕೊನೆಗಾಣಿಸಿಕೊಳ್ಳುವವರಲ್ಲಿ ಯುವ ಜನರೇ ಹೆಚ್ಚು. ಆತ್ಮಹತ್ಯೆಯ ಪರಿಣಾಮಗಳು ವರ್ಣಿಸಲಸದಳ, ಜೀವಕ್ಕಿಂತ ಮುಖ್ಯವಾದುದು ಯಾವುದೂ ಇಲ್ಲ, ಜೀವಂತವಾಗಿರಲು ಪ್ರತಿ ಪ್ರಾಣಿ-ಪಕ್ಷಿ ಇಡೀ ಜೀವನ ಹೋರಾಡುತ್ತದೆ. ಅಂತಹದರಲ್ಲಿ ಮನುಷ್ಯ ಸ್ವತಃ ತನ್ನ ಜೀವನವನ್ನೇ ಕೊನೆಗಾಣಿಸಿಕೊಂಡಲ್ಲಿ ಅವರನ್ನು ಅವಲಂಬಿಸಿದ ಪ್ರೀತಿ ಪಾತ್ರರ ಭವಿಷ್ಯವನ್ನು ಕತ್ತಲೆಯೆಡೆಗೆ ದೂಡಿದಂತಯೇ ಸರಿ. ಆತ್ಮಹತ್ಯೆ ನಿಯಂತ್ರಣ ಅಸಾಧ್ಯವಲ್ಲ. ಪ್ರತಿ ವ್ಯಕ್ತಿಯ ಜೀವನದಲ್ಲಿ ವಿವಿಧ ಸಂದರ್ಭಗಳಲ್ಲಿ-ಸನ್ನಿವೇಶಗಳಲ್ಲಿ, ಸೋಲು-ನಿರಾಸೆ- ಹತಾಶೆಗಳು ಬಂದೇ ಬರುತ್ತದೆ. ಬಡತನ-ಸಿರಿತನ ಹೊರತುಪಡಿಸಿಯೂ ಅನೇಕ ಸನ್ನಿವೇಶಗಳು ಆತ್ಮಹತ್ಯೆಯ ದಾರಿಯನ್ನು ಹೆಚ್ಚಿಸುತ್ತವೆ. ಆದರೆ, ಛಲವು ಎಂತಹವರನ್ನೂ ಬದುಕಿಸುತ್ತದೆ. ಅದನ್ನು ಭರವಸೆ, ಉತ್ಸಾಹ ಎಂದೆಲ್ಲ ಹೇಳಬಹುದು.


ಮಾನಸಿಕ ಆರೋಗ್ಯದ ಪಾತ್ರ ಬಹುಮುಖ್ಯವಾದುದು. ನಿಮ್ಮ ಸುತ್ತಲಿನ ಯಾರಲ್ಲೇ ಆದರೂ ಖಿನ್ನತೆ ಕಂಡು ಬಂದರೆ, ತಕ್ಷಣ ಅವರೊಂದಿಗೆ ಮಾತಾಡಿ ಖಿನ್ನತೆಗೆ ಕಾರಣವನ್ನು ಅವರದೇ ಆದ ಮಾರ್ಗದಲ್ಲಿ ತಿಳಿಯುವ ಪ್ರಯತ್ನ ಮಾಡಬೇಕು. ಅವರ ಹತ್ತಿರದವರಿಗೆ, ಸಂಬಂಧಿಕರಿಗೆ ಇದನ್ನು ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಶಾಲಾ-ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಉನ್ನತ ವಿದ್ಯಾಭ್ಯಾಸ ಕೇಂದ್ರಗಳಲ್ಲಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ರೈತಾಪಿ ಜನಗಳಲ್ಲಿ ಎಲ್ಲಾದರೂ ಸರಿ ಖಿನ್ನತೆಯ ವ್ಯಕ್ತಿಗಳನ್ನು ಗುರುತಿಸುವ ಕೆಲಸ ಮಾಡಿದರೆ, ಅದೆಷ್ಟೋ ಆತ್ಮಹತ್ಯೆಗಳನ್ನು ತಡೆಯಬಹುದು.

ಡಾ. ಜಿ. ಎಸ್. ವೇಣುಮಾಧವ, ಮುಖ್ಯಸ್ಥ, ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪುರುಷರಲ್ಲೇ ಹೆಚ್ಚು

ಆತ್ಮಹತ್ಯೆಗೆ ಶರಣಾದವರಲ್ಲಿ ಪುರುಷರ ಪ್ರಮಾಣವೇ ಹೆಚ್ಚು. 2021ರಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಪ್ರಮಾಣ ಶೇ 72.6ರಷ್ಟಿದೆ. ಮಹಿಳೆಯರ ಪ್ರಮಾಣ ಶೇ 27.4ರಷ್ಟು. ಬಹುತೇಕ ಎಲ್ಲಾ ವಯಸ್ಸಿನ ವರ್ಗದಲ್ಲೂ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು ಇದೆ.

ಆದರೆ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಬಾಲಕಿಯರ ಸಂಖ್ಯೆಯೇ ಹೆಚ್ಚು. ಈ ವರ್ಗದಲ್ಲಿ ಆತ್ಮಹತ್ಯೆಗೆ ಶರಣಾದ ಬಾಲಕರ ಪ್ರಮಾಣ ಶೇ 47ರಷ್ಟಿದ್ದರೆ, ಬಾಲಕಿಯರ ಪ್ರಮಾಣ ಶೇ 53ರಷ್ಟಿದೆ. ಈ ವರ್ಗದಲ್ಲಿ ಬಹುತೇಕ ಮಂದಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಕ್ಕೆ, ಪ್ರೇಮ ವಿಫಲವಾಗಿದ್ದಕ್ಕೆ, ತೀವ್ರ ಅನಾರೋಗ್ಯದ ಸಮಸ್ಯೆಯಿಂದ ಬಳಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. 18-45 ವರ್ಷದ ಮಹಿಳೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಹೆಚ್ಚು ಇದೆ. ಈ ವಯೋವರ್ಗದ ಒಟ್ಟು 30,217 ಮಹಿಳೆಯರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ವಯಸ್ಸಿನ ಮಹಿಳೆಯರಲ್ಲಿ ಬಹುತೇಕ ಮಂದಿ ಆತ್ಮಹತ್ಯೆ




ಮಾಡಿಕೊಂಡಿರುವುದು ವಿವಾಹಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ. ಹಲವರು ವರದಕ್ಷಿಣೆ ಕಿರುಕುಳದಿಂದ ಪ್ರಾಣಬಿಟ್ಟಿದ್ದಾರೆ. ಉಳಿದವರು ಮಕ್ಕಳು ಆಗಿಲ್ಲ ಎಂಬ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ವರದಕ್ಷಿಣೆ ನಿಷೇಧ ಕಾಯ್ದೆಯು ಪರಿಣಾಮಕಾರಿಯಾಗಿ ಜಾರಿಯಾಗದೇ ಇರುವುದನ್ನು ಇದು ಸೂಚಿಸುತ್ತದೆ.

ಆಧಾರ: ಎನ್‌ಸಿಆರ್‌ಬಿಯ 'ಅಪಘಾತದ ಸಾವುಗಳು ಮತ್ತು ಆತ್ಮಹತ್ಯೆಗಳು–2021'ರ ವರದಿ, ವಿಶ್ವ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ಆತ್ಮಹತ್ಯೆ ತಡೆ ಸಂಸ್ಥೆ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು



'ಭಾರತ್ ಜೋಡೊ ಯಾತ್ರಾ' ಕಾರ್ಯಕ್ರಮವು ಕಾಂಗ್ರೆಸ್ ಪಕ್ಷಕ್ಕೆ ಚೇತರಿಸಿಕೊಳ್ಳಲು ನೆರವಾಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 220

ಶ್ರೀಕೃಷ್ಣನ ಮಗನಾಗಿ ಮನ್ಮಥ

ಪತಿ ಮನ್ಮಥನ ಸಾವಿನಿಂದ ದುಃಖಿತಳಾದ ರತಿಯು ರೋದಿಸುತ್ತಿದ್ದಳು. ಆ ವಿಲಾಪವನ್ನು ಕೇಳಿದ ಪರ್ವತಾದಿಗಳಿಗೂ ದುಃಖವಾಯಿತೆಂದರೆ, ಅವಳು ಯಾವ ಪರಿ ದುಃಖಿಸುತ್ತಿದ್ದಳೆಂಬುದನ್ನು ಊಹಿಸಬಹುದಾಗಿತ್ತು.

ರತಿಯ ದುಃಖಶಮನಕ್ಕಾಗಿ ದೇವತೆಗಳು 'ಎಲೈ ರತಿದೇವಿ, ನಿನ್ನ ಗಂಡನ ಭಸ್ಮವನ್ನು ಸ್ವಲ್ಪ ತೆಗೆದುಕೊಂಡು ರಕ್ಷಿಸು. ಶಂಕರನ ಮನ ಕರಗಿದರೆ ನಿನ್ನ ಪತಿ ಮತ್ತೆ ಬದುಕುತ್ತಾನೆ. ನಾವೆಲ್ಲರೂ ಮಾಡಿದ ಕರ್ಮಕ್ಕನುಸಾರವಾಗಿ ಸುಖದುಃಖಗಳನ್ನ ಅನುಭವಿಸುತ್ತೇವೆ. ಇದಕ್ಕೆ ಬೇರೆಯವರು ಕಾರಣ ಅನ್ನೋದು ನೆಪವಷ್ಟೆ. ಆದ್ದರಿಂದ ನೀನು ವೃಥಾ ದೇವತೆಗಳ ಮೇಲೆ ತಪ್ಪನ್ನು ಹೊರಿಸುತ್ತಾ ಕಾಲಹರಣ ಮಾಡಬೇಡ' ಎಂದು ಸಮಾಧಾನಿಸುತ್ತಾರೆ.

ನಂತರ ದೇವತೆಗಳು ಶಿವನ ಬಳಿಗೆ ಬಂದು, 'ಓ ಪರಮೇಶ್ವರನೆ, ಮನ್ಮಥ ತನ್ನ ಸ್ವಾರ್ಥಕ್ಕಾಗಿ ನಿನ್ನ ಮನಸ್ಸು ವಿಚಲಿತವಾಗುವಂತೆ ಮಾಡಲಿಲ್ಲ. ದುಷ್ಟನಾದ ತಾರಕಾಸುರನಿಂದ ಪೀಡಿತರಾದ ನಾವು ಮನ್ಮಥನಿಂದ ಈ ಕಾರ್ಯವನ್ನು ಮಾಡಿಸಿದೆವು. ಇದರಲ್ಲಿ ಮನ್ಮಥನ ತಪ್ಪೇನೂ ಇಲ್ಲ. ನೀನು ಕ್ರೋಧದಿಂದ ಮನ್ಮಥನನ್ನು ಸುಟ್ಟದ್ದರಿಂದ ದೇವತೆಗಳೆಲ್ಲರ ಆಸೆ ಭಸ್ಮಮಾಡಿದಂತಾಗಿದೆ. ರತಿದೇವಿಯ ದುಃಖವನ್ನು ನೋಡಿ ದೇವತೆಗಳು ಮೃತಪ್ರಾಯರಾದಂತಾಗಿರುವರು. ರತೀದೇವಿಯ ಶೋಕವನ್ನು ನೀನು ಹೋಗಲಾಡಿಸಬೇಕು' ಎಂದು ದೇವತೆಗಳು ಪ್ರಾರ್ಥಿಸಿದರು.

ಶಿವ ಪ್ರಸನ್ನನಾಗಿ ಹೇಳಿದ, 'ನನ್ನ ಕೋಪದಿಂದ ಭಸ್ಮವಾದ ಮನ್ಮಥ ಮತ್ತೆ ಬರುತ್ತಾನೆ. ಅದಕ್ಕಾಗಿ ನೀವೆಲ್ಲ ದ್ವಾಪರ ಯುಗದವರೆಗೂ ಸಾವಧಾನದಿಂದಿರಬೇಕು. ಅಲ್ಲಿಯವರೆಗೂ ಮನ್ಮಥ ಅನಂಗ(ಶರೀರವಿಲ್ಲದೆ) ನಾಗಿಯೇ ಇರುತ್ತಾನೆ. ಶ್ರೀಕೃಷ್ಣನು ದ್ವಾರಕೆಯಲ್ಲಿ ರಾಜ್ಯಭಾರಮಾಡುವಾಗ ಅವನ ಪಟ್ಟದರಸಿಯಾದ ರುಕ್ಮಿಣಿಯಲ್ಲಿ ಮನ್ಮಥ ಜನಿಸುತ್ತಾನೆ. ಆ ಮಗುವೆ ಪ್ರದ್ಯುಮ್ನ. ಮಗು ಹುಟ್ಟಿದ ತಕ್ಷಣವೇ ಶಂಬರನೆಂಬ ದೈತ್ಯ ಅಪಹರಿಸುತ್ತಾನೆ. ನಂತರ ಆ ಮಗುವನ್ನು ಮೂಢನಾದ ಶಂಬರಾಸುರ ಸಮುದ್ರದಲ್ಲಿ ಎಸೆದು, ಸತ್ತುಹೋಯಿತೆಂದು ತಿಳಿದು ತನ್ನ ನಗರಕ್ಕೆ ತೆರಳುತ್ತಾನೆ.


'ಎಲೈ ರತೀದೇವಿ, ಅಲ್ಲಿಯವರೆಗೆ ನೀನು ಆ ಶಂಬರಾಸುರನ ನಗರದಲ್ಲಿಯೇ ಇರಬೇಕು. ಅಲ್ಲಿಯೇ ನಿನ್ನ ಪತಿಯಾದ ಪ್ರದ್ಯುಮ್ನನು ನಿನಗೆ ಲಭಿಸುವನು. ಅಲ್ಲಿ ಕಾಮನು ಪ್ರದ್ಯುಮ್ನನ ರೂಪದಿಂದ ನಿನ್ನೊಡನೆ ಸೇರಿ ಶಂಬರಾಸುರನನ್ನು ಸಂಹರಿಸುತ್ತಾನೆ. ಶಂಬರಾಸುರನ ಐಶ್ವರ್ಯವೆಲ್ಲವನ್ನೂ ತೆಗೆದುಕೊಂಡು ನಿನ್ನೊಡನೆ ತನ್ನ ದ್ವಾರಕಾ ನಗರಕ್ಕೆ ತೆರಳುವನು' ಎಂದು ಮನ್ಮಥ ಮುಂದಿನ ಜನ್ಮದಲ್ಲಿ ಶ್ರೀಕೃಷ್ಣನ ಮಗ ಪ್ರದ್ಯುಮ್ನನಾಗಿ ಹುಟ್ಟುವನೆಂಬ ಭವಿಷ್ಯ ಪ್ರಕಟಿಸಿದ.

ಶಂಕರನು ಹೇಳಿದ ಮಾತನ್ನು ಕೇಳಿ ದೇವತೆಗಳು ಸ್ವಲ್ಪ ಸಮಾಧಾನಗೊಂಡು ಮತ್ತೆ ವಿನಯದಿಂದ, 'ಓ ಮಹಾದೇವನೆ, ಮನ್ಮಥನ ಮತ್ತೆ ಜನಿಸಿ ಬರುವವರೆಗೂ ಅವನ ಆತ್ಮವನ್ನು ಕಾಪಾಡು. ರತಿಯ ಪ್ರಾಣವನ್ನು ರಕ್ಷಿಸು' ಎಂದು ಮತ್ತೆ ಬೇಡಿಕೊಳ್ಳುತ್ತಾರೆ. ದೇವತೆಗಳ ಮಾತುಗಳನ್ನು ಕೇಳಿ ಪರಮೇಶ್ವ 'ಎಲೈ ದೇವತೆಗಳಿರಾ, ರಹಸ್ಯವಾಗಿ ಮನ್ಮಥನನ್ನು ಬದುಕಿಸುವೆ. ಅವನು ನನ್ನ ಗಣವಾಗಿದ್ದು ನಿತ್ಯವೂ ನನ್ನ ಜೊತೆಯೇ ವಿಹರಿಸುವನು. ನಾನು ಈಗ ಹೇಳಿದ ಆಖ್ಯಾನವನ್ನು ಯಾರಿಗೂ ಹೇಳಬಾರದು' ಎಂದು ಎಚ್ಚರಿಸಿದ.

ಶಿವನ ಮಾತಿನಿಂದ ಸಂತುಷ್ಟರಾದ ದೇವತೆಗಳು ಸ್ವರ್ಗಕ್ಕೆ ತೆರಳಿದರೆ, ರತೀದೇವಿಯು ರುದ್ರ ಹೇಳಿದ ಶಂಬರಾಸುರನ ನಗರಿಗೆ ಹೋದಳು. ಅಲ್ಲಿ ಮನ್ಮಥ ಬರುವ ಕಾಲವನ್ನು ನಿರೀಕ್ಷಿಸುತ್ತಾ ಕಾಲಕಳೆಯುತ್ತಿದ್ದಳು.

ಇಲ್ಲಿಗೆ ಶ್ರೀಶಿವಪುರಾಣದ ಪಾರ್ವತೀಖಂಡದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಚತುರ್ದಶಿ ಗಂ. 18-08 ನಕ್ಷತ್ರ: ಧನಿಷ್ಠಾ ಗಂ. 11-35 ಯೋಗ: ಸುಕರ್ಮ ಗಂ. 18-11, ಕರಣ: ಗರಜೆ ಗಂ. 07-34, ಸಿಂಹ ಮಾಸದ 23 ನೇ ದಿನ. ರಾಹುಕಾಲ : ಬೆಳಿಗ್ಗೆ 10:30–12:00 ಸೂರ್ಯೋದಯ : 06-23 ಸೂರ್ಯಾಸ್ತ : 06-33 ಮುಸ್ಲಿಂ ದಿನಾಂಕ : 12 ಸಫರ್

ದಿನ ವಿಶೇಷ : ಅನಂತ ಚತುರ್ದಶಿ, ಓಣಮ್ ಮೂರನೇ ದಿನ, ಇಂದ್ರ ಪೂರ್ಣಿಮಾ

ಅದೃಷ್ಟ ಸಂಖ್ಯೆ : 5, 6

ಮೇಷ: ಅನ್ಯರ ಸಹಾಯವಿಲ್ಲದೆ ಸ್ವ ಸಾಮರ್ಥ್ಯದಿಂದ ಕೆಲಸ ಗಿಟ್ಟಿಸಿಕೊಳ್ಳುವಿರಿ. ಹೂಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಪಡೆಯಬಹುದು. ಕರಾರು ಇನ್ನಿತರ ಒಪ್ಪಂದಗಳನ್ನು ಎರಡು ಬಾರಿ ಪರಿಶೀಲಿಸಿ ಒಪ್ಪಿಕೊಳ್ಳಿ.

ವೃಷಭ: ಸಣ್ಣ-ಪುಟ್ಟ ವಿಷಯಗಳಿಗೂ ಹೆಚ್ಚಿನ ಮಹತ್ವ ಕೊಡ ಬೇಕಾಗುವುದು. ನಿಮ್ಮ ಈ ಹಿಂದಿನ ನಿಸ್ವಾರ್ಥ ಕೆಲಸಗಳಿಗೆ ಪ್ರತಿಫಲಗಳು ಬರಲಾರಂಭಿಸುವುದು ಅನುಭವಕ್ಕೆ ಬರಲಿದೆ. ಸಹಕಾರ ಮನೋಭಾವದಿಂದ ನೆಮ್ಮದಿ.

ಮಿಥುನ: ಲಾಭ ನಷ್ಟಗಳ ಲೆಕ್ಕಾಚಾರದಲ್ಲೇ ಮುಳುಗಿರುವುದಕ್ಕಿಂತ ಸೌಲಭ್ಯಗಳ ಕಡೆಗೆ ಗಮನಹರಿಸಿ. ಮನೆಯ ರಿಪೇರಿಯ ಬಗ್ಗೆ ಆಲೋಚಿಸಿ. ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಹಿಡಿತದಲ್ಲಿರಿ.

ಕರ್ಕಾಟಕ: ಈ ದಿನದ ಕೆಲ ಅಂಶಗಳ ಬಗ್ಗೆ ಗಂಭೀರವಾದ ನಿಲುವು ತೆಗೆದು-ಕೊಳ್ಳಬೇಕಾಗುವುದು. ಮಾತಿನ ಕೌಶಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ. ವೃತ್ತಿಪರವಾಗಿ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗಲಿದೆ.

ಸಿಂಹ: ಅವಕಾಶಗಳು ಅರಸಿ ಬಂದರೂ ಸರಿಯಾದದನ್ನು ಆಯ್ಕೆ ಮಾಡುವುದರಲ್ಲಿ ದುಡುಕುವ ಲಕ್ಷಣಗಳಿರುವುದು. ಆಸ್ತಿ ಖರೀದಿಯ ವಿಚಾರದಲ್ಲಿ ಸಮಂಜಸವಾದ ನಿರ್ಧಾರಕ್ಕೆಗೊಳ್ಳುವಿರಿ

ಕನ್ಯಾ: ಒತ್ತಡಗಳಿಂದ ಹೊರಬರುವಿರಿ. ಸದಾ ನಿಮ್ಮ ಬೆಂಬಲಕ್ಕೆ ನಿಲ್ಲುವ ಗೆಳೆಯನೊಬ್ಬ ಸಿಗಲಿದ್ದಾನೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯ ಬೇಕಾದ ಸಂದರ್ಭ ಎದುರಾಗುವುದು. ಯೋಜನೆಗಳು ಚಾಲನೆಗೊಳ್ಳಲಿದೆ.

ತುಲಾ: ಸುಗಂಧ ವಸ್ತುಗಳ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಹೆಚ್ಚಿನ ಆದಾಯ ದೊರಕುವುದು. ಸಿಬ್ಬಂದಿಯೊಂದಿಗಿನ ಮುಕ್ತ ಮಾತುಕತೆ ಕಾರ್ಯಾನುಕೂಲ ಉಂಟುಮಾಡಲಿದೆ.

ವೃಶ್ಚಿಕ: ಸಹಚರರಲ್ಲಿನ ವಾದ ವಿವಾದಗಳಲ್ಲಿ ಸೋಲನ್ನು ಎದುರು ನೋಡಿದರೂ, ಅದರಿಂದಾಗಿ ತಪ್ಪು ತಿಳಿವಳಿಕೆಗಳು ದೂರಾಗಲಿದೆ. ಡಿಸೈನಿಂಗ್ ಕ್ಷೇತ್ರದವರಿಗೆ ಉತ್ತಮ ಅವಕಾಶಗಳು ಲಭಿಸಲಿದೆ. ಮಕ್ಕಳಿಂದ ಸಂತಸ.

ಧನು: ಈ ದಿನ ನಿಮಗೆ ಆಸಕ್ತಿ ತರುವ ಕೆಲವು ವಿಚಾರಗಳು ತಿಳಿದು ಬರಲಿದೆ. ನಿಮ್ಮೊಂದಿಗೆ ವ್ಯವಹರಿಸುವ ವ್ಯಕ್ತಿಯ ಪೂರ್ವಾಪರ ವಿಚಾರ ತಿಳಿದಿರುವುದು ಉತ್ತಮ. ಹಿರಿಯರೊಬ್ಬರು ಮಾರ್ಗದರ್ಶನ ನೀಡುವರು.

ಮಕರ: ಆಹಾರದಲ್ಲಿನ ಬದಲಾವಣೆಯಿಂದಾಗಿ ದೇಹದಲ್ಲಿನ ಉಷ್ಣವ್ಯಾಧಿ ನಿವಾರಣೆಯಾಗುವುದು. ಹಿಂದಿನ ನೋವಿನ ಸಂಗತಿಗಳೆಲ್ಲಾ ಕಳೆದು ನಲಿವಿನ ದಿನ ಇದಾಗಲಿದೆ. ನಿರಂತರ ಕೆಲಸಗಳಿಂದಾಗಿ ವಿಶ್ರಾಂತಿ ಬೇಕೆನಿಸಲಿದೆ.

ಕುಂಭ: ಮಾನಸಿಕ ಅಸ್ಥಿರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿದ್ದ ಉದಾಸೀನತೆ ಇಂದು ದೂರಾಗಲಿದೆ. ಆರ್ಥಿಕ ವಿಚಾರದಲ್ಲಿ ತಕ್ಕ ಮಟ್ಟಿನ ಸುಧಾರಣೆ ಕಾಣುವಿರಿ. ಧೈರ್ಯದಿಂದ ಕಾರ್ಯ ಪ್ರವೃತ್ತರಾದಲ್ಲಿ ಇಷ್ಟಾರ್ಥ ಸಿದ್ಧಿಸಲಿದೆ.

ಮೀನ: ಮನೆ ಬದಲಾವಣೆಯ ಯೋಜನೆಯಲ್ಲಿರುವವರಿಗೆ ಉತ್ತಮ ಸ್ಥಳದಲ್ಲಿ ಉತ್ತಮ ದರದಲ್ಲಿ ಪ್ರಾಪ್ತಿಯಾಗಲಿದೆ. ಕೆಲಸ ಕಾರ್ಯಗಳು ವಿಳಂಬ ನೀತಿಯನ್ನು ತೊರೆದು ಸರಾಗವಾಗಿ ನಡೆಯಲಿದೆ. ಆರ್ಥಿಕವಾಗಿ ಮುನ್ನಡೆ ಇದೆ.



ಬೆರಗಿನ ಬೆಳಕು

ಗುರುರಾಜ ಕರಜಗಿ

ಭರತಾದರ್ಶ

ಧರೆಯೇ ಕೋಸಲ, ಪರಬ್ರಹ್ಮನೇ ರಘುವರನು |
ಭರತನವೊಲನುಪಾಲನಕ್ರಿಯರು ನಾವು ||
ಅರಸನೂಳಿಗ ನಮ್ಮ ಸಂಸಾರದಾಡಳಿತ |
ಹರುಷದಿಂ ಸೇವಿಸೆಲೊ – ಮಂಕುತಿಮ್ಮ ||711||

ಪದ-ಅರ್ಥ: ಭರತನವೊಲನುಪಾಲನಕ್ರಿಯ-ರು = ಭರತನವೊಲ್ (ಭರತನಂತೆ) + ಅ-ನುಪಾಲನಕ್ರಿಯರು(ಆಜ್ಞಾಪಾಲಕರು), ಅರಸನೂಳಿಗ = ಅರಸನ + ಊಳಿಗ(ಸೇವೆ), ಸಂಸಾರದಾಡಳಿತ = ಸಂಸಾರದ + ಆಡಳಿತ.

ವಾಚ್ಯಾರ್ಥ: ಜಗತ್ತೇ ಕೋಸಲ ದೇಶ. ರಾಮಚಂದ್ರನೇ ಪರಬ್ರಹ್ಮ. ಭರತನಂತೆ ಭಗವಂತನ ಆಜ್ಞೆಯನ್ನು ಪಾಲಿಸುವ ಸೇವಕರು ನಾವು. ಅರಸನ ಸೇವೆಯೇ ನಮ್ಮ ಸಂಸಾರದ ವ್ಯವಹಾರ. ಅದನ್ನು ಹರ್ಷದಿಂದ ಅನುಭವಿಸಬೇಕು.

ವಿವರಣೆ: ಭರತನ ಬಗ್ಗೆ ಐದಾರು ಮುಕ್ತಕಗಳನ್ನು ರಚಿಸಿದ ಡಿ.ವಿ.ಜಿ, ಈ ಕಗ್ಗದಲ್ಲಿ ಅವನ ಉದಾತ್ತ ಜೀವನವನ್ನು ನಮ್ಮ ಬದುಕುಗಳಿಗೆ ಸಮನ್ವ-ಯಿಸುತ್ತಾರೆ. ಶ್ರೀರಾಮ ಕೋಸಲದೇಶದ ರಾಜ. ತಮ್ಮ ಭರತ, ಅವನ ಪರಮ ಬಂಧು ಮಾತ್ರವಲ್ಲ ಪರಮದಾಸ. ಅಣ್ಣನಾದ ಶ್ರೀರಾಮನ ಮಾತುಗಳನ್ನು ಕೊಂಚವೂ ತೆಗೆದುಹಾಕದೆ ಸೇವೆಮಾಡಿದವನು ಭರತ. ನಮ್ಮ ಬದುಕೂ ಭರತನ ಬದುಕಂತೆ ಆಗಬೇಕು.

ನಮಗೆ ಇಡೀ ಪ್ರಪಂಚವೇ ಕೋಸಲ ದೇಶ. ಅದಕ್ಕೆ ರಾಜ ರಾಮನಿದ್ದಂತೆ, ಜಗತ್ತಿಗೆ ಒಡೆಯ ಭಗವಂತ, ಪರಬ್ರಹ್ಮ. ನಾವೂ ಭರತನಂತೆ ಭಗವಂತನ ಆಜ್ಞೆಗಳ ಅನುಪಾಲನಕ್ರಿಯರು. ನಮ್ಮ ಸಂಸಾರದ ನಡವಳಿಕೆಯೆಂದರೆ ಅದು ಕೇವಲ ಪರಬ್ರಹ್ಮದ ಸೇವೆ. ಸಂಸಾರದ ಪ್ರತಿಯೊಂದು ಕೆಲಸವೂ ಭಗವಂತನ ಸೇವೆಯೆಂದೇ ನಡೆಯಬೇಕು. ನಿಜವಾದ ಭಕ್ತ ಯಾವ ಲೋಕೋಪಕಾರದ ಕೆಲಸ ಮಾಡಿದರೂ ಶಿವತತ್ವವನ್ನೇ ಮೆರೆಯುತ್ತಾನೆಂದು ಬಸವೋತ್ತರ ಯುಗದ ಮಹತ್ವದ ವಚನಕಾರ ಷಣ್ಮುಖಸ್ವಾಮಿ ಹೇಳುತ್ತಾನೆ.

ಜಗದ ಮಧ್ಯದಲ್ಲಿ ಶರಣ ಜನಿಸಿದಡೇನು ಆ ಜಗದ ಸ್ವರೂಪನೆ? ಅಲ್ಲಲ್ಲ. ಅದೇನು ಕಾರಣವೆಂದೊಡೆ: ಕೋಗಿಲೆಯ ತತ್ತಿಯನೊಡೆದು ಕಾಗೆ ಮರಿಯ ಮಾಡಿ ಸಲಹಿದಡೇನು ಅದು ತನ್ನ ಕೋಗಿಲೆಯ ಹಿಂಡ ಕೂಡುವುದಲ್ಲದೆ ಮರಳಿ ಕಾಗೆಯ ಹಿಂಡ ಬೆರೆವುದೆ ಹೇಳಾ ? ಲೋಕದ ಮಧ್ಯದಲ್ಲಿ ಅನಾದಿ ಶರಣನು ಲೋಕೋಪಕಾ-ರಕ್ಕಾಗಿ ಜನಿಸಿದಡೇನು ತನ್ನ ಮುನ್ನಿನ ಶಿವತತ್ವವ ಬೆರೆವನಲ್ಲದೆ ಮರಳಿ ಲೋಕವ ಬೆರೆಯನು ನೋಡಾ ನಿಮ್ಮನರಿದ ಶಿವಜ್ಞಾನಿ ಶರಣನು ಅಖಂಡೇಶ್ವರಾ. ರಾಮಾಣಯದ ಕೊನೆಯಲ್ಲಿ ಲಕ್ಷ್ಮಣ ಇಂದ್ರಸಭೆ-ಯನ್ನು ಪ್ರವೇಶಿಸಿದಾಗ ಇಂದ್ರನ ಪಕ್ಕದಲ್ಲಿ ಕೈಕೇಯಿ ಕುಳಿತದ್ದನ್ನು ಕಾಣುತ್ತಾನೆ. ಅವನಿಗೆ ಕೋಪ.

ರಾಮಾಯಣದ ಎಲ್ಲ ಅನಾಹುತಕ್ಕೆ ಕಾರಣ ವಾದವಳಿಗೆ ಏಕೆ ಇಂಥ ವಿಶೇಷ ಮರ್ಯಾದೆ ಎಂದು ಕೇಳುತ್ತಾನೆ. ಆಗ ಇಂದ್ರ ಹೇಳುತ್ತಾನೆ, "ಭರತನ ತಾಯಿಗೆ ಇದಕ್ಕಿಂತ ಕಡಿಮೆಯ ಸ್ಥಾನ ದೊರಕೀತೇ?" ಆ ಮಾತು ಭರತನ ಪಾತ್ರವನ್ನು ಥಟ್ಟನೇ ಆಕಾಶಕ್ಕೇರಿಸಿಬಿಡುತ್ತದೆ. ಅಣ್ಣನ ಸೇವೆಗೈಯ್ಯುತ್ತಲೇ ಮಹಾತ್ಮನಾದವನು ಭರತ. ಅವನ ಬದುಕು ನಮಗೆ ಆದರ್ಶ.

ಪದಬಂಧ 5074


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ಇದಂತೂ ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ತಿಗರಿಯ ಹತ್ತಿರವಿರುವ ಪತಿವ್ರತೆ (3)
13.ನೇತ್ರ ಇಲ್ಲಿ ಕಾಣುತ್ತಿದೆ (3)
15.ಕುಯುಕ್ತಿಯಿಂದ ಎಗರಿಸಿದ ಕಪ್ಪೆ ಚಿಪ್ಪು! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಉತ್ಸವದಲ್ಲಿ ಗುಲಾಮ ಎರಚಿರುವ ಕೆಂಪು ಬಣ್ಣ (3)
18.ಕರು ತಿನ್ನುತ್ತಿರುವ ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ

2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ಓಲಗಶಾಲೆಯಲ್ಲಿ ಕಾಣಿಸಿರುವ ವಾಚಕ (3)
10ಸ್ನೇಹಿತೆ ಇಲ್ಲಿದ್ದಾಳೆ (3)
12.ಆನೆಯ ದಾಡೆ (3)
14.ನಲಿಯುತ್ತಿರುವ ನಮ್ಮ ರಾಷ್ಟ್ರ ಪಕ್ಷಿ (3)
15.ಸೊಣಗ ಇಲ್ಲಿಗೆ ಬಂದಿದೆಯಲ್ಲಾ? (3)



5073ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭರತಿ 6.ಬೇಜವಾಬ್ದಾರಿ
7.ವಲ್ಲರಿ 10.ಪ್ರಾಯೋಪವೇಶ
15.ಸಂಕರ 16.ಭವಬಂಧನ
17.ರವಾನೆ

ಮೇಲಿಂದ ಕೆಳಕ್ಕೆ:
1.ಭರವಸೆ 2.ತಿಗರಿ
3.ಸೋಂಬೇರಿ 4.ಸವಾಲು
5.ಪರಿಚ್ಛೇದ 8.ಪ್ರಯೋಗ
9.ಪ್ರವೇಶ 11.ಪ್ರಲೋಭನ
12.ಅರಮನೆ 13.ಸಂಬಂಧ
14.ಅನರ್ಘ 15.ಸಂಸಾರ

ಸುಡೊಕು 5460

	7			3		1		6
4		9						
	1		7		2		5	4
		3	5		6	4		
	4						6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5459 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಮುಂಬೈ ಧಾರಣೆ

ಶೇಂಗಾ

8–9–2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1100 (1150)
ಪಾಮ್ ವಾರದ ಡೆಲಿವರಿ	945 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)


ಅಪರಂಜಿ ಚಿನ್ನ 10ಗ್ರಾಂ

50,600 (50,300)

ಬೆಳ್ಳಿ ಕೆ.ಜಿ 54,350 (53,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,624
ಇಂದಿನ ಅಂತ್ಯ	17,798
▲	174
ದಿನದ ಗರಿಷ್ಠ	17,807

ವಿನಿಮಯ ದರ

$ ಡಾಲರ್	79.69
£ ಪೌಂಡ್	91.63
€ ಯುರೊ	79.69
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹452

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1620 (1620)
ಸೋಯಾ (ರಿಫೈಂಡ್)	₹1180 (1210)
ಸೂರ್ಯಕಾಂತಿ (ರಿಫೈಂಡ್)	₹1380 (1400
ಪಾಮೋಲಿನ್	₹947 (965)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹130

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-635
ದ್ವಿತಳಿ (ಬಿ.ವಿ)	₹251-865

ಷೇರು ಮೌಲ್ಯ ₹ 10 ಆದಾಗ ವಿಐಎಲ್ ಷೇರು ಸ್ವಾಧೀನ

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಕಂಪನಿಯ ಷೇರು ಮೌಲ್ಯವು ₹ 10 ಅಥವಾ ಅದಕ್ಕೂ ಹೆಚ್ಚಿನ ಮಟ್ಟದಲ್ಲಿ ಸ್ಥಿರಗೊಂಡಾಗ ಕೇಂದ್ರ ಸರ್ಕಾರವು ಕಂಪನಿಯ ಷೇರುಪಾಲನ್ನು ಸ್ವಾಧೀನಪಡಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಷೇರು ಮೌಲ್ಯವು ಏಪ್ರಿಲ್ 19ರ ನಂತರ ₹ 10ಕ್ಕಿಂತ ಕಡಿಮೆ ಮಟ್ಟದಲ್ಲಿದೆ. ಸಾಲದ ಸುಳಿಗೆ ಸಿಲುಕಿರುವ ಕಂಪನಿಯು ಕೇಂದ್ರಕ್ಕೆ ಪಾವತಿ ಮಾಡಬೇಕಿರುವ ₹ 16 ಸಾವಿರ ಕೋಟಿ ಬಡ್ಡಿಯ ಬದಲು ಕಂಪನಿಯ ಶೇ 33ರಷ್ಟು ಷೇರುಗಳನ್ನು ವರ್ಗಾವಣೆ ಮಾಡಲು ತೀರ್ಮಾನಿಸಿದೆ. ಈ ವರ್ಗಾವಣೆಯ ನಂತರ ಕಂಪನಿಯಲ್ಲಿ ಪ್ರವರ್ತಕರ ಷೇರು ಪಾಲು ಶೇ 50ಕ್ಕೆ ಇಳಿಕೆಯಾಗುತ್ತದೆ.

1,500ಕ್ಕೂ ಅಧಿಕ ತಂತ್ರಜ್ಞರ ನೇಮಕ ಅಟ್ಲಾಸಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ತನ್ನ ವಹಿವಾಟಿನ ಬೆಳವಣಿಗೆಗಾಗಿ 2023–24ನೇ ಹಣಕಾಸು ವರ್ಷದ ಒಳಗಾಗಿ 1,500ಕ್ಕೂ ಅಧಿಕ ಜನರಿಗೆ ಉದ್ಯೋಗ ನೀಡಲಾಗುವುದು ಎಂದು ಆಸ್ಟ್ರೇಲಿಯಾದ ಪ್ರಮುಖ ಸಾಫ್ಟ್‌ವೇರ್ ಕಂಪನಿಯಾಗಿರುವ ಅಟ್ಲಾಸಿಯನ್ ಕಾರ್ಪೊರೇಷನ್ ಗುರುವಾರ ಹೇಳಿದೆ.

2018ರಲ್ಲಿ ಭಾರತದಲ್ಲಿ ವಹಿವಾಟು ಆರಂಭಿಸಿದ ಕಂಪನಿಯು ಸದ್ಯ 1,400ಕ್ಕೂ ಹೆಚ್ಚಿನ ನೌಕರರನ್ನು ಹೊಂದಿದೆ. ಸ್ಥಳೀಯವಾಗಿ ಇನ್ನಷ್ಟು ಬೆಳವಣಿಗೆ ಸಾಧಿಸುವ ಸಲುವಾಗಿ ಎಂಜಿನಿಯರಿಂಗ್, ಉತ್ಪನ್ನಗಳು ಮತ್ತು ವಿನ್ಯಾಸ ಸೇರಿದಂತೆ ಹಲವು ವಿಭಾಗಗಳಲ್ಲಿ ದೇಶದಾದ್ಯಂತ ಹೊಸಬರನ್ನು, ಅನುಭವಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದೆ.

‘ಭಾರತದ ತಂತ್ರಜ್ಞಾನ ಕೌಶಲವು ವಿಶ್ವದರ್ಜೆಯದ್ದಾಗಿದೆ. ವೇಗವಾಗಿ ಬೆಳವಣಿಗೆ ಕಾಣುತ್ತಿರುವ ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿಗೆ ಭಾರತವು ನೆಲೆಯಾಗಿದೆ. ಹೀಗಾಗಿ, ದೇಶದಾದ್ಯಂತ ನಾವು ನೇಮಕಾತಿ ನಡೆಸಲಿದ್ದೇವೆ’ ಎಂದು ಕಂಪನಿಯ ಸಹಸ್ಥಾಪಕ ಮೈಕ್ ಕ್ಯಾನನ್ ಬ್ರೂಕ್ಸ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಾಗತಿಕ ವಹಿವಾಟು ವಿಸ್ತರಣೆಯ ಭಾಗವಾಗಿ 2025–26ರ ವೇಳೆಗೆ ಒಟ್ಟು ಸಿಬ್ಬಂದಿ ಸಂಖ್ಯೆಯನ್ನು 25 ಸಾವಿರಕ್ಕೆ ಹೆಚ್ಚಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

‘ರಿಮೋಟ್ ಮತ್ತು ಹೈಬ್ರಿಡ್ ಕೆಲಸದ ಮಾದರಿಗಳಿಗೆ ಅನುಗುಣವಾಗಿ ಕಂಪನಿಯು 2020ರಲ್ಲಿ ‘ಟೀಮ್ ಎನಿವೇರ್’ ಸೌಲಭ್ಯ ಪರಿಚಯಿಸಿದೆ. ಇದರಿಂದಾಗಿ ಉದ್ಯೋಗಿಗಳು ಮನೆಯಿಂದ, ಕಚೇರಿಯಿಂದ ಅಥವಾ ಎರಡೂ ಕಡೆಗಳಿಂದ ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ದೊರೆತಿದೆ. ಇದರಿಂದಾಗಿಯೇ ದೇಶದಾದ್ಯಂತ ಹೊಸಬರನ್ನು ನೇಮಕ ಮಾಡಿಕೊಳ್ಳಲು ಕಂಪನಿಯ ಸಾಮರ್ಥ್ಯ ಹೆಚ್ಚಾಗಿದೆ’ ಎಂದು ಕಂಪನಿಯ ಭಾರತದ ಮುಖ್ಯಸ್ಥ ದಿನೇಶ್ ಅಜ್ಮೆರಾ ಮಾಹಿತಿ ನೀಡಿದರು.

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಬ್ಯಾಂಕಿಂಗ್, ಐ.ಟಿ. ಮತ್ತು ಆಟೊ ಷೇರು ಖರೀದಿ ಹೆಚ್ಚಳ

ಸೆನ್ಸೆಕ್ಸ್, ನಿಫ್ಟಿ ಶೇ 1ರಷ್ಟು ಚೇತರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಐ.ಟಿ. ಮತ್ತು ಆಟೊ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿಸಿದ ಪರಿಣಾಮವಾಗಿ ದೇಶದ ಷೇರುಪೇಟೆಗಳು ಗುರುವಾರದ ವಹಿವಾಟಿನಲ್ಲಿ ಶೇಕಡ 1ರಷ್ಟು ಗಳಿಕೆ ಕಂಡುಕೊಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 659 ಅಂಶ ಏರಿಕೆ ಕಂಡು 59,688 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 174 ಅಂಶ ಹೆಚ್ಚಾಗಿ 17,798 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ವಿದೇಶಿ ಬಂಡವಾಳ ಒಳಹರಿವು ಮತ್ತು ಕಚ್ಚಾ ತೈಲ ದರ ಇಳಿಕೆಯು ಹೂಡಿಕೆ ಚಟುವಟಿಕೆ ಹೆಚ್ಚಾಗುವಂತೆ ಮಾಡಿದವು ಎಂದು ವಿಶ್ಲೇಷಕರು ಹೇಳಿದ್ದಾರೆ.



‘ಹಣದುಬ್ಬರ ಏರಿಕೆ ಆಗಲಿದೆ ಎನ್ನುವ ಹೂಡಿಕೆದಾರ ಆತಂಕ ಕಡಿಮೆ ಆಗಿರುವುದರಿಂದ ಹಾಗೂ ಕಚ್ಚಾ ತೈಲ ದರ ಇಳಿಕೆ ಕಂಡಿರುವುದರಿಂದ ಜಾಗತಿಕ ಮಾರುಕಟ್ಟೆಗಳಲ್ಲಿ ವಹಿವಾಟು ಏರಿಕೆ ಕಂಡಿತು. ಇದರಿಂದಾಗಿ ಭಾರತದ ಹಣಕಾಸು ಮಾರುಕಟ್ಟೆಗಳು ಸಹ ಸಕಾರಾತ್ಮಕ ಹಾದಿಗೆ ಮರಳಿದವು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ, ಸೋಲ್ ಮತ್ತು ಟೋಕಿಯೊ ಮಾರುಕಟ್ಟೆಗಳು ಗಳಿಕೆ ಕಂಡರೆ, ಶಾಂಘೈ ಮತ್ತು ಹಾಂಕಾಂಗ್ ಷೇರುಪೇಟೆಗಳು ನಷ್ಟ ಅನುಭವಿಸಿದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.49ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 87.57 ಡಾಲರ್‌ಗೆ ತಲುಪಿತು.

ಬಂಡವಾಳ ಮೌಲ್ಯ ವೃದ್ಧಿ: ಮುಂಬೈ ಷೇರುಪೇಟೆಯ ಸಕಾರಾತ್ಮಕ ವಹಿವಾಟಿನಿಂದ ಹೂಡಿಕೆದಾರರ ಸಂಪತ್ತು ಮೌಲ್ಯ ₹ 1.79 ಲಕ್ಷ ಕೋಟಿ ಹೆಚ್ಚಾಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ಸಾರ್ವಕಾಲಿಕ ದಾಖಲೆ ಮಟ್ಟವಾದ ₹ 282.66 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಮುಖ್ಯಾಂಶಗಳು

- ಟೆಕ್ ಮಹೀಂದ್ರ ಷೇರು ಮೌಲ್ಯ ಶೇ 3.23ರಷ್ಟು ಏರಿಕೆ
- ಬಿಎಸ್‌ಇ ಸ್ಮಾಲ್, ಮಿಡ್ ಕ್ಯಾಪ್ ಏರಿಕೆ

ಬಿಎಸ್‌ಇ ವಲಯವಾರು ಗಳಿಕೆ (%)

ಬ್ಯಾಂಕ್	1.94
ಹಣಕಾಸು	1.54
ಟೆಕ್	1.04
ಐ.ಟಿ.	1.02
ಟೆಲಿಕಾಂ	0.71

ಸಂಕ್ಷಿಪ್ತ ಸುದ್ದಿ

‘ಹಣದುಬ್ಬರ ನಿಯಂತ್ರಿಸಲು ರಷ್ಯಾ ತೈಲ ಆಮದು’

ನವದೆಹಲಿ (ರಾಯಿಟರ್ಸ್): ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದು ಹಣದುಬ್ಬರವನ್ನು ನಿಯಂತ್ರಿಸುವ ಕಾರ್ಯತಂತ್ರದ ಒಂದು ಭಾಗ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಬೇರೆ ದೇಶಗಳೂ ಈ ಬಗೆಯ ಕಾರ್ಯತಂತ್ರದ ಮೊರೆ ಹೋಗಿವೆ ಎಂದು ಅವರು ತಿಳಿಸಿದ್ದಾರೆ.

ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಫೆಬ್ರುವರಿಗೆ ಮೊದಲು ಶೇ 2ರಷ್ಟು ಇದಿದ್ದು ಈಗ ಶೇ 12ರಿಂದ ಶೇ 13ಕ್ಕೆ ಏರಿಕೆ ಆಗಿದೆ ಎಂದು ಹೇಳಿದ್ದಾರೆ.

ವಿದ್ಯುತ್ ದರದ ಮೇಲೆ ಮಿತಿ: ಲಿಜ್ ಟ್ರಸ್



ಲಿಜ್ ಟ್ರಸ್

ಲಂಡನ್ (ಎಪಿ): ‘ನಾಗರಿಕರ ಜೀವನ ನಿರ್ವಹಣೆ ವೆಚ್ಚ ತಗ್ಗಿಸುವ ಉದ್ದೇಶದಿಂದ ಸರ್ಕಾರವು ಗೃಹ ಹಾಗೂ ವಾಣಿಜ್ಯ ಬಳಕೆಯ ವಿದ್ಯುತ್ ದರಗಳ ಮೇಲೆ ಮಿತಿ ಹೇರಲು ನಿರ್ಧರಿಸಿದೆ’ ಎಂದು ಬ್ರಿಟನ್‌ನ ನೂತನ ಪ್ರಧಾನಿ ಲಿಜ್ ಟ್ರಸ್ ಗುರುವಾರ ಸಂಸತ್ತಿನಲ್ಲಿ ತಿಳಿಸಿದ್ದಾರೆ.

‘ಎರಡು ವರ್ಷಗಳ ಅವಧಿಯ ‘ಇಂಧನ ದರ ಖಾತರಿ’ ನೀತಿ ಅನ್ವಯ ಮನೆಯೊಂದರ ವಾರ್ಷಿಕ ಸರಾಸರಿ ವಿದ್ಯುತ್ ಬಿಲ್ 2,500 ಪೌಂಡ್ಸ್ (₹2.29 ಲಕ್ಷ) ಮೀರುವಂತಿಲ್ಲ. ನಾವು ಬೆಲೆ ಏರಿಕೆಯ ಮೂಲವನ್ನು ಹುಡುಕಿ ಅದಕ್ಕೆ ಕಡಿವಾಣ ಹಾಕಲು ಪ್ರಯತ್ನಿಸುತ್ತೇವೆ. ಸದ್ಯದ ಬಿಕ್ಕಟ್ಟಿನಿಂದ ದೇಶವನ್ನು ಮೇಲಕ್ಕೆ ಎತ್ತಲಿದ್ದೇವೆ’ ಎಂದು ಹೇಳಿದ್ದಾರೆ.

‘ಆಸ್ಪತ್ರೆ ಹಾಗೂ ಶಾಲೆಗಳಂತಹ ಸಾರ್ವಜನಿಕ ಮತ್ತು ವಾಣಿಜ್ಯ ಸಂಸ್ಥೆಗಳಿಗೂ ಸರ್ಕಾರದ ಬೆಂಬಲ ಸಿಗಲಿದೆ. ಈ ಸಂಸ್ಥೆಗಳಿಗೆ ವಿದ್ಯುತ್ ದರ ಮಿತಿ ನಿಯಮ ಆರು ತಿಂಗಳ ಅವಧಿಗಷ್ಟೇ ಅನ್ವಯವಾಗಲಿದೆ. ಹಣದುಬ್ಬರ ದರ ಪ್ರಮಾಣವನ್ನು ತಗ್ಗಿಸಲು ಈ ನಿಯಮ ಸಹಕಾರಿಯಾಗಲಿದೆ’ ಎಂದಿದ್ದಾರೆ.

ಭಾರತ –ಚೀನಾ ಸೇನಾ ವಾಪಸಾತಿ ಪ್ರಕ್ರಿಯೆ ಆರಂಭ

ನವದೆಹಲಿ: ಪೂರ್ವ ಲಡಾಖ್‌ನ ಗೋಗ್ರಾ -ಹಾಟ್ ಸ್ಪ್ರಿಂಗ್ಸ್ ಗಡಿ ಪ್ರದೇಶದಿಂದ ಸೇನಾ ವಾಪಸಾತಿ ಪ್ರಕ್ರಿಯೆ ಆರಂಭಗೊಂಡಿದೆ ಎಂದು ಭಾರತ ಮತ್ತು ಚೀನಾದ ಸೇನೆ ಗುರುವಾರ ತಿಳಿಸಿದೆ.

ಗಸ್ತು ಪಾಯಿಂಟ್ 15ರಲ್ಲಿ (ಪಿಪಿ 15) ಎರಡು ವರ್ಷಗಳಿಂದ ಉಭಯ ದೇಶಗಳು ಸೈನಿಕರನ್ನು ನಿಯೋಜಿಸಿದ್ದವು.

ಜುಲೈ ತಿಂಗಳಲ್ಲಿ ನಡೆದಿದ್ದ 16ನೇ ಸುತ್ತಿನ ಉನ್ನತ ಮಟ್ಟದ ಸೇನಾ ಮಾತುಕತೆಯ ಪರಿಣಾಮವಾಗಿ ಈ ಪ್ರದೇಶದಿಂದ ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳಲಾಗುತ್ತಿದೆ ಎಂದು ಉಭಯ ದೇಶಗಳು ಹೇಳಿಕೆಯಲ್ಲಿ ತಿಳಿಸಿವೆ.ಗಡಿಯಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ಸೇನಾ ಪಡೆಯ ವಾಪಸಾತಿ ಪ್ರಕ್ರಿಯೆ ಯೋಜಿತ ರೀತಿಯಲ್ಲಿ ನಡೆಯುತ್ತಿದೆ ಎಂದೂ ಹೇಳಿವೆ.

ಉಜ್ಬೇಕಿಸ್ತಾನದಲ್ಲಿ ಮುಂದಿನ ವಾರ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ(ಎಸ್‌ಸಿಒ) ಶೃಂಗಸಭೆಯಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸುವ ಸಾಧ್ಯತೆ ಇದ್ದು, ಇದಕ್ಕೆ ಪೂರ್ವಭಾವಿಯಾಗಿ ಈ ಘೋಷಣೆ ಹೊರಬಂದಿದೆ.

ಇಂದಿನಿಂದ ಜಾರಿಗೆ: ಕೇಂದ್ರ ಸರ್ಕಾರ ಮಾಹಿತಿ

ಅಕ್ಕಿ ರಫ್ತಿಗೆ ಶೇ 20ರಷ್ಟು ತೆರಿಗೆ

ನವದೆಹಲಿ (ಪಿಟಿಐ): ದೇಶದಿಂದ ರಫ್ತಾಗುವ ಅಕ್ಕಿಗೆ ಕೇಂದ್ರ ಸರ್ಕಾರವು ಶೇಕಡ 20ರಷ್ಟು ತೆರಿಗೆ ವಿಧಿಸಿದೆ. ಬಾಸ್ಮತಿ ಅಕ್ಕಿ, ಕುಚ್ಚಲು ಅಕ್ಕಿಗೆ ಈ ತೆರಿಗೆ ಇಲ್ಲ. ದೇಶಿ ಮಾರುಕಟ್ಟೆಯಲ್ಲಿ ಅಕ್ಕಿಯ ಲಭ್ಯತೆ ಹೆಚ್ಚು ಇರುವಂತೆ ನೋಡಿಕೊಳ್ಳಲು ಕೇಂದ್ರವು ಈ ಕ್ರಮ ಕೈಗೊಂಡಿದೆ.

ಮುಂಗಾರು ಹಂಗಾಮಿನಲ್ಲಿ ಭತ್ತ ಬಿತ್ತನೆಯ ಪ್ರದೇಶ ಇಳಿಕೆಯಾಗಿದೆ. ತೆರಿಗೆ ವಿಧಿಸುವ ಬಗ್ಗೆ ಕೇಂದ್ರ ರೆವಿನ್ಯು ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ರಫ್ತು ತೆರಿಗೆಯು ಶುಕ್ರವಾರದಿಂದ ಜಾರಿಗೆ ಬರಲಿದೆ ಎಂದು ಅಧಿಸೂಚನೆ ಹೇಳಿದೆ. ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ಭತ್ತ ಬಿತ್ತನೆ ಆಗಿರುವ ಪ್ರದೇಶದ ಪ್ರಮಾಣವು ಶೇಕಡ 5.62ರಷ್ಟು ಕಡಿಮೆ ಆಗಿದೆ. ಕೆಲವು ರಾಜ್ಯಗಳಲ್ಲಿ ಮಳೆ ಸರಿಯಾಗಿ ಆಗಿಲ್ಲದಿರುವುದು ಇದಕ್ಕೆ ಕಾರಣ ಎಂದು ಕೇಂದ್ರ ಕೃಷಿ ಸಚಿವಾಲಯ ಹೇಳಿದೆ.

ಜಾಗತಿಕ ಅಕ್ಕಿ ವ್ಯಾಪಾರದಲ್ಲಿ ಭಾರತದ ಪಾಲು ಶೇಕಡ 40ರಷ್ಟು ಇದೆ. ಚೀನಾ ನಂತರ ಅತಿಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆಯುವುದು ಭಾರತದಲ್ಲಿ. ಭಾರತವು 2021–22ರಲ್ಲಿ ಒಟ್ಟು 150ಕ್ಕೂ ಹೆಚ್ಚು ದೇಶಗಳಿಗೆ ಅಕ್ಕಿ (ಬಾಸ್ಮತಿ ಹೊರತುಪಡಿಸಿ) ರಫ್ತು ಮಾಡಿದೆ.

ಕೇಂದ್ರದ ಕ್ರಮವನ್ನು ಸ್ವಾಗತಿಸಿರುವ ಅಖಿಲ ಭಾರತ ಅಕ್ಕಿ ರಫ್ತುದಾರರ ಸಂಘದ ಮಾಜಿ ಅಧ್ಯಕ್ಷ ವಿಜಯ್ ಸೇತಿಯಾ, ‘ಭಾರತದ ಅಕ್ಕಿಯನ್ನು ಬಹಳ ಕಡಿಮೆ ಬೆಲೆಗೆ ರಫ್ತು ಮಾಡಲಾಗುತ್ತಿತ್ತು. ಭತ್ತ ಬೆಳೆಯುವ ಪ್ರದೇಶ ಕಡಿಮೆಯಾಗಿರುವ ಕಾರಣ ಈ ತೀರ್ಮಾನ ಒಳ್ಳೆಯದು’ ಎಂದು ಹೇಳಿದ್ದಾರೆ.

ಈ ತೀರ್ಮಾನದಿಂದಾಗಿ ಕುಚ್ಚಲು ಅಕ್ಕಿಯ ರಫ್ತು ಹೆಚ್ಚಾಗಬಹುದು ಎಂದು ಸಂಘದ ಹಾಲಿ ಅಧ್ಯಕ್ಷ ನಾತಿರಾಮ್ ಗುಪ್ತ ಹೇಳಿದ್ದಾರೆ. ಕೇಂದ್ರ ಸರ್ಕಾರವು ಗೋಧಿಯ ರಫ್ತಿನ ಮೇಲೆ ಈಗಾಗಲೇ ನಿರ್ಬಂಧ ಹೇರಿದೆ.

ಮುಖ್ಯಾಂಶಗಳು

- ದೇಶದಲ್ಲಿ ಲಭ್ಯತೆ ಹೆಚ್ಚಿಗೆ ಇರುವಂತೆ ಮಾಡಲು ಕ್ರಮ
- ಮುಂಗಾರು ಹಂಗಾಮಿನಲ್ಲಿ ಭತ್ತ ಬಿತ್ತನೆ ಪ್ರಮಾಣ ಇಳಿಕೆ
- ಜಾಗತಿಕ ಅಕ್ಕಿ ವ್ಯಾಪಾರದಲ್ಲಿ ಭಾರತದ ಪಾಲು ಶೇ 40

‘ಮುಕ್ತ ಇಂಡೊ–ಪೆಸಿಫಿಕ್: ಭಾರತ, ಜಪಾನ್ ಕಾರ್ಯತಂತ್ರದ ಪಾಲುದಾರಿಕೆ’

ಟೋಕಿಯೊ(ಪಿಟಿಐ): ಚೀನಾ ತನ್ನ ಸೇನಾ ಬಲ ಹೆಚ್ಚಿಸುತ್ತಿರುವಾಗ, ಭಾರತ ಮತ್ತು ಜಪಾನ್ ಮುಕ್ತ ಇಂಡೊ–ಪೆಸಿಫಿಕ್ ಒಳಗೊಂಡಂತೆ ತಮ್ಮ ಗಡಿ ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆಗಾಗಿ ವಿಶೇಷ ಕಾರ್ಯತಂತ್ರ ಹಾಗೂ ಜಾಗತಿಕ ಪಾಲುದಾರಿಕೆ ಅನುಸರಿಸುವುದು ಬಹುಮುಖ್ಯ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುರುವಾರ ಹೇಳಿದರು.

ಜಪಾನ್‌ಗೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ರಾಜನಾಥ ಸಿಂಗ್, ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು 2 + 2 ಸಚಿವರ ಸಭೆಯಲ್ಲಿ ಭಾಗವಹಿಸಿ, ಭಾರತದ ಇಂಡೊ–ಪೆಸಿಫಿಕ್ ಸಾಗರಗಳ ಉಪ ಕ್ರಮವು (ಐಪಿಒಐ) ಜಪಾನ್‌ನ ಮುಕ್ತ ಮತ್ತು ತೆರೆದ ಇಂಡೊ–ಪೆಸಿಫಿಕ್ ನೊಂದಿಗೆ (ಎಫ್‌ಒಐಪಿ) ಹಲವು ಸಮಾನ ಅಂಶಗಳನ್ನು ಹೊಂದಿದೆ. ಉಭಯ ರಾಷ್ಟ್ರಗಳ ಬಾಂಧವ್ಯಕ್ಕೆ ಮುಕ್ತ, ನಿಯಮಾಧಾರಿತ ಮತ್ತು ಸಮಗ್ರ ಇಂಡೊ–ಪೆಸಿಫಿಕ್ ಪ್ರದೇಶ ಬಹಳ ಮುಖ್ಯ ಎನ್ನುವುದನ್ನು ನಂಬಿದ್ದೇವೆ ಎಂದರು.



ಜಪಾನ್‌ನ ಟೋಕಿಯೊದಲ್ಲಿ ಗುರುವಾರ ದ್ವಿಪಕ್ಷೀಯ ರಕ್ಷಣಾ ಸಹಕಾರ ಸಭೆಯಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಜಪಾನ್ ರಕ್ಷಣಾ ಸಚಿವ ಯಸುಕಜು ಹಮಡ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ರಕ್ಷಣಾ ಸಹಕಾರ, ಜಂಟಿ ಸೇನಾ ತಾಲೀಮಿಗೆ ಸಮ್ಮತಿ: ದ್ವಿಪಕ್ಷೀಯ ರಕ್ಷಣಾ ಸಹಕಾರ ಹಾಗೂ ಯುದ್ಧ ವಿಮಾನಗಳ ಜಂಟಿ ಸಮರಾಭ್ಯಾಸ ಸೇರಿ ಹೆಚ್ಚಿನ ಸೇನಾ ತಾಲೀಮು ನಡೆಸಲು ಭಾರತ ಮತ್ತು ಜಪಾನ್ ಒಪ್ಪಂದ ಮಾಡಿಕೊಂಡಿವೆ.

ರಾಜನಾಥ ಸಿಂಗ್ ಮತ್ತು ಜಪಾನ್ ರಕ್ಷಣಾ ಸಚಿವ ಯಸುಕಜು ಹಮಾಡ ಅವರು 90 ನಿಮಿಷಗಳ ಕಾಲ ನಡೆದ ಸಭೆಯಲ್ಲಿ, ಉಭಯ ರಾಷ್ಟ್ರಗಳ ವಾಯು ಪಡೆಗಳ ನಡುವೆ ಸಮನ್ವಯ ಸಾಧಿಸಲು ಜಂಟಿ ಸೇನಾ ತಾಲೀಮಿಗೆ ಸಮ್ಮತಿಸಿದರು.

ಚೀನಾದ ಆಕ್ರಮಣಕಾರಿ ನಡೆಯ ಮಧ್ಯೆ, ಮುಕ್ತ, ತೆರೆದ ಮತ್ತು ನಿಯಮಾಧಾರಿತ ಇಂಡೊ–ಪೆಸಿಫಿಕ್ ಪ್ರದೇಶ ಖಾತ್ರಿಗೆ ನಿರ್ಣಾಯಕ ಪಾತ್ರ ವಹಿಸಲು ಉಭಯ ರಾಷ್ಟ್ರಗಳು ವಿಶೇಷ ವ್ಯೂಹಾತ್ಮಕ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ದೃಢ ಹೆಜ್ಜೆ ಇರಿಸಿವೆ.

ಯುರೋಪ್ ರಾಷ್ಟ್ರಗಳಿಗೆ ₹22 ಸಾವಿರ ಕೋಟಿ ಸೇನಾ ನೆರವು

ಕೀವ್ (ಎಪಿ): ರಷ್ಯಾದ ಸೇನಾ ದಾಳಿಗೆ ಸಿಲುಕಿರುವ ಉಕ್ರೇನ್ ಮತ್ತು ಸಂಭವನೀಯ ದಾಳಿಯ ಆತಂಕದಲ್ಲಿರುವ ಇತರ ಐರೋಪ್ಯ ದೇಶಗಳಿಗೆ ಅಮೆರಿಕ ಸುಮಾರು ₹22 ಸಾವಿರ ಕೋಟಿಗೂ (2.8 ಬಿಲಿಯನ್ ಡಾಲರ್) ಹೆಚ್ಚಿನ ರಕ್ಷಣಾ ನೆರವನ್ನು ಹೊಸದಾಗಿ ಘೋಷಿಸಿದೆ.

ಯುದ್ಧ ಪೀಡಿತ ಉಕ್ರೇನ್ ರಾಜಧಾನಿ ಕೀವ್‌ಗೆ ಗುರುವಾರ ಭೇಟಿ ನೀಡಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಅವರು ಅಧ್ಯಕ್ಷ ಜೋ ಬೈಡನ್ ಆಡಳಿತ ಹೊಸದಾಗಿ ನೀಡುತ್ತಿರುವ ರಕ್ಷಣಾ ನೆರವಿನ ಪ್ಯಾಕೇಜ್ ಅನ್ನು ಪ್ರಕಟಿಸಿದರು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಬ್ಲಿಂಕನ್ ಸಭೆ ನಡೆಸಿದರು.

ಉಕ್ರೇನ್ ಜನರು ತಮ್ಮ ನೆಲದ ರಕ್ಷಣೆಗೆ ಎಲ್ಲಿಯವರೆಗೂ ಹೋರಾಟ ನಡೆಸುತ್ತಾರೊ ಅಲ್ಲಿಯವರೆಗೂ ಬೈಡನ್ ಸರ್ಕಾರ ಅಗತ್ಯ ನೆರವು ಮತ್ತು ಬೆಂಬಲ ನೀಡಲಿದೆ ಎಂದು ಬ್ಲಿಂಕನ್ ಆಶ್ವಾಸನೆ ನೀಡಿದರು.

ಅಮೆರಿಕ: 82 ಸಾವಿರ ವಿದ್ಯಾರ್ಥಿಗಳಿಗೆ ವೀಸಾ

ಚೆನ್ನೈ: 2022ನೇ ಸಾಲಿನಲ್ಲಿ ಇದುವರೆಗೂ ಭಾರತದ ಒಟ್ಟು 82,000 ವಿದ್ಯಾರ್ಥಿಗಳಿಗೆ ಅಮೆರಿಕಕ್ಕೆ ತೆರಳಲು ವೀಸಾ ಸಿಕ್ಕಿದ್ದು, ಇದು ದಾಖಲೆಯಾಗಿದೆ. ರಾಯಭಾರ ಕಚೇರಿ, ನಾಲ್ಕು ನಗರಗಳಲ್ಲಿರುವ ಕಾನ್ಸುಲೇಟ್ ಕಚೇರಿಗಳ ಮೂಲಕ ವೀಸಾಗಳನ್ನು ನೀಡಲಾಗಿದೆ.

ಇಲ್ಲಿನ ಕಾನ್ಸುಲೇಟ್ ಕಚೇರಿ ಈ ಬಗ್ಗೆ ಹೇಳಿಕೆ ನೀಡಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಆದ್ಯತೆ ಮೇರೆಗೆ ವೀಸಾ ನೀಡಲು ಕ್ರಮವಹಿಸಲಾಗಿದೆ ಎಂದಿದೆ.

ಕಳವಾಗಿದ್ದ ವಿಗ್ರಹಗಳು ಅಮೆರಿಕ ಮ್ಯೂಸಿಯಂನಲ್ಲಿ ಪತ್ತೆ

ಚೆನ್ನೈ (ಪಿಟಿಐ): ಕುಂಭಕೋಣಂನ ದೇವಸ್ಥಾನವೊಂದರಿಂದ ಕಳವಾಗಿದ್ದ ಕಾಳಿಂಗಮರ್ದನ ಕೃಷ್ಣ, ವಿಷ್ಣು ಹಾಗೂ ಶ್ರೀದೇವಿ ಕಂಚಿನ ಪುರಾತನ ಮೂರ್ತಿಗಳು ಅಮೆರಿಕದ ಮ್ಯೂಸಿಯಂ ಹಾಗೂ ಹರಾಜು ಮಳಿಗೆಯೊಂದರಲ್ಲಿ ದೊರೆತಿದೆ ಎಂದು ಅಪರಾಧ ತನಿಖಾ ಇಲಾಖೆಯ ವಿಗ್ರಹ ಕಳವು ಪತ್ತೆ ವಿಭಾಗದ ಅಧಿಕಾರಿಗಳು ಹೇಳಿದ್ದಾರೆ.

ಕುಂಭಕೋಣಂನ ಅರುಳ್‌ಮಿಗು ಸೌಂದರರಾಜ ಪೆರುಮಾಳ್ ದೇವಸ್ಥಾನದಿಂದ ಕಳವಾಗಿದ್ದ ಕೃಷ್ಣನ ವಿಗ್ರಹವು ಸ್ಯಾನ್ ಫ್ರಾನ್ಸಿಸ್ಕೊ ಏಷಿಯನ್ ಆರ್ಟ್ ಮ್ಯೂಸಿಯಂನಲ್ಲಿ, ವಿಷ್ಣು ವಿಗ್ರಹವು ಟೆಕ್ಸಾಸ್‌ನ ಕಿಂಬೆಲ್ ಆರ್ಟ್ ಮ್ಯೂಸಿಯಂ ಹಾಗೂ ಶ್ರೀದೇವಿ ವಿಗ್ರಹವು ಫ್ಲೋರಿಡಾದ ಹರಾಜು ಮಳಿಗೆಯಲ್ಲಿ ಪತ್ತೆಯಾಗಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-47500

ಕುಮಟ

ಚಿಪ್ಪು	27869-36489
ಕೋಕ	22000-34275
ಹಳೆಚಾಲಿ	46599-47199
ಹೊಸಚಾಲಿ	38160-43509

ಪುತ್ತೂರು

ಹೊಸತು	34500-47500

ಸಾಗರ

ಬಿಳಿಗೋಟು	27389-35166
ಚಾಲಿ	37099-41599
ಕೋಕ	28989-38169
ಕೆಂಪುಗೋಟು	30499-40099
ರಾಶಿ	38989-54409
ಸಿಪ್ಪೆಗೋಟು	7899-23309

ಸಿದ್ದಾಪುರ

ಚಿಪ್ಪು	28699-34699
ಚಾಲಿ	40169-43999
ಕೋಕ	26789-35382
ರಾಶಿ	49599-52999
ತಟ್ಟಿಬೆಟ್ಟೆ	42199-50079

ಶಿವಮೊಗ್ಗ

ಗೊರಬಲು	18000-39699
ರಾಶಿ	50049-55009

ಯಲ್ಲಾಪುರ

ಚಿಪ್ಪು	28699-35311
ಚಾಲಿ	38019-44899
ಕೋಕ	18000-33799
ಕೆಂಪುಗೋಟು	28313-37055
ರಾಶಿ	49900-56930
ತಟ್ಟಿಬೆಟ್ಟೆ	40599-48009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16250	223.25 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4500	4700	2238 ಡಾಲರ್ಸ್

ಕ್ರಿಕೆಟ್: ಅಫ್ಗಾನಿಸ್ತಾನ ಎದುರು ಗೆದ್ದ ಭಾರತ: ಭುವನೇಶ್ವರ್‌ಗೆ ಐದು ವಿಕೆಟ್

ವಿರಾಟ್ ಕೊಹ್ಲಿ ಶತಕ ಸಂಭ್ರಮ

ದುಬೈ (ಪಿಟಿಐ): ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ಎರಡೂವರೆ ವರ್ಷಗಳ ನಂತರ ಶತಕದ ಸಂಭ್ರಮ ಆಚರಿಸಿದರು. ದುಬೈ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದಲ್ಲಿ ನಡೆದ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ವಿರಾಟ್ ಅಜೇಯ ಶತಕ ದಾಖಲಿಸಿದರು.

ಟೂರ್ನಿಯ ಫೈನಲ್ ಪ್ರವೇಶದ ಅವಕಾಶವನ್ನು ಈಗಾಗಲೇ ಕಳೆದುಕೊಂಡಿರುವ ಭಾರತ ತಂಡವು ಅಫ್ಗನ್ ಎದುರು 101 ರನ್‌ಗಳ ಜಯದೊಂದಿಗೆ ಅಭಿಯಾನ ಮುಗಿಸಿತು.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ವಿರಾಟ್ ಹೊಡೆದ ಮೊದಲ ಶತಕ ಇದು. ಚುಟುಕು ಕ್ರಿಕೆಟ್‌ನಲ್ಲಿ ಅವರು ಮೂರು ವರ್ಷಗಳ ಹಿಂದೆ ಹೈದರಾಬಾದ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗಳಿಸಿದ್ದ ಅಜೇಯ 94 ರನ್‌ಗಳೇ ಇದುವರೆಗಿನ ಶ್ರೇಷ್ಠ ವೈಯಕ್ತಿಕ ಸ್ಕೋರ್ ಆಗಿತ್ತು.

ಅವರ ವೃತ್ತಿಜೀವನದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗಳಿಸಿದ 71ನೇ ಶತಕವೂ ಇದಾಗಿದೆ. ಅವರು 2019ರ ನವೆಂಬರ್ 22ರಂದು ಕೋಲ್ಕತ್ತದಲ್ಲಿ ನಡೆದಿದ್ದ ಬಾಂಗ್ಲಾದೇಶ ಎದುರಿನ ಟೆಸ್ಟ್‌ನಲ್ಲಿ 70ನೇ ಶತಕ ಗಳಿಸಿದ್ದರು.

ಇಲ್ಲಿ 53 ಎಸೆತಗಳಲ್ಲಿ ಶತಕದ ಗಡಿ ದಾಟಿದ ವಿರಾಟ್, ತಮ್ಮ ಹೆಲ್ಮೆಟ್ ತೆಗೆದು ಬ್ಯಾಟ್ ಎತ್ತಿ ತೋಳಗಲಿಸಿ ಸಂಭ್ರಮಿಸಿದರು. ತಮ್ಮ ಕೊರಳಲ್ಲಿದ್ದ ಲಾಕೆಟ್ ಚುಂಬಿಸಿದರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಮಿಂಚಿನ ಸಂಚಲನ ಮೂಡಿತು. ಎಂಟನೇ ಓವರ್‌ನಲ್ಲಿ ಡೀಪ್ ಮಿಡ್ ವಿಕೆಟ್ ಫೀಲ್ಡರ್ ಇಬ್ರಾಹಿಂ ಜದ್ರಾನ್ ಅವರು ವಿರಾಟ್ ಕೊಹ್ಲಿ ಕ್ಯಾಚ್ ಕೈಚೆಲ್ಲಿದ್ದು ವರದಾನವಾಯಿತು.

ಆದರೆ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಪಾಕಿಸ್ತಾನ ಹಾಗೂ ಶ್ರೀಲಂಕಾ ವಿರುದ್ಧ ಸೋತಿರುವ ಭಾರತ ತಂಡವು ಫೈನಲ್ ಪ್ರವೇಶಿಸುವ ಅವಕಾಶ ಕಳೆದುಕೊಂಡಿತು. ಜಿದ್ದಾಜಿದ್ದಿಯಾಗಿದ್ದ ಈ ಪಂದ್ಯದಲ್ಲಿ ವಿರಾಟ್ ಶತಕದಿಂದಾಗಿ ಭಾರತ ಪಾಳೆಯದಲ್ಲಿ ಸಂಭ್ರಮ ಗರಿಗೆದರಿತು. ಮೊದಲು ಬ್ಯಾಟಿಂಗ್ ಮಾಡಿದ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 212 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 111 ರನ್ ಗಳಿಸಿತು.

ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ರೋಹಿತ್ ಶರ್ಮಾ ವಿಶ್ರಾಂತಿ ಪಡೆದಿದ್ದರಿಂದ ನಾಯಕತ್ವ ವಹಿಸಿದ್ದ ಕೆ.ಎಲ್. ರಾಹುಲ್ (62; 41ಎ) ಮತ್ತು ವಿರಾಟ್ ಮೊದಲ ವಿಕೆಟ್ ಜೊತೆಯಾಟದಲ್ಲಿ 119 ರನ್ ಗಳಿಸಿದರು. ಇಬ್ರಾಹಿಂ ಜದ್ರಾನ್ (ಔಟಾಗದೆ 64) ಅರ್ಧಶತಕ ಹೊಡೆದರು. ಭಾರತದ ಭುವನೇಶ್ವರ್ ಕುಮಾರ್ ಐದು ವಿಕೆಟ್ ಗಳಿಸಿದರು.

ಬುಧವಾರ ನಡೆದಿದ್ದ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅಮೋಘ ಬೌಲಿಂಗ್ ಮಾಡಿದ್ದ ಅಫ್ಗನ್ ಬೌಲರ್‌ಗಳು ಇಲ್ಲಿ ಮಂಕಾದರು.

ಟಿ20 ಕ್ರಿಕೆಟ್ ಸಾಧನೆ	
ಪಂದ್ಯ	104
ರನ್	3584
ಶ್ರೇಷ್ಠ	122
ಶತಕ	1
ಅರ್ಧಶತಕ	32
ಸ್ಟ್ರೈಕ್‌ರೇಟ್	138.38

ಶತಕ ಸಾಧನೆ

ಮಾದರಿ	ಪಂದ್ಯ	ಶತಕ
ಟೆಸ್ಟ್	102	27
ಏಕದಿನ	262	43
ಟಿ20	104	1
ಐಪಿಎಲ್	223	5



ಶತಕ ಗಳಿಸಿದ ವಿರಾಟ್ ಕೊಹ್ಲಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ 2ಕ್ಕೆ 212 (20 ಓವರ್‌ಗಳಲ್ಲಿ)

ರಾಹುಲ್ ಸಿ ನಜಿಬುಲ್ಲಾ ಬಿ ಫರೀದ್ 62 (41ಎ, 4X6, 6X2), ಕೊಹ್ಲಿ ಔಟಾಗದೆ 122 (61ಎ, 4X12, 6X6), ಸೂರ್ಯಕುಮಾರ್ ಬಿ ಫರೀದ್ 6 (2ಎ, 6X1), ಪಂತ್ ಔಟಾಗದೆ 20 (16ಎ, 4X3)

ಇತರೆ: 2 (ವೈಡ್ 2)

ವಿಕೆಟ್ ಪತನ: 1–119 (ರಾಹುಲ್; 12.4), 2–125 (ಸೂರ್ಯಕುಮಾರ್ ಯಾದವ್ 12.6)

ಬೌಲಿಂಗ್: ಫಜಲ್‌ಹಕ್ ಫಾರೂಕಿ 4–0–51–0, ಮುಜೀಬ್ ಉರ್ ರೆಹಮಾನ್ 4–0–29–0, ಫರೀದ್ ಅಹಮದ್ 4–0–57–2, ರಶೀದ್ ಖಾನ್ 4–0–33–0, ನಬಿ 3–0–34–0, ಅಜ್ಮತ್ ಉಲ್ಲಾ 1–0–8–0

ಅಫ್ಗಾನಿಸ್ತಾನ 8ಕ್ಕೆ 111 (20 ಓವರ್‌ಗಳಲ್ಲಿ)

ಹಜ್ರತುಲ್ಲಾ ಎಲ್‌ಬಿಡಬ್ಲ್ಯು ಬಿ ಭುವನೇಶ್ವರ್ 0 (4 ಎ), ರಹಮಾನುಲ್ಲಾ ಬಿ ಭುವನೇಶ್ವರ್ 0 (1 ಎ), ಇಬ್ರಾಹಿಂ ಔಟಾಗದೆ 64 (59 ಎ., 4X4, 6X2), ಕರೀಂ ಸಿ ಕೊಹ್ಲಿ ಬಿ ಭುವನೇಶ್ವರ್ 2 (4 ಎ), ನಜಿಬುಲ್ಲಾ ಬಿ ಭುವನೇಶ್ವರ್ 0 (2 ಎ), ನಬಿ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 7 (7 ಎ., 4X1), ಅಜ್ಮತ್ ಉಲ್ಲಾ ಸಿ ಕಾರ್ತಿಕ್ ಬಿ ಭುವನೇಶ್ವರ್ 1 (6ಎ), ರಶೀದ್ ಸಿ ಪಟೇಲ್ ಬಿ ಹೂಡಾ 15 (19 ಎ., 4X2), ಮುಜೀಬ್ ಬಿ ಅಶ್ವಿನ್ 18 (13 ಎ., 4X2, 6X1), ಫರೀದ್ ಔಟಾಗದೆ 1 (5 ಎ)

ಇತರೆ: 3 (ವೈಡ್ 3)

ವಿಕೆಟ್ ಪತನ: 1–0 (ಹಜ್ರತುಲ್ಲಾ; 0.4), 2–1 (ರಹಮಾನುಲ್ಲಾ ಗುರ್ಬಾಜ್; 0.6), 3–9 (ಕರೀಂ ಜನತ್; 2.4), 4–9 (ನಜಿಬುಲ್ಲಾ ಜದ್ರಾನ್; 2.6), 5–20 (ಮೊಹಮ್ಮದ್ ನಬಿ; 5.5), 6–21 (ಅಜ್ಮತ್‌ಉಲ್ಲಾ ಒಮರ್‌ಜೈ; 6.5), 7–54 (ರಶೀದ್ ಖಾನ್; 13.1), 8–87 (ಮುಜೀಬ್ ಉರ್ ರೆಹಮಾನ್; 17.4)

ಬೌಲಿಂಗ್: ಭುವನೇಶ್ವರ್ ಕುಮಾರ್ 4–1–4–5, ದೀಪಕ್ ಚಾಹರ್ 4–0–28–0, ಅರ್ಷದೀಪ್ ಸಿಂಗ್ 2–0–7–1, ಅಕ್ಷರ್ ಪಟೇಲ್ 4–0–24–0, ಆರ್. ಅಶ್ವಿನ್ 4–0–27–1, ದೀಪಕ್ ಹೂಡಾ 1–0–3–1, ದಿನೇಶ್ ಕಾರ್ತಿಕ್ 1–0–18–0

ಇಂದಿನ ಪಂದ್ಯ: ಪಾಕಿಸ್ತಾನ–ಶ್ರೀಲಂಕಾ (ಆರಂಭ: ರಾತ್ರಿ 7.30)

ಫಲಿತಾಂಶ: ಭಾರತಕ್ಕೆ 101 ರನ್ ಗೆಲುವು

ಸೂಪರ್ 4 ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್	ರನ್‌ರೇಟ್
ಶ್ರೀಲಂಕಾ	2	2	0	4	0.351
ಪಾಕಿಸ್ತಾನ	2	2	0	4	0.241
ಭಾರತ	3	1	2	2	1.607
ಅಫ್ಗಾನಿಸ್ತಾನ	3	0	3	2	-2.006



ಅಫ್ಗಾನಿಸ್ತಾನದ ಬೌಲರ್ ಫರೀದ್ ಅಹಮದ್ ಹಾಗೂ ಪಾಕಿಸ್ತಾನ ಬ್ಯಾಟರ್ ಆಸಿಫ್ ಅಲಿ ನಡುವಿನ ವಾಗ್ವಾದ ತಾರಕಕ್ಕೇರಿದ ಕ್ಷಣ –ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನ–ಪಾಕ್ ಅಭಿಮಾನಿಗಳ ಘರ್ಷಣೆ

ದುಬೈ: ಬುಧವಾರ ರಾತ್ರಿ ಶಾರ್ಜಾದಲ್ಲಿ ನಡೆದ ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ನಡುವಿನ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದ ಬಳಿಕ ಅಭಿಮಾನಿಗಳ ಘರ್ಷಣೆ ಜರುಗಿತು.

ಅಫ್ಗನ್ ತಂಡದ ಅಭಿಮಾನಿಗಳು ಕುರ್ಚಿಗಳನ್ನು ಮುರಿದು ಪಾಕಿಸ್ತಾನ ಬೆಂಬಲಿಗರ ಕಡೆಗೆ ಬೀಸಿ ಎಸೆದ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಈ ಘಟನೆಯನ್ನು ಖಂಡಿಸಿರುವ ಪಾಕ್ ಮಾಜಿ ಕ್ರಿಕೆಟಿಗ ಶೋಯಬ್ ಅಖ್ತರ್, 'ಅಫ್ಗಾನಿಸ್ತಾನದ ಅಭಿಮಾನಿಗಳು ಏನು ಮಾಡುತ್ತಿದ್ದಾರೆ ನೋಡಿ. ಈ ಹಿಂದೆ ಹಲವು ಸಂದರ್ಭಗಳಲ್ಲಿ ಮಾಡಿದ್ದನ್ನೇ ಈಗಲೂ ಮಾಡುತ್ತಿದ್ದಾರೆ. ಇಂದೊಂದು ಕ್ರಿಕೆಟ್ ಪಂದ್ಯ, ಕ್ರೀಡಾಸ್ಫೂರ್ತಿಯಿಂದ ನಡೆದುಕೊಳ್ಳಬೇಕಿತ್ತು' ಎಂದು ವಿಡಿಯೊ ಸಮೇತ ಟ್ವೀಟ್ ಮಾಡಿದ್ದಾರೆ. ಅದನ್ನು ಅಫ್ಗನ್ ಕ್ರಿಕೆಟ್ ಮಂಡಳಿ ಮಾಜಿ ಸಿ.ಇ.ಒ ಶಫೀಕ್ ಸ್ಥಾನಿಕ್‌ಝಾಯ್ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಅಖ್ತರ್ ಟ್ವೀಟ್‌ಗೆ ಖಾರವಾಗಿ ಪ್ರತಿಕ್ರಿಯಿಸಿರುವ ಶಫೀಕ್, 'ಅಭಿಮಾನಿಗಳ ಭಾವನೆಗಳನ್ನು ಯಾರೂ ನಿಯಂತ್ರಿಸಲು ಸಾಧ್ಯವಿಲ್ಲ. ಅಂತಹ ಘಟನೆಯ ಬಗ್ಗೆ ಮಾತನಾಡುವಾಗ ಇಡೀ ರಾಷ್ಟ್ರವನ್ನು ತರಬಾರದು. ಇಂತಹ ಹಲವು ಘಟನೆಗಳು ಕ್ರಿಕೆಟ್‌ನಲ್ಲಿ ಈ ಹಿಂದೆಯೂ ನಡೆದಿವೆ, ನೀವು ಕಬೀರ್ ಖಾನ್, ಇಂಜಮಾಮ್ ಭಾಯ್ ಮತ್ತು ರಶೀದ್ ಲತೀಫ್ ಅವರನ್ನು ಕೇಳಿ. ಮುಂದಿನ ಬಾರಿ ಇಂತಹ ವಿಷಯಗಳಿಗೆ ದೇಶವನ್ನು ಎಳೆದುತರಬೇಡಿ' ಎಂದಿದ್ದಾರೆ.

ಈ ಪಂದ್ಯದ ಅಂತಿಮ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿದ ನಸೀಮ್ ಶಾ ಪಾಕಿಸ್ತಾನಕ್ಕೆ ಗೆಲುವಿನ ಕಾಣಿಕೆ ನೀಡಿದ್ದರು.

ಆಸಿಫ್–ಫರೀದ್ ಜಟಾಪಟಿ: ಪಂದ್ಯದ ಕೊನೆಯ ಹಂತದಲ್ಲಿ ಪಾಕಿಸ್ತಾನದ ವಿಕೆಟ್‌ಗಳು ಪಟಪಟನೆ ಉರುಳಿದವು. ಈ ಸಂದರ್ಭದಲ್ಲಿ ಪಾಕ್ ತಂಡದ ಆಸಿಫ್ ಅಲಿ ವಿಕೆಟ್ ಪಡೆದ ಫರೀದ್ ಸಂಭ್ರಮಿಸಿದರು. ಆಗ ಆಸಿಫ್ ಮತ್ತು ಫರೀದ್ ನಡುವೆ ಮಾತಿನ ಚಕಮಕಿ ನಡೆಯಿತು. ಕೈಕೈ ಮಿಲಾಯಿಸುವ ಹಂತಕ್ಕೂ ಹೋಗಿತ್ತು. ಅಂಪೈರ್‌ಗಳು ಪರಿಸ್ಥಿತಿ ತಿಳಿಗೊಳಿಸಿದರು.

ದುಲೀಪ್ ಟ್ರೋಫಿ: ಪೃಥ್ವಿ ಶಾ ಅರ್ಧಶತಕ

ಚೆನ್ನೈ: ಪೃಥ್ವಿ ಶಾ (ಬ್ಯಾಟಿಂಗ್ 61) ಅವರ ಅರ್ಧಶತಕದ ನೆರವಿನಿಂದ ಪಶ್ಚಿಮ ವಲಯ ತಂಡ ದುಲೀಪ್ ಟ್ರೋಫಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಈಶಾನ್ಯ ವಲಯದ ವಿರುದ್ಧ ಉತ್ತಮ ಆರಂಭ ಪಡೆಯಿತು.

ಮೊದಲ ದಿನದಾಟ ಮಳೆಯಿಂದ ಬೇಗನೇ ಕೊನೆಗೊಂಡಾಗ ಪಶ್ಚಿಮ ವಲಯ 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 116 ರನ್ ಗಳಿಸಿದೆ.

ಇನ್ನೊಂದು ಪಂದ್ಯದಲ್ಲಿ ಪೂರ್ವ ವಲಯ, ಉತ್ತರ ವಲಯ ವಿರುದ್ಧ 54 ಓವರ್‌ಗಳಲ್ಲಿ 3 ಕ್ಕೆ 179 ರನ್ ಪೇರಿಸಿದೆ.

ಟೆನಿಸ್: ಮ್ಯಾರಥಾನ್ ಹೋರಾಟದಲ್ಲಿ ಗೆದ್ದ ಸ್ಪೇನ್ ಆಟಗಾರ

ಸೆಮಿಫೈನಲ್‌ಗೆ ಅಲ್ಕರಾಜ್, ಟೈಫೊ

ನ್ಯೂಯಾರ್ಕ್ (ಎಎಫ್‌ಪಿ/ಎಪಿ): ಬರೋಬ್ಬರಿ ಐದು ಗಂಟೆ 15 ನಿಮಿಷಗಳ ಸೆಣಸಾಟದ ಬಳಿಕ ಗೆಲುವು ಒಲಿಸಿಕೊಂಡು ಸ್ಪೇನ್‌ನ ಯುವ ಆಟಗಾರ ಕಾರ್ಲೋಸ್ ಅಲ್ಕರಾಜ್, ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.


ಬುಧವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಅವರು 6-3, 6-7 (7/9), 6-7 (0/7), 7-5, 6-3 ರಲ್ಲಿ ಇಟಲಿಯ ಯಾನಿಕ್ ಸಿನೆರ್ ವಿರುದ್ಧ ಗೆದ್ದರು.

ಐದು ಸೆಟ್‌ಗಳ ಹೋರಾಟ ಕೊನೆಗೊಂಡಾಗ ಸಮಯ ಮಧ್ಯರಾತ್ರಿ 2.50 ಗಂಟೆ (ಸ್ಥಳೀಯ ಕಾಲಮಾನ) ಆಗಿತ್ತು. ಅಮೆರಿಕ ಓಪನ್‌ನ 141 ವರ್ಷಗಳ ಇತಿಹಾಸದಲ್ಲಿ ಪಂದ್ಯವೊಂದು ಇಷ್ಟು ತಡವಾಗಿ ಮುಕ್ತಾಯಗೊಂಡದ್ದು ಇದೇ ಮೊದಲು. ಮಧ್ಯರಾತ್ರಿ 2.26ರ ವೇಳೆಗೆ ಪಂದ್ಯ ಪೂರ್ಣಗೊಂಡದ್ದು ಇದುವರೆಗಿನ ದಾಖಲೆಯಾಗಿತ್ತು.

ಎರಡನೇ ಸುದೀರ್ಘ ಪಂದ್ಯ: ಅಮೆರಿಕ ಓಪನ್‌ನಲ್ಲಿ ನಡೆದ ಎರಡನೇ ಸುದೀರ್ಘ ಪಂದ್ಯ ಇದಾಗಿದೆ. ಇಲ್ಲಿ ಅತ್ಯಂತ ದೀರ್ಘ ಅವಧಿಯ ಪಂದ್ಯ ಆಡಿದ ದಾಖಲೆ ಸ್ಟೀಫನ್ ಎಡ್ಬರ್ಗ್ ಮತ್ತು ಮೈಕಲ್ ಚಾಂಗ್ ಅವರ ಹೆಸರಿನಲ್ಲಿದೆ. 1992 ಟೂರ್ನಿಯಲ್ಲಿ ಇವರು 5 ಗಂಟೆ 26 ನಿಮಿಷ ಆಡಿದ್ದರು.

ಮೊದಲ ಸೆಟ್ 6-3 ರಲ್ಲಿ ಗೆದ್ದ ಅಲ್ಕರಾಜ್ ಉತ್ತಮ ಆರಂಭ ಪಡೆದಿದ್ದರು. ಆದರೆ ತಿರುಗೇಟು ನೀಡಿದ ಸಿನರ್, ಎರಡು ಮತ್ತು ಮೂರನೇ ಸೆಟ್‌ಗಳನ್ನು ಟೈಬ್ರೇಕರ್‌ನಲ್ಲಿ ತಮ್ಮದಾಗಿಸಿಕೊಂಡರು.

ನಾಲ್ಕನೇ ಸೆಟ್‌ನಲ್ಲಿ ಅಲ್ಕರಾಜ್ 4-5 ರಲ್ಲಿ ಹಿನ್ನಡೆಯಲ್ಲಿದ್ದರು. ಆ ಬಳಿಕ ಅವರಿಂದ ಅಮೋಘ ಆಟ ಮೂಡಿಬಂತು. ಟೈಬ್ರೇಕರ್‌ಗೆ ಸಾಗಿದ ನಾಲ್ಕನೇ ಸೆಟ್ ಗೆದ್ದು 2-2 ರಲ್ಲಿ ಸಮಬಲ ಸಾಧಿಸಿದರು. ಐದನೇ ಸೆಟ್‌ನಲ್ಲಿ ಎರಡು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಸ್ಮರಣೀಯ ಗೆಲುವು ಒಲಿಸಿಕೊಂಡರು.


ಗೆಲುವಿನ ಸಂಭ್ರಮದಲ್ಲಿ ಕಾರ್ಲೋಸ್ ಅಲ್ಕರಾಜ್ —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 5 ಗಂಟೆ 15 ನಿಮಿಷ ನಡೆದ ಹಣಾಹಣಿ
- ಅಮೆರಿಕ ಓಪನ್‌ನಲ್ಲಿ ಎರಡನೇ ಸುದೀರ್ಘ ಪಂದ್ಯ
- ಮಧ್ಯರಾತ್ರಿ 2.50ರ ವರೆಗೆ ನಡೆದ ಹೋರಾಟ

ನಾಲ್ಕನೇ ಸೆಟ್‌ನಲ್ಲಿ ಮ್ಯಾಚ್ ಪಾಯಿಂಟ್ ಅವಕಾಶ ಹೊಂದಿದ್ದ ಸಿನೆರ್ ಅದನ್ನು ಸದುಪಯೋಗಪಡಿಸಿಕೊಳ್ಳಲು ವಿಫಲರಾಗಿ ಆ ಬಳಿಕ ಪಂದ್ಯವನ್ನೇ ಕಳೆದುಕೊಂಡರು. 'ಈ ಸೋಲು ಕೆಲವು ಸಮಯ ನನ್ನನ್ನು ಕಾಡಲಿದೆ' ಎಂದು ಪಂದ್ಯದ ಬಳಿಕ ಅವರು ಪ್ರತಿಕ್ರಿಯಿಸಿದರು.

ಟೈಫೊ ಸಾಧನೆ: ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಫ್ರಾನ್ಸೆಸ್ ಟೈಫೊ 7-6 (3), 7-6 (0), 6-4 ರಲ್ಲಿ ಆಂಡ್ರೆ ರುಬ್ಲೆವ್ ಅವರನ್ನು ಮಣಿಸಿದರು. ಈ ಮೂಲಕ 16 ವರ್ಷಗಳ ಬಳಿಕ ಇಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದ ಅಮೆರಿಕದ ಮೊದಲ ಆಟಗಾರ ಎನಿಸಿಕೊಂಡರು. ಆ್ಯಂಡಿ ರಾಡಿಕ್ ಅವರು 2006ರಲ್ಲಿ ಕೊನೆಯದಾಗಿ ಸೆಮಿಫೈನಲ್ ಪ್ರವೇಶಿಸಿದ್ದರು.

24 ವರ್ಷದ ಟೈಫೊ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ನಾಲ್ಕರಘಟ್ಟ ಪ್ರವೇಶಿಸಿದ್ದು ಇದೇ ಮೊದಲು. ಹಿಂದಿನ ಪಂದ್ಯದಲ್ಲಿ ಅವರು 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತ ಸ್ಪೇನ್‌ನ ರಫೆಲ್ ನಡಾಲ್‌ಗೆ ಆಘಾತ ನೀಡಿದ್ದರು.

ನಾಲ್ಕರ ಘಟ್ಟಕ್ಕೆ ಸ್ವಟೆಕ್, ಸಬಲೆಂಕಾ

ಅಗ್ರ ಶ್ರೇಯಾಂಕದ ಆಟಗಾರ್ತಿ ಪೋಲೆಂಡ್‌ನ ಇಗಾ ಸ್ವಟೆಕ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಸ್ವಟೆಕ್ 6-3, 7-6 (7/4) ರಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ ಎದುರು ಗೆದ್ದರು. 21 ವರ್ಷದ ಸ್ವಟೆಕ್ ಮೊದಲ ಸೆಟ್ ಸುಲಭವಾಗಿ ಜಯಿಸಿದರೆ, ಎರಡನೇ ಸೆಟ್‌ನಲ್ಲಿ ಪ್ರತಿರೋಧ ಎದುರಿಸಿದರು. ಆದರೆ ಟೈಬ್ರೇಕರ್‌ನಲ್ಲಿ ಶಿಸ್ತಿನ ಆಟವಾಡಿ ನಾಲ್ಕರಘಟ್ಟಕ್ಕೆ ಲಗ್ಗೆಯಿಟ್ಟರು.

ಬೆಲಾರಸ್‌ನ ಅರಿನಾ ಸಬಲೆಂಕಾ 6-1, 7-6 (7/4) ರಲ್ಲಿ ಜೆಕ್ ರಿಪಬ್ಲಿಕ್‌ನ ಕರೋಲಿನಾ ಪಿಸ್ಕೊವಾ ಅವರನ್ನು ಮಣಿಸಿದರು.

ಈಜು: ಲಿನೇಶಾ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಕರ್ನಾಟಕದ ಎ.ಕೆ.ಲಿನೇಶಾ ಅವರು ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಗುವಾಹಟಿಯ ಡಾ. ಜಾಕೀರ್ ಹುಸೇನ್ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ನಾಲ್ಕನೇ ದಿನವಾದ ಗುರುವಾರ ಅವರು 2 ನಿಮಿಷ 39.38 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಪಂಜಾಬ್‌ನ ಚಾಹತ್ ಅರೋರಾ (2ನಿ. 42.71 ಸೆ.) ಬೆಳ್ಳಿ ಹಾಗೂ ಕರ್ನಾಟಕದ ಎಸ್.ಲಕ್ಷ್ಯಾ (2ನಿ. 43.87 ಸೆ.) ಕಂಚು ಗೆದ್ದುಕೊಂಡರು.


ಎ.ಕೆ.ಲಿನೇಶಾ

ಉತ್ತಮ ಪ್ರದರ್ಶನ ಮುಂದುವರಿಸಿದ ಎಸ್.ಶಿವ ಪುರುಷರ 400 ಮೀ. ಮೆಡ್ಲೆಯಲ್ಲಿ (4 ನಿ. 31.71 ಸೆ.) ಅಗ್ರಸ್ಥಾನ ಗಳಿಸಿದರು.

ತನಿಷಿ ಗುಪ್ತಾ ಅವರು ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ (29.03 ಸೆ.) ಮೂರನೇ ಸ್ಥಾನ ಪಡೆದರು. ಹರಿಯಾಣದ ದಿವ್ಯಾ ಸತಿಜಾ (28.57 ಸೆ.) ಮತ್ತು ಮಹಾರಾಷ್ಟ್ರದ ನಂದಿನಿ ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದುಕೊಂಡರು.

ಮಹಿಳೆಯರ 4X100 ಮೀ. ಮೆಡ್ಲೆ ರಿಲೇಯಲ್ಲಿ ಕರ್ನಾಟಕ ತಂಡ ಅಗ್ರಸ್ಥಾನ ಗಳಿಸಿತು. ಆರುಷಿ ಅಗರವಾಲ್, ತನಿಷಿ ಗುಪ್ತಾ, ಮಾನವಿ ವರ್ಮಾ ಮತ್ತು ಎಸ್.ರುಜುಲಾ ಅವರನ್ನೊಳಗೊಂಡ ತಂಡ 4 ನಿ. 33.48 ಸೆ.ಗಳಲ್ಲಿ ಗುರಿ ತಲುಪಿತು. ಬಂಗಾಳ ಎರಡನೇ ಸ್ಥಾನ ಹಾಗೂ ಮಹಾರಾಷ್ಟ್ರ ಮೂರನೇ ಸ್ಥಾನ ಪಡೆಯಿತು.

ಮೂರು ದಿನಗಳ ಸ್ಪರ್ಧೆಯ ಬಳಿಕ ಕರ್ನಾಟಕ 9 ಚಿನ್ನ, 3 ಬೆಳ್ಳಿ ಮತ್ತು 5 ಕಂಚಿನ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.


ಪ್ರಣವಿ ಅರಸ್

ಗಾಲ್ಫ್: ಪ್ರಣವಿ ಚಾಂಪಿಯನ್

ಹೈದರಾಬಾದ್ (ಪಿಟಿಐ): ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿರುವ ಪ್ರಣವಿ ಅರಸ್ ಅವರು ಗುರುವಾರ ಇಲ್ಲಿ ಕೊನೆಗೊಂಡ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ 12ನೇ ಲೆಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಮೂರು ಸುತ್ತುಗಳಲ್ಲಿ ಒಟ್ಟು 208 ಸ್ಕೋರ್‌ಗಳೊಂದಿಗೆ ಪ್ರಣವಿ ಅಗ್ರಸ್ಥಾನ ಪಡೆದರು. ಅವರು ಕ್ರಮವಾಗಿ 68, 68, 72 ಅವಕಾಶಗಳಲ್ಲಿ ಸ್ಪರ್ಧೆ ಕೊನೆಗೊಳಿಸಿದರು. ಮೈಸೂರಿನ ಯುವ ಗಾಲ್ಫರ್‌ಗೆ 12 ಟೂರ್ನಿಗಳಲ್ಲಿ ದೊರೆತ ಐದನೇ ಗೆಲುವು ಇದು.

ಸ್ನೇಹಾ ಸಿಂಗ್ ಮತ್ತು ಅಮೆಚೂರ್ ಆಟಗಾರ್ತಿ ಕೃತಿ ಚೌಹಾಣ್ (213) ಅವರು ಜಂಟಿ ಎರಡನೇ ಸ್ಥಾನ ಪಡೆದರು.

ಗೌರಿ ಕರಾಡೆ ಮತ್ತು ಸೆಹರ್ ಅತ್ವಾಲ್ (ತಲಾ 216) ಜಂಟಿ ನಾಲ್ಕನೇ ಸ್ಥಾನದಲ್ಲಿ ಕಾಣಿಸಿಕೊಂಡರು. ನಯನಿಕಾ ಸಂಗಾ, ಹೀನಾ ಕಾಂಗ್ ಮತ್ತು ವಿಧಾತ್ರಿ ಅರಸ್ (ತಲಾ 217) ಅವರು ಜಂಟಿ ಆರನೇ ಸ್ಥಾನ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ನೇಪಾಳ ಕ್ರಿಕೆಟಿಗ ಲಮಿಚಾನೆ ಮೇಲೆ ಆರೋಪ

ಕಠ್ಮಂಡು (ಪಿಟಿಐ): ನೇಪಾಳ ಕ್ರಿಕೆಟ್ ತಂಡದ ನಾಯಕ ಸಂದೀಪ್ ಲಮಿಚಾನೆ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದಾರೆಂದು ಪೊಲೀಸರಿಗೆ ದೂರು ನೀಡಲಾಗಿದೆ.


ಸಂದೀಪ್

ಸಂತ್ರಸ್ತ ಬಾಲಕಿಯು (17 ವರ್ಷ) ಗೋಶಾಲಾ ಮೆಟ್ರೊಪಾಲಿಟನ್ ಪೊಲೀಸರಿಗೆ ದೂರು ನೀಡಿದ್ದಾಳೆ. ಸಂದೀಪ್ ಮೇಲೆ ಎಫ್‌ಐಆರ್ ದಾಖಲಾಗಿದೆ.

ಮೂರು ವಾರಗಳ ಹಿಂದೆ ಈ ಘಟನೆ ನಡೆದಿದೆ. ತನ್ನನ್ನು ಸಂದೀಪ್ ಕಠ್ಮಂಡುವಿನ ವಿವಿಧ ತಾಣಗಳಲ್ಲಿ ಸುತ್ತಾಡಿ ನಂತರ ಹೋಟೆಲ್‌ಗೆ ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದರೆಂದು ಬಾಲಕಿಯು ದೂರಿನಲ್ಲಿ ಉಲ್ಲೇಖಿಸಿದ್ದಾಳೆ.

'ಸಿಸಿಟಿವಿ ದಾಖಲೆಗಳನ್ನು ಪರಿಶೀಲಿಸುತ್ತಿದ್ದೇವೆ. ಸಾಕ್ಷ್ಯಗಳನ್ನು ಕಲೆಹಾಕಲಾಗುತ್ತಿದೆ. ಸಮಗ್ರ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಸದ್ಯ ಸಂದೀಪ್ ಕೆರಿಬಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುತ್ತಿದ್ದಾರೆ. 2018ರಲ್ಲಿ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಆಯ್ಕೆಯಾಗಿದ್ದರು. ಅದರೊಂದಿಗೆ ಐಪಿಎಲ್‌ನಲ್ಲಿ ಅವಕಾಶ ಪಡೆದ ನೇಪಾಳದ ಮೊದಲ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಗಿತ್ತು. ಇತ್ತೀಚೆಗೆ ಅವರನ್ನು ನೇಪಾಳ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿತ್ತು.

ಮಳೆ: ಮೊದಲ ದಿನದಾಟ ರದ್ದು

ಹುಬ್ಬಳ್ಳಿ: ಮೂರು ವರ್ಷಗಳ ನಂತರ ಇಲ್ಲಿ ಆಯೋಜನೆಗೊಂಡಿರುವ ಕ್ರಿಕೆಟ್ ಪಂದ್ಯವನ್ನು ಕಣ್ತುಂಬಿಕೊಳ್ಳಲು ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣಕ್ಕೆ ಬಂದಿದ್ದ ಅಭಿಮಾನಿಗಳಿಗೆ ನಿರಾಶೆಯಾಯಿತು.

ಬುಧವಾರ ರಾತ್ರಿ ಹಾಗೂ ಗುರುವಾರ ನಸುಕಿನಲ್ಲಿ ಮಳೆ ಸುರಿದ ಕಾರಣ ಮೈದಾನದ ಹೊರಾಂಗಣವು ತೇವಗೊಂಡಿದ್ದರಿಂದ ಭಾರತ ಎ ಹಾಗೂ ನ್ಯೂಜಿಲೆಂಡ್ ಎ ತಂಡಗಳ ನಡುವಣ 'ಟೆಸ್ಟ್' ಪಂದ್ಯದ ಮೊದಲ ದಿನದಾಟ ನಡೆಯಲಿಲ್ಲ. ಟಾಸ್ ಕೂಡ ಹಾಕಲಿಲ್ಲ.

ಅಂಪೈರ್‌ಗಳು ನಾಲ್ಕು ಸಲ ಮೈದಾನವನ್ನು ಪರಿಶೀಲಿಸಿದರು. ಕ್ರೀಡಾಂಗಣದ ಒಂದು ಭಾಗದಲ್ಲಿರುವ (ರೈಲು ಟ್ರ್ಯಾಕ್ ದಿಕ್ಕು) ಎರಡು ಕಡೆ ನೀರು ಶೇಖರಗೊಂಡಿತ್ತು. ಕ್ರೀಡಾಂಗಣ ಸಿಬ್ಬಂದಿಯು ಈ ತೇವವನ್ನು ಒಣಗಿಸಲು ಬಹಳಷ್ಟು ಶ್ರಮಿಸಿದರು. ಆದರೆ ಫಲ ಸಿಗಲಿಲ್ಲ. ಹೀಗಾಗಿ ಮೊದಲ ದಿನದಾಟವನ್ನು ರದ್ದುಗೊಳಿಸಿದರು.

ಫುಟ್‌ಬಾಲ್: ಎಂಇಜಿಗೆ ಗೆಲುವು

ಬೆಂಗಳೂರು: ಎಂಇಜಿ ಮತ್ತು ಸೆಂಟರ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ರೋಚಕ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಎಂಇಜಿ ತಂಡ 1-0 ಗೋಲಿನಿಂದ ಎಡಿಇ ಎಫ್‌ಸಿ ತಂಡವನ್ನು ಮಣಿಸಿತು.

ಪ್ರಬಲ ಪೈಪೋಟಿ ನಡೆದ ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. ಎಂ.ಅಮಲ್ ಅವರು 78ನೇ ನಿಮಿಷದಲ್ಲಿ ಎಂಇಜಿಗೆ ಗೆಲುವಿನ ಗೋಲು ತಂದಿತ್ತರು.

ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ ವೀರೋಚಿತ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡ ಫಿಬಾ 18 ವರ್ಷದೊಳಗಿನ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ನ್ಯೂಜಿಲೆಂಡ್ ಎದುರು ವೀರೋಚಿತ ಸೋಲು ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ 'ಎ' ಡಿವಿಷನ್‌ನ ಪಂದ್ಯದಲ್ಲಿ ಭಾರತಕ್ಕೆ 63-66 ರಲ್ಲಿ ನಿರಾಸೆ ಎದುರಾಯಿತು. ಈ ಟೂರ್ನಿಯಲ್ಲಿ ಆತಿಥೇಯರಿಗೆ ಎದುರಾದ ಸತತ ಮೂರನೇ ಸೋಲು ಇದಾಗಿದೆ.

ಮೊದಲ ಎರಡು ಪಂದ್ಯಗಳಲ್ಲಿ ಎದುರಾಳಿಗಳಿಗೆ ಹೆಚ್ಚಿನ ಪ್ರತಿರೋಧ ಒಡ್ಡದೆ ತಲೆಬಾಗಿದ್ದ ಭಾರತ ತಂಡ, ಗುರುವಾರ ಕೆಚ್ಚೆದೆಯಿಂದ ಹೋರಾಟ ನಡೆಸಿತು. ಆದರೆ ಕೇವಲ ಮೂರು ಪಾಯಿಂಟ್‌ಗಳಿಂದ ಹಿಂದೆ ಬಿದ್ದಿತು.


ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ಆಟಗಾರ್ತಿಯರ ನಡುವಿನ ಪೈಪೋಟಿ ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ವಿರಾಮದ ವೇಳೆಗೆ ನ್ಯೂಜಿಲೆಂಡ್ 13 ಪಾಯಿಂಟ್‌ಗಳಿಂದ (36-23) ಮುನ್ನಡೆಯಲ್ಲಿತ್ತು. ಕೊನೆಯ ಎರಡು ಕ್ವಾರ್ಟರ್‌ಗಳಲ್ಲಿ ಭಾರತ ಮರುಹೋರಾಟ ನಡೆಸಿತಾದರೂ ಗೆಲುವು ದಕ್ಕಲಿಲ್ಲ. ಅರಿಯಾ ಕೌಲೆ (16) ಮತ್ತು ಫ್ಲಾರೆನ್ಸ್ ಡಲೊ (12) ಅವರು ನ್ಯೂಜಿಲೆಂಡ್ ಪರ ಮಿಂಚಿದರು.

ಭಾರತದ ಮನ್‌ಮೀತ್ ಕೌರ್ 21 ಪಾಯಿಂಟ್ ಗಳಿಸಿ ಸೋಲಿನ ನಡುವೆಯೂ ಗಮನ ಸೆಳೆದರು. ಸತ್ಯಾ ಕೃಷ್ಣಮೂರ್ತಿ (15) ಮತ್ತು ದೀಪ್ತಿ ರಾಜಾ (14) ಅವರೂ ಉತ್ತಮ ಪ್ರದರ್ಶನ ನೀಡಿದರು.

ಚೀನಾ ತೈಪೆ 81-16 ರಲ್ಲಿ ಇಂಡೋನೇಷ್ಯಾ ತಂಡವನ್ನು ಮಣಿಸಿತು. ಯು ವೆನ್ ಸಿಯೊ ಅವರು 18 ಪಾಯಿಂಟ್ ಗಳಿಸಿ ಚೀನಾ ತೈಪೆಯ ಭಾರಿ ಅಂತರದ ಗೆಲುವಿಗೆ ಕಾರಣರಾದರು. ಆಸ್ಟ್ರೇಲಿಯಾ ತಂಡ 96-66 ರಲ್ಲಿ ಕೊರಿಯಾ ಎದುರು ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಜಪಾನ್ 76-59 ಪಾಯಿಂಟ್‌ಗಳಿಂದ ಚೀನಾ ತಂಡವನ್ನು ಮಣಿಸಿತು.